ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು

(ಗಂಗಾವತಿ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳನ್ನು ಅನುಲಕ್ಷಿಸಿ)

ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಸಂಪ್ರಬಂಧ

ಸಂಶೋಧಕರು
ಶ್ರೀಮತಿ ದೊಡ್ಡ ಬಸಮ್ಮ

ಮಾರ್ಗದರ್ಶಕರು
ಡಾ. ಗಂಗಾಧರ ದೈವಜ್ಞ
ಹಿರಿಯ ಶ್ರೇಣಿಯ ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭ - ೦೮

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು

(ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳನ್ನು ಅನುಲಕ್ಷಿಸಿ)

[ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ]

ಸಂಶೋಧಕಿ
ಶ್ರೀಮತಿ ದೊಡ್ಡಬಸಮ್ಮ

ಮಾರ್ಗದರ್ಶಕರು
ಡಾ. ಗಂಗಾಧರ ದೈವಜ್ಞ
ಹಿರಿಯ ಶ್ರೇಣಿಯ ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ ೫೮೩ ೨೭೬
೨೦೦೭-೦೮

ಮಾರ್ಗದರ್ಶಕರ ಪ್ರಮಾಣ ಪತ್ರ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು (ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಶ್ರೀಮತಿ ದೊಡ್ಡಬಸಮ್ಮ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಸುತ್ತೇನೆ.

ಸ್ಥಳ : ಕ.ವಿ.ವಿ. ಹಂಪಿ–ವಿದ್ಯಾರಣ್ಯ
ದಿನಾಂಕ : 15-10-2008.

ಡಾ. ಗಂಗಾಧರ ದೈವಜ್ಞ
ಹಿರಿಯ ಶ್ರೇಣಿ ಅಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬.

ಪ್ರಮಾಣ ಪತ್ರ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು (ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಡಾ. ಗಂಗಾಧರ ದೈವಜ್ಞ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

D. Basu

ಸ್ಥಳ : ಕ.ವಿ.ವಿ. ಹಂಪಿ–ವಿದ್ಯಾರಣ್ಯ

ದಿನಾಂಕ : 15:10:08

ಶ್ರೀಮತಿ ದೊಡ್ಡಬಸಮ್ಮ

ಸಂಶೋಧಕಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬.

ಪರಿವಿಡಿ

ಅಧ್ಯಾಯ ೧

೧. ಪ್ರಸ್ತಾವನೆ

೧.೧ ಪೀಠಿಕೆ

೧.೨ ಅಧ್ಯಯನ ಉದ್ದೇಶಗಳು

೧.೩ ಅಧ್ಯಯನ ವ್ಯಾಪ್ತಿ

೧.೪ ಅಧ್ಯಯನದ ವಿಧಾನಗಳು

೧.೫ ಅಧ್ಯಯನದ ಮಹತ್ವ

ಪೀಠಿಕೆ :

ಪ್ರಸ್ತುತ ಅಧ್ಯಾಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳನ್ನು ಚರ್ಚಿಸಲಾಗಿದೆ. ಈ ಅಧ್ಯಯನವು ನಾನು ಕ್ಷೇತ್ರ ಕಾರ್ಯದಿಂದ ಪಡೆದ ಅಂಕಿ ಸಂಖ್ಯೆಗಳನ್ನು ಆಧರಿಸುತ್ತದೆ. ಶತ-ಶತಮಾನಗಳಿಂದ ಹಲವಾರು ರಂಗದಿಂದ ನಿರ್ಲಕ್ಷಿಸಲ್ಪಟ್ಟಿದ್ದ ಸಮುದಾಯಗಳಿಗೆ ಭಾರತದ ಸ್ವಾತಂತ್ರ್ಯವು ಪುನರ್‌ಜನ್ಮ ನೀಡಿತು. ಸಾಂಪ್ರದಾಯಿಕ ಭಾರತೀಯ ಸಮಾಜವು ಎಂದಿಗೂ ಸಹ ಗಣನೀಯ ಪರಿವರ್ತನೆಯನ್ನು ಬಯಸುವುದಿಲ್ಲ. ರಾಜಕೀಯ ಕ್ರಾಂತಿ, ಕೈಗಾರಿಕಾ ಕ್ರಾಂತಿ, ನಗರೀಕರಣ ವ್ಯವಸ್ಥೆಗಳು ಇಂದು ವಿಶ್ವದಲ್ಲಿ ಶರವೇಗದಲ್ಲಿ ಮುನ್ನುಗ್ಗುತ್ತಿವೆ. ಆದರೆ ಭಾರತೀಯರು ಇದಕ್ಕೆ ಹೊರತಾಗಿಲ್ಲ.

ನಾಲ್ಕು ಪ್ರಕಾರದ ವರ್ಣ ವ್ಯವಸ್ಥೆಯಲ್ಲಿ ಕೊನೆಯ ಸ್ಥಾನವನ್ನು ಪಡೆದ ಶೂದ್ರರು ಮತ್ತು ಇನ್ನಿತರ ಕೆಳ ವರ್ಗದವರು ಶತ ಶತಮಾನಗಳಿಂದ ಅನ್ಯಾಯ ಮತ್ತು ವಂಚನೆಗಳಿಗೆ ಒಳಗಾಗುತ್ತಾ ಬಂದಿದ್ದಾರೆ. ನಾಗರಿಕ ಸಮಾಜದಿಂದ ದೂರದಲ್ಲಿರುವ ಅದೆಷ್ಟೋ ಬುಡಕಟ್ಟು ಸಮುದಾಯಗಳು ತಮ್ಮ ಜೀವನವನ್ನು ಕಾಡಿನ ಮಧ್ಯೆಯೇ ರೂಪಿಸಿಕೊಂಡಿರುವಂತಹವು. ಈ ಬುಡಕಟ್ಟುಗಳು ನಾಗರಿಕ ಸಮಾಜದೊಂದಿಗೆ ಸಂಪರ್ಕವನ್ನು ಪಡೆಯದೇ ತಮ್ಮದೇ ಆದ ಆಚಾರ-ವಿಚಾರ, ರೀತಿ-ನೀತಿ, ಆಡಳಿತ, ಸಂಸ್ಕೃತಿ ಮುಂತಾದವುಗಳನ್ನು ಮೈಗೂಡಿಸಿಕೊಂಡು ಸ್ವತಂತ್ರ್ಯ ಜೀವನವನ್ನು ನಿರ್ವಹಿಸುತ್ತಾ ಬಂದಿರುವಂತಹವು. ಇಂದಿನ ಸಂವಿಧಾನ ಮತ್ತು ಅರಣ್ಯ ನೀತಿ ಕಾಯ್ದೆಗಳು ಬುಡಕಟ್ಟುಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡಿವೆ ಎಂದು ಹೇಳಿದರೆ ತಪ್ಪಾಗಲಾರದು. ವರ್ತಮಾನದ ಆಡಳಿತ ವ್ಯವಸ್ಥೆ ಆದಿವಾಸಿ ಸಮುದಾಯಗಳನ್ನು ಒಂದು ಕಡೆ ಬದುಕಲು ಬಿಡುತ್ತಿಲ್ಲ. ವಿಶ್ವದ ವಿವಿಧ ದೇಶಗಳು ಆಡಳಿತವನ್ನು ದೇಶದ ಅಭಿವೃದ್ಧಿಗಾಗಿ ರೂಪಿಸಿಕೊಂಡಿವೆ. ಭಾರತದಲ್ಲಿ ಪಕ್ಷಗಳ ಬಲಾಬಲ ಪ್ರದರ್ಶನಕ್ಕಾಗಿಯೇ ಆಡಳಿತ ಎನ್ನುವಂತಾಗಿದೆ. ರಾಜಕೀಯ ಪಕ್ಷಗಳ ಅಧಿಕಾರದ ಲಾಲಸೆಯ ಸಂಘರ್ಷದಲ್ಲಿ ಚುನಾಯಿತ ಪ್ರತಿನಿಧಿಗಳು ಸಮರ್ಪಕವಾಗಿ ತಮ್ಮ ಹಕ್ಕನ್ನು ಚಲಾಯಿಸಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇಂದಿನ ರಾಜಕೀಯ ವ್ಯವಸ್ಥೆಯನ್ನು ಗಮನಿಸಿದರೆ ಆಡಳಿತ ನಡೆಸುತ್ತಿರುವ ಪಕ್ಷಗಳು ಇಂದು ಉತ್ತಮವಾದ ಆಡಳಿತವನ್ನು ನೀಡುತ್ತಿವೆಯೇ? ಎಂದು ಹೇಳಲಿಕ್ಕಾಗುತ್ತಿಲ್ಲ. ರಾಜಕೀಯ ಪಕ್ಷಗಳ ಮೂಲಕ ನಡೆಯುವ ಆಡಳಿತ ವ್ಯವಸ್ಥೆಯು ದೇಶದ ಪ್ರಗತಿಗೆ ಸಹಾಯಕವಾಗಿರಬೇಕೆ ವಿನಃ ದೇಶವನ್ನು ಅದೋಗತಿಗೆ ಎಳೆದು ತರುವಂತಿರಬಾರದು. ವಿಶ್ವದ ಅನೇಕ ಬಲಿಷ್ಟ

ರಾಷ್ಟ್ರಗಳು ತಮ್ಮ ದೇಶದ ಪ್ರಗತಿಯನ್ನು ಸಾಧಿಸುವುದಕ್ಕೆ ಹರಸಾಹಸ ಮಾಡುತ್ತಿವೆ. ಪ್ರಗತಿ ಸಾಧಿಸುತ್ತಿರುವ ದೇಶಗಳ ಆಡಳಿತ ಮತ್ತು ಅಭಿವೃದ್ಧಿಯನ್ನು ಮನಗಂಡು ನಮ್ಮ ದೇಶದ ಸಂವಿಧಾನವನ್ನು ಅಸ್ತಿತ್ವಕ್ಕೆ ತರಲಾಯಿತು. ಭಾರತದ ಸಂವಿಧಾನವು ಇಂಗ್ಲೆಂಡ್, ಅಮೇರಿಕ, ಸ್ವಿಟ್ಜರ್‌ಲ್ಯಾಂಡ್, ಜರ್ಮನಿ, ಜಪಾನ್, ಐರ್ಲೆಂಡ್ ಮುಂತಾದ ದೇಶಗಳ ಪ್ರಮುಖ ಅಂಶಗಳನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಭಾರತದ ಸಂವಿಧಾನ ವಿಶ್ವದ ಬೃಹತ್ ಗಾತ್ರದ ಸಂವಿಧಾನ ಎಂದು ಕರೆಯಿಸಿಕೊಂಡಿದೆ. ನಮ್ಮ ಸಂವಿಧಾನವು ಉತ್ಕೃಷ್ಟವಾಗಿ ರೂಪಗೊಂಡಿದೆ. ಭಾರತದಲ್ಲಿ ಎಲ್ಲ ಜಾತಿ, ಮತ, ಪಂಥ, ಜನಾಂಗಗಳಿಗೆ ಸಮಾನತೆಯನ್ನು ಕಲ್ಪಿಸಿದೆ ಮತ್ತು ಸಂವಿಧಾನದ ಮೂಲಕ ಭಾರತೀಯರೆಲ್ಲರ ಏಳಿಗೆಗಾಗಿ ಪ್ರಮುಖ ಪ್ರಯತ್ನವನ್ನು ಮಾಡುತ್ತಿದೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸುವುದರ ಮೂಲಕ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತವಾಗಿದೆ. ಗ್ರಾಮ ಪಂಚಾಯತಿಯಿಂದ ಲೋಕಸಭೆಯ ವರೆಗೆ ಎಲ್ಲ ವರ್ಗದ ಜನರಿಗೂ ಪ್ರಾತಿನಿಧ್ಯವನ್ನು ಕಲ್ಪಿಸಿ ಅಧಿಕಾರ ಹಿಡಿಯಲು ಅವಕಾಶ ಮಾಡಿಕೊಟ್ಟಿದೆ ಹಾಗೂ ಪ್ರತಿಯೊಂದು ಸಮುದಾಯದ ಧರ್ಮ, ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದಕ್ಕೆ ಅವಕಾಶ ಕಲ್ಪಿಸಿದೆ.

ನಮ್ಮ ಸಂವಿಧಾನದ ಮಹತ್ವದ ಕೊಡುಗೆಯೆಂದರೆ ಸ್ಥಳೀಯ ಸರ್ಕಾರಗಳ ರಚನೆ. ಸ್ಥಳೀಯ ಸರ್ಕಾರಗಳು ಆಡಳಿತದ ಅವಿಭಾಜ್ಯ ಅಂಗಗಳಾಗಿ ಕಾರ್ಯನಿರ್ವಹಿಸುತ್ತವೆ. ದೇಶದ ಅಭಿವೃದ್ಧಿಯಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ ಬಹುಮುಖ್ಯವಾದದ್ದು. ಒಂದು ದೇಶದ ಏಳು ಬೀಳು ಎನ್ನುವುದು ಪಂಚಾಯತ್ ರಾಜ್ ವ್ಯವಸ್ಥೆಯ ಮೇಲೆ ಅವಲಂಬನೆಯಾಗಿರುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ. ಪಂಚಾಯತ್ ರಾಜ್ ಗ್ರಾಮ ಮಟ್ಟದ ಅಧಿಕಾರವನ್ನು ಹೊಂದಿರುತ್ತದೆ. ಭಾರತವು ಗ್ರಾಮಗಳಿಂದ ಕೂಡಿದ ದೇಶವಾಗಿದೆ. ಒಟ್ಟು ಜನಸಂಖ್ಯೆಯ ಶೇಕಡಾ ೭೦ ಕ್ಕೂ ಅಧಿಕ ಜನರು ಗ್ರಾಮ ವಾಸಿಗಳಾಗಿದ್ದಾರೆ. ಅಂದರೆ ನಿಜವಾದ ಭಾರತ ಗ್ರಾಮದಲ್ಲಿದೆ ಎಂಬುದನ್ನು ಗಮನಿಸಬಹುದು. ವಿಶ್ವದ ಹಿರಿಯ ಅಣ್ಣನೆಂದು ಕರೆಯಿಸಿಕೊಂಡಿರುವ ಅಮೇರಿಕ ದೇಶವು ಇಂದು ಮುಂದುವರೆದಿರುವುದಕ್ಕೆ ಅಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಿಂತ ಗ್ರಾಮಗಳ ಅಭಿವೃದ್ಧಿಯು ಕಾರಣವಾಗಿದೆ. ಭಾರತ ದೇಶದಲ್ಲಿಯ ೬ ಲಕ್ಷ ಹಳ್ಳಿಗಳಿಗೂ ಅಧಿಕಾರ ತಲುಪುವಂತೆ ಮಾಡಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ೬ ದಶಕಗಳು ಗತಿಸಿದವು. ಗ್ರಾಮಗಳ ಅಭಿವೃದ್ಧಿ ಮಾತ್ರ ಸಮರ್ಪಕ ಮಟ್ಟದಲ್ಲಿ ಯಶಸ್ಸನ್ನು ಸಾಧಿಸಿಲ್ಲ. ನಮ್ಮ ದೇಶದ ಪ್ರಜಾ ಪ್ರಭುತ್ವ ವ್ಯವಸ್ಥೆಯು ಸಹ ಇಂದು ಅಭಿವೃದ್ಧಿಗೆ ಒಂದು ರೀತಿಯಲ್ಲಿ ಅಡ್ಡಿಯಾಗುತ್ತಿದೆಯೇ ಎನ್ನುವಂತೆ ಕಂಡುಬರುತ್ತಿದೆ. ಪ್ರಜಾ ಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಒಂದು ಅವಧಿಯಲ್ಲಿ ಒಂದು ಪಕ್ಷ ಆಡಳಿತ ನಡೆಸುತ್ತಿರುತ್ತದೆ. ಅವಧಿ ಮುಗಿದ ನಂತರ ಚುನಾವಣೆ ನಡೆದು ಮತ್ತೊಂದು ಪಕ್ಷ ಅಧಿಕಾರಕ್ಕೆ ಬಂದರೆ ಹಿಂದಿನ ಸರ್ಕಾರ ಕೈಗೊಂಡ

ಯೋಜನೆಗಳನ್ನು ಮೊಟಕುಗೊಳಿಸಿ ಹೊಸ ಯೋಜನೆಗಳನ್ನು ಜಾರಿಗೊಳಿಸುತ್ತದೆ. ವಿವಿಧ ಪಕ್ಷಗಳು ಅಧಿಕಾರಕ್ಕೆ ಬಂದಾಗ ಹೊಸ ಯೋಜನೆಗಳಿಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಅಭಿವೃದ್ಧಿಯ ನೆಪದಲ್ಲಿ ವ್ಯಯಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಈ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ದೊರೆಯುವ ವೇಳೆಗೆ ಯೋಜನೆಯು ರದ್ದಾಗಬಹುದು ಇಲ್ಲವೆ ಅದು ಬೇರೆ ಮಾರ್ಗವನ್ನು ಅನುಸರಿಸಬಹುದು. ಈ ರೀತಿಯಾದ ವ್ಯವಸ್ಥೆಯಿಂದ ಹಣ ಖರ್ಚಾಗುತ್ತಿದೆಯೇ ವಿನಃ ಅಭಿವೃದ್ಧಿ ಮಾತ್ರ ಸಾಧ್ಯವಾಗುತ್ತಿಲ್ಲ.

ಪಂಚಾಯತ್ ರಾಜ್ ವ್ಯವಸ್ಥೆಯು ರಾಜಕೀಯ ಪಕ್ಷಗಳ ಹಸ್ತಕ್ಷೇಪದಿಂದ ಗ್ರಾಮ ಮಟ್ಟದಲ್ಲಿ ವಿರೋಧಿ ಬಣಗಳಾಗಿ ರೂಪುಗೊಳ್ಳುತ್ತಿವೆ. ಗ್ರಾಮ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಬೇಕಾದರೂ ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರನ್ನು ಹಿಂಬಾಲಿಸುತ್ತಾರೆ. ಪಕ್ಷದ ಅಡಿಯಲ್ಲಿ ಗೆದ್ದು ಬಂದಂತಹ ಅಭ್ಯರ್ಥಿಗಳು ಪಕ್ಷಗಳ ಮುಖಂಡರು ಸೂಚಿಸಿದ ಮಾರ್ಗದಲ್ಲಿ ನಡೆಯಬೇಕಾಗುತ್ತದೆ. ಚುನಾವಣೆಯಲ್ಲಿ ಆಯ್ಕೆಯಾಗಿ ಬಂದ ಸದಸ್ಯರು ತಮ್ಮ ಅಧಿಕಾರವನ್ನು ಪಕ್ಷದ ಮುಖಂಡರ ಮಾರ್ಗದರ್ಶನದ ಮೇಲೆ ಚಲಾಯಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಚುನಾಯಿತ ಜನ ಪ್ರತಿನಿಧಿಗಳ ಮೂಲಕ ಸಮರ್ಥವಾಗಿ ನಡೆಯಬೇಕಾದ ಅಧಿಕಾರವು ಇಂದು ಕೆಲವೇ ಮುಖಂಡರ ಮೂಲಕ ನಡೆಯುವುದರಿಂದ ಅಧಿಕಾರ ಅಸಮರ್ಪಕವಾಗಿ ನಡೆಯುತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದರಿಂದ ಅಧಿಕಾರದ ದುರುಪಯೋಗವಾಗುತ್ತಿರುವುದು ಕಂಡುಬರುತ್ತದೆ. ಮೀಸಲಾತಿ ವ್ಯವಸ್ಥೆಯಿಂದಾಗಿ ಕೆಳವರ್ಗದ ಸಮುದಾಯಗಳಿಗೆ ಅಧಿಕಾರ ಚಲಾಯಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಆದರೂ ಪ್ರಭಲ ಕೋಮಿನ ಸಮುದಾಯಗಳೇ ಈ ಹಿಂದುಳಿದ ಸಮುದಾಯಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿವೆ ಎಂದು ಹೇಳಿದರೆ ತಪ್ಪಾಗಲಾರದು.

ಬುಡಕಟ್ಟು ಸಮುದಾಯಗಳು ತಮ್ಮ ಮೂಲ ಸಂಸ್ಕೃತಿಯ ಜೊತೆಗೆ ಆಧುನಿಕತೆ ಸ್ಪರ್ಶವನ್ನು ಹೊಂದಿರುವುದು ಇಂದು ಕಂಡುಬರುತ್ತದೆ. ಇಂದು ಆಡಳಿತ ವ್ಯವಸ್ಥೆಯಲ್ಲಿ ಬುಡಕಟ್ಟು ಪ್ರಜಾ ಪ್ರತಿನಿಧಿಗಳು ಪಾಲ್ಗೊಳ್ಳುವುದರ ಮೂಲಕ ತಮ್ಮ ಬೇಕು ಬೇಡಗಳನ್ನು ಯೋಜನೆಯನ್ನು ಜಾರಿಗೊಳಿಸುವುದು ಮತ್ತು ತಮ್ಮ ಅಭಿವೃದ್ಧಿ ರೂಪಿಸಿಕೊಳ್ಳಲು ಮುಂದೆ ಬರುತ್ತಿದ್ದಾರೆ. ಭಾರತದಂತಹ ಗ್ರಾಮೀಣ ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿರುವುದು ಅತ್ಯಂತ ಸೂಕ್ತವಾದುದೆಂದು ಹೇಳಬಹುದು. ಬುಡಕಟ್ಟು ಸಮುದಾಯಗಳು ಇಂದು ಮೀಸಲಾತಿಯ ಮೂಲಕ ರಾಜಕೀಯ ಪ್ರವೇಶ ಮಾಡಿ ರಾಜಕೀಯದ ಮೂಲಕ ಎಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದಿವೆ, ಹೊಂದುತ್ತಿವೆ ಎಂಬುವುದನ್ನು ಕುರಿತು ಅಧ್ಯಯನ ಮಾಡಬೇಕಾದ ಅನಿವಾರ್ಯತೆ ಇದೆ. ನಾನು ಕೇವಲ ಪಂಚಾಯತ್ ರಾಜ್

ವ್ಯವಸ್ಥೆಯಲ್ಲಿ ಬುಡಕಟ್ಟುಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು ಇಂದು ಅತ್ಯಂತ ಮಹತ್ವದ ಸಂಗತಿಯೆಂದು ಭಾವಿಸಿದ್ದೇನೆ. ಈ ಕಾರಣಕ್ಕಾಗಿ ಗಂಗಾವತಿ ತಾಲೂಕಿನಲ್ಲಿನ ಗ್ರಾಮ ಪಂಚಾಯತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ. ವಿಸ್ತೃತವಾದ ಕ್ಷೇತ್ರ ಕಾರ್ಯದ ಮೂಲಕ ಇಲ್ಲಿ ಮಾಹಿತಿಯನ್ನು ಪಡೆದು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ.

೧.೨ ಅಧ್ಯಯನದ ಉದ್ದೇಶಗಳು :

ಕರ್ನಾಟಕದಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಇಲ್ಲಿಯವರೆಗೆ ಅಧ್ಯಯನಗಳು ಬೆರಳೆಣಿಕೆಯಷ್ಟು ನಡೆದಿವೆ. ಇಂದು ವೈಜ್ಞಾನೀಕರಣ, ನಗರೀಕರಣದ ಪ್ರಭಾವದಿಂದಾಗಿ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಅಸ್ಥಿತ್ವವನ್ನು ರಾಜಕೀಯದ ಮೂಲಕ ಗುರುತಿಸಿಕೊಳ್ಳುವಂತಹ ಪ್ರಯತ್ನಕ್ಕೆ ಕೈ ಹಾಕುತ್ತಿವೆ. ಸರ್ಕಾರವೂ ಸಹ ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಶೇ. ೩ ರಷ್ಟು ಚುನಾವಣೆಯಲ್ಲಿ ಅವಕಾಶವನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯಗಳು ರಾಜಕೀಯ ಪ್ರವೇಶಕ್ಕೆ ಕಾರಣವಾಗುತ್ತಿದೆ. ಇಡೀ ಉತ್ತರ ಕರ್ನಾಟಕದ ರಾಜಕೀಯ ವ್ಯವಸ್ಥೆಯನ್ನು ಗಮನಿಸಿ ಹೇಳುವುದಾದರೆ ಲೋಕಸಭೆಯಿಂದ ಹಿಡಿದು ಗ್ರಾಮ ಪಂಚಾಯತಿಯ ಸದಸ್ಯರವರೆಗೆ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಕಂಡುಬರುತ್ತಾರೆ. ನನ್ನ ಗಮನಕ್ಕೆ ಬಂದಂತೆ ಈ ಪರಿಶಿಷ್ಟ ಪಂಗಡದ ಚುನಾಯಿತ ಸದಸ್ಯರಲ್ಲಿ ಒಂದೇ ಬುಡಕಟ್ಟು ಸಮುದಾಯದ (ನಾಯಕ) ಸದಸ್ಯರು ಆಯ್ಕೆಯಾಗುತ್ತಾ ಬಂದಿರುವುದು ಕಂಡು ಬರುತ್ತದೆ. ಉತ್ತರ ಕರ್ನಾಟಕದಲ್ಲಿ ಅನೇಕ ಬುಡಕಟ್ಟು ಸಮುದಾಯಗಳಿದ್ದರೂ ಸಹ 'ನಾಯಕ' ಬುಡಕಟ್ಟಿನ ರಾಜಕೀಯದಿಂದಾಗಿ ಇತರೆ ಬುಡಕಟ್ಟುಗಳಿಗೆ ಬೆಳೆಯಲಿಕ್ಕೆ ಸಾಧ್ಯವಾಗದೇ ಇರುವುದು ಕಂಡುಬರುತ್ತದೆ. ಇದಕ್ಕೆ ಅವರಲ್ಲಿರುವ ಅಲೆಮಾರಿತನ, ಅತೀ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಸಮುದಾಯಗಳಾಗಿರುವುದೇ ಕಾರಣಗಳಾಗಿವೆ. ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಈ ಪ್ರದೇಶವೂ ಸಹ ಪರಿಶಿಷ್ಟ ಪಂಗಡದ ನಾಯಕ ಸಮುದಾಯವೇ ಹೆಚ್ಚಿನ ಪ್ರಾತಿನಿಧ್ಯ ಪಡೆದಿರುವುದು ಕಂಡು ಬರುತ್ತದೆ.

ಕರ್ನಾಟಕದಲ್ಲಿ ವಾಸಿಸುವ ಬುಡಕಟ್ಟುಗಳ ಇಂದಿನ ರಾಜಕೀಯ ಸ್ಥಿತಿಗತಿಗಳು ಹೇಗಿವೆ ಎಂಬುವುದನ್ನು ಕುರಿತಾದ ಅಧ್ಯಯನಗಳು ತೀವ್ರವಾಗಿ ನಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ನಾನು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಪಂಚಾಯತ್ ರಾಜ್ .ವ್ಯವಸ್ಥೆಯಲ್ಲಿ ಬುಡಕಟ್ಟುಗಳ ಪಾತ್ರವೇನು ಎಂಬುವುದನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಿದ್ದೇನೆ.

- ಪಂಚಾಯತ್ ರಾಜ್ ವ್ಯವಸ್ಥೆ ಹಿನ್ನೆಲೆಯನ್ನು ತಿಳಿದುಕೊಳ್ಳುವುದು.

- ಬುಡಕಟ್ಟು ಸಮುದಾಯಗಳ ರಾಜಕೀಯವಾಗಿ ಹಿಂದುಳಿಯಲು ಕಾರಣಗಳನ್ನು ತಿಳಿಯುವುದು.
- ಪಂಚಾಯತ್ ರಾಜ್ ವ್ಯವಸ್ಥೆಯು ಬುಡಕಟ್ಟು ಸಮುದಾಯಗಳಿಗೆ ಎಷ್ಟರ ಮಟ್ಟಿಗೆ ಪೂರಕವಾಗಿವೆ ಎನ್ನುವುದನ್ನು ತಿಳಿಯುವುದು.
- ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕ ಕೊಡುಗೆಗಳೇನು?
- ಬುಡಕಟ್ಟು ಸಮುದಾಯಗಳ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಿನ್ನೆಲೆಯನ್ನು ತಿಳಿಯುವುದು.
- ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ನಂತರ ಬುಡಕಟ್ಟು ಸಮುದಾಯಗಳ ಬದಲಾದ ಚಿತ್ರಣವನ್ನು ತಿಳಿಯುವುದು.
- ಅನ್ಯ ಸಮುದಾಯಗಳು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯಗಳನ್ನು ಯಾವ ರೀತಿಯಾಗಿ ಸ್ವೀಕರಿಸಿವೆ ಎನ್ನುವುದನ್ನು ತಿಳಿಯುವುದು.
- ರಾಜಕೀಯ ವ್ಯವಸ್ಥೆಯನ್ನು ಕುರಿತು ಬುಡಕಟ್ಟುಗಳ ಅಭಿಪ್ರಾಯವನ್ನು ತಿಳಿಯುವುದು.
- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಬುಡಕಟ್ಟುಗಳ ಮನಸ್ಥಿತಿ ಮತ್ತು ಮಾನಸಿಕತೆಯ ಬಗ್ಗೆ ಅವಲೋಕನ ಮಾಡುವುದು.
- ಜೀವನೋಪಾಯದ ಮಾರ್ಗವನ್ನು ಕುರಿತು ಅಧ್ಯಯನ ಮಾಡುವುದು.

ಪರಿಶೋಧಿಸಬೇಕಾದ ಸಮಸ್ಯೆಗಳು :

- ಬುಡಕಟ್ಟು ಸಮುದಾಯಗಳು ರಾಜಕೀಯವಾಗಿ ಹಿಂದುಳಿಯಲು ಕಾರಣಗಳೇನು?
- ಬುಡಕಟ್ಟು ಸಮುದಾಯಗಳು ಮುಖ್ಯ ವಾಹಿನಿಗೆ ಬರಲು ಅಡ್ಡಿ ಪಡಿಸುವ ಅಂಶಗಳಾವುವು?
- ಬುಡಕಟ್ಟುಗಳು ರಾಜಕೀವಾಗಿ ಅನುಭವಿಸುತ್ತಿರುವ ಸಮಸ್ಯೆಗಳಾವುವು?
- ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಶೈಕ್ಷಣಿಕ ಸ್ಥಾನಮಾನಗಳನ್ನು ಅರಿಯುವುದು.
- ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಮ್ಮಿಕೊಂಡಿರುವ ಕ್ರಮಗಳಾವುವು?

ಈ ಮೇಲಿನ ಎಲ್ಲ ಅಂಶಗಳನ್ನು ನನ್ನ ಈ ಅಧ್ಯಯನದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು ಹೇಗಿವೆ ಎಂಬುವುದನ್ನು ಇಲ್ಲಿ ಅರಿತುಕೊಳ್ಳಲು ಯತ್ನಿಸಿದ್ದೇನೆ. ಮತ್ತು ರಾಜಕೀಯ ಪ್ರವೇಶಿಸಿದ ಬುಡಕಟ್ಟು ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಯಾವ ಹಂತದಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಂಡಿದ್ದೇನೆ. ಇಂದು ಎಲ್ಲ ಸಮುದಾಯಗಳೂ ರಾಜಕೀಯದ ಮೂಲಕವೇ ತಮ್ಮ ಅಸ್ಥಿತ್ವವನ್ನು ಗುರುತಿಸಿಕೊಳ್ಳಲು ಹವಣಿಸುತ್ತಿವೆ. ಬುಡಕಟ್ಟು ಸಮುದಾಯಗಳು ರಾಜಕೀಯವಾಗಿ ಯಾವ ಹಂತದಲ್ಲಿವೆ ಎಂಬುವುದು ಅರಿತುಕೊಳ್ಳುವುದು ಈ ಅಧ್ಯಯನದ ಮಹತ್ತರವಾದ ಗುರಿಯಾಗಿದೆ.

೧.೩ ಅಧ್ಯಯನದ ವ್ಯಾಪ್ತಿ :

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಅಧ್ಯಯನಕ್ಕೊಳಪಡಿಸಲು ಉದ್ದೇಶಿಸಲಾಗಿದೆ. ಗಂಗಾವತಿ ತಾಲೂಕಿನ ವ್ಯಾಪ್ತಿಯೊಳಗೆ ಬರುವ ಎಲ್ಲ ಗ್ರಾಮ ಪಂಚಾಯತಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇತರ ಪಂಚಾಯತಿಗಳಾದ ತಾಲೂಕ ಮತ್ತು ಜಿಲ್ಲಾ ಪಂಚಾಯತಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿಲ್ಲ. ತಾಲೂಕು ಮತ್ತು ಜಿಲ್ಲಾ ಪಂಚಾಯತಿಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಆದರೆ, ಈ ಅಧ್ಯಯನದ ಮುಖ್ಯ ವಿಷಯ ಗ್ರಾಮ ಪಂಚಾಯತಿ. ಈ ಗ್ರಾಮ ಪಂಚಾಯತಿಗಳ ಎಲ್ಲ ಸದಸ್ಯರುಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿಲ್ಲ ಬದಲಾಗಿ ಗ್ರಾಮ ಪಂಚಾಯತಿಗಳ ಬುಡಕಟ್ಟುಗಳ ಸದಸ್ಯರುಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೪ ಅಧ್ಯಯನದ ವಿಧಾನಗಳು :

ಈಗಾಗಲೇ ನಡೆದ ಅಧ್ಯಯನಗಳ ಪ್ರಕಾರ ಇದುವರೆಗೆ ಈ ವಿಷಯ ಕುರಿತು ಬೆರಳೆಣಿಕೆಯಷ್ಟು ಅಧ್ಯಯನಗಳು ಮಾತ್ರ ಕಂಡುಬಂದಿವೆ. ಹಾಗೂ ಅಧ್ಯಯನದ ದೃಷ್ಟಿಕೋನ ವಿಭಿನ್ನ ರೀತಿಯಾಗಿವೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಯನ್ನು ಅಧ್ಯಯನ ಮಾಡಲು ಈ ಕೆಳಗಿನ ವಿಧಾನಗಳನ್ನು ಅನುಸರಿಸಲಾಗಿದೆ.

೧.೪.೧ ಪ್ರಶ್ನಾವಳಿ :

ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಅವಲೋಕನ ಮತ್ತು ಮಾರ್ಗದರ್ಶಕರ ನೆರವಿನಿಂದ ಈ ಅಧ್ಯಯನದ ಮುಖ್ಯ ಉದ್ದೇಶಗಳಿಗೆ ಅನುಗುಣವಾಗಿ ಸೂಕ್ತವಾದ

ಪ್ರಶ್ನಾವಳಿಯನ್ನು ಸಿದ್ದಪಡಿಸಿಕೊಂಡು, ಆ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿರುವ ಬುಡಕಟ್ಟು ಪ್ರಜಾಪ್ರತಿನಿಧಿಗಳ ಮುಖಾ ಮುಖಿ ಸಂದರ್ಶನ ಮಾಡಿ ಮಾಹಿತಿ ಸಂಗ್ರಹಣೆ ಮಾಡಲಾಗಿದೆ. ಇದರ ಮೂಲಕ ನಿಜವಾದ ಚಿತ್ರಣವನ್ನು ತಿಳಿದುಕೊಳ್ಳಲು ಅನುಕೂಲವಾಗಿದೆ.

೧.೪.೨ ಅವಲೋಕನ ವಿಧಾನ :

ಕ್ಷೇತ್ರ ಕಾರ್ಯದ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿರುವ ಬುಡಕಟ್ಟು ಪ್ರಜಾ ಪ್ರತಿನಿಧಿಗಳ ಅವಲೋಕನ ಮಾಡುವುದರ ಮೂಲಕ ಅವರ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಬುಡಕಟ್ಟು ಸಮುದಾಯಗಳು ಇರುವ ಪ್ರದೇಶ, ಪಂಚಾಯತಿ ಮುಂತಾದ ಪ್ರದೇಶಗಳ ಅವಲೋಕನೆಯನ್ನು ಮಾಡಲಾಗಿದೆ. ಅವರ ಅಭಿವೃದ್ಧಿಗಾಗಿ ಅವಶ್ಯವಿರುವ ಕೆಲವೊಂದು ಮಾಹಿತಿಗಳನ್ನು ಪಡೆದು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೧.೪.೩ ದತ್ತಾಂಶ ಸಂಗ್ರಹಣೆ :

ಈ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೆ ನಡೆದ ಕೆಲವೊಂದು ಅಧ್ಯಯನಗಳನ್ನು ದ್ವಿತೀಯ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಸಂಶೋಧನೆಗೆ ಅವಶ್ಯವಿದ್ದಷ್ಟು ಪ್ರಶ್ನಾವಳಿಯನ್ನು ಮಾಡಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ. ದತ್ತಾಂಶ ಸಂಗ್ರಹಣೆಗಾಗಿ ಆಯ್ಕೆ ಮಾಡಿಕೊಂಡ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಸಂಬಂಧಿಸಿದ ಬುಡಕಟ್ಟು ಪ್ರಜಾ ಪ್ರತಿನಿಧಿಗಳನ್ನು ವೈಯಕ್ತಿಕವಾಗಿ ಭೇಟಿಯಾಗಿ, ಅವರಿಂದ ಪ್ರಶ್ನಾವಳಿ ಮೂಲಕ ಸೂಕ್ತ ಕಾಲಾವಕಾಶ ನೀಡಿ ದತ್ತಾಂಶ ಸಂಗ್ರಹಣೆ ಮಾಡಲಾಗಿದೆ. ಅಲ್ಲದೆ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ಮತ್ತು ಕೆಲ ರಾಜನೀತಿ ಶಾಸ್ತ್ರಜ್ಞರನ್ನು ಭೇಟಿಯಾಗಿ ಮಾಹಿತಿಯನ್ನು ಸಂಗ್ರಹಿಸಿ ಪ್ರಬಂಧವನ್ನು ಸಿದ್ದಪಡಿಸಲಾಗಿದೆ.

೧.೪.೪ ಸಂದರ್ಶನ ವಿಧಾನ :

ಈ ಅಧ್ಯಯನದ ಕ್ಷೇತ್ರರ ಕಾರ್ಯವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕನ್ನು ಒಳಗೊಂಡಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟು ಪ್ರಜಾ ಪ್ರತಿನಿಧಿಗಳನ್ನು ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಭೇಟಿಯಾಗಿ ವೈಯಕ್ತಿಕವಾಗಿ ಸಂದರ್ಶಿಸಲಾಗಿದೆ. ಈ ವಿಧಾನವು ಯಾವುದೇ ರೀತಿಯ ಸಂಶೋಧನೆಗೆ ಅತ್ಯವಶ್ಯಕವಾಗಿ ಬೇಕಾಗಿರುವಂತಹ ವಿಧಾನವಾಗಿರುವುದರಿಂದ ಸಂಶೋಧನೆಯ ವಸ್ತುನಿಷ್ಠತೆ ಕಾಯ್ದುಕೊಳ್ಳಲು ಉಪಯುಕ್ತವಾಗಿದೆ. ಈ ವಿಧಾನವನ್ನು ಮುಖ್ಯವಾಗಿರಿಸಿಕೊಂಡು ಪ್ರಬಂಧವನ್ನು ಸಿದ್ದಪಡಿಸಲಾಗಿದೆ.

೧.೪.೫ ಅಧ್ಯಯನದ ಸಾಧನಗಳು :

'ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು' ಎನ್ನುವ ಅಧ್ಯಯನದ ಸಂಶೋಧನೆ ಪ್ರಬಂಧದ ರಚನಾ ಸಂದರ್ಭದಲ್ಲಿ ಹಾಗೂ ಕ್ಷೇತ್ರ ಕಾರ್ಯ ಸಮಯದಲ್ಲಿ ಮೂಲಭೂತ ಸಾಧನಗಳಾದ ಪ್ರಶ್ನಾವಳಿ, ಕ್ಯಾಮರಾ, ಟೇಪ್ ರಿಕಾರ್ಡ್, ಲೇಖನ ಸಾಮಗ್ರಿ, ಮುಖಾ ಮುಖಿ ಭೇಟಿ ಮತ್ತು ಅವಲೋಕನ ವಿಧಾನ, ಅಲ್ಲದೆ ಇನ್ನಿತರ ಮೂಲಭೂತ ಸಾಧನಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

೧.೫ ಅಧ್ಯಯನದ ಮಹತ್ವ :

ಈ ದೇಶದ ಮೂಲ ನಿವಾಸಿಗಳಾದ ಆದಿವಾಸಿಗಳು ಇಂದು ಹಂತ ಹಂತವಾಗಿ ಮುಖ್ಯ ವಾಹಿನಿಗೆ ಬರುತ್ತಿದ್ದಾರೆ. ಆಧುನಿಕತೆಯ ಪರಿಸರಕ್ಕೆ ಕಾಲಿಡುತ್ತಿರುವ ಅನೇಕ ಬುಡಕಟ್ಟುಗಳು ಹಲವಾರು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುತ್ತಿವೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಈ ಬುಡಕಟ್ಟು ಸಮುದಾಯಗಳಿಗೆ ಸಂವಿಧಾನ ರಚನೆಯಾದ ಮೇಲೆ ಬುಡಕಟ್ಟು ಸಮುದಾಯಗಳಿಗೆ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸುವುದರ ಮೂಲಕ ಅವರ ಅಭಿವೃದ್ಧಿಯ ಕಡೆಗೆ ಗಮನ ಹರಿಸುವ ಸಂಪ್ರದಾಯ ಪ್ರಾರಂಭವಾಯಿತು. ಒಂದರ್ಥದಲ್ಲಿ ಈ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಿರುವುದು ಸಹ ಅವರ ಏಳಿಗೆಗೆ ಸಹಕಾರಿಯಾಯಿತು ಎಂದು ಹೇಳಬಹುದು. ಭಾರತದ ಆಡಳಿತ ವ್ಯವಸ್ಥೆಯು ಗ್ರಾಮ ಪಂಚಾಯತಿಯಿಂದ ಹಿಡಿದು ಸಂಸತ್ತಿನ ವರೆಗೆ ವಿವಿಧ ರೀತಿಯ ಅಧಿಕಾರವನ್ನು ಹೊಂದಿರುವುದು ತಿಳಿದ ವಿಷಯ. ಈ ಆಡಳಿತ ವ್ಯವಸ್ಥೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ತನ್ನದೇ ಆದ ಮಹತ್ವವನ್ನು ಹೊಂದಿದೆ. ಆಡಳಿತ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಒದಗಿಸುತ್ತದೆ. ಗ್ರಾಮ ಪಂಚಾಯತಿಯಿಂದ ಹಿಡಿದು ಲೋಕಸಭೆಯ ವರೆಗೆ ಬುಡಕಟ್ಟು ಸಮುದಾಯಗಳು ಭಾಗವಹಿಸಿ ಅಭಿವೃದ್ಧಿ ಹೊಂದಲಿ ಎಂಬ ಉದ್ದೇಶ ಸರ್ಕಾರದ್ದು. ಈ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೀಸಲಾತಿ ನೀಡಿ ಅವರನ್ನು ರಾಜಕೀಯವಾಗಿ ಬೆಳೆಸುತ್ತಿರುವುದು ಕಂಡುಬರುತ್ತದೆ. ಇದರ ಫಲದಿಂದ ಇಂದು ಗ್ರಾಮ ಪಂಚಾಯತ್, ತಾಲೂಕ ಪಂಚಾಯತ್ ಮತ್ತು ಜಿಲ್ಲಾ ಪಂಚಯತಿಯಲ್ಲಿ ಬುಡಕಟ್ಟು ಸಮುದಾಯಗಳು ಪ್ರಜಾಪ್ರತಿನಿಧಿಗಳಾಗಿ ಆಯ್ಕೆಯಾಗಿ ಆಡಳಿತ ಯಂತ್ರದಲ್ಲಿ ಗುರುತಿಸಿಕೊಳ್ಳುವಂತಾಗಿದೆ.

ಹಿರಿಯ ವಿದ್ವಾಂಸರು ಅಭಿಪ್ರಾಯ ಪಡುವಂತೆ ನಮ್ಮ ದೇಶ ಬಡಜನರಿಂದ ಕೂಡಿದ ಶ್ರೀಮಂತ ರಾಷ್ಟ್ರವಾಗಿದೆ. ಬುಡಕಟ್ಟು ಸಮುದಾಯಗಳು ಆರ್ಥಿಕವಾಗಿ ಕೆಳಮಟ್ಟದಲ್ಲಿವೆ. ಬಡತನದಿಂದ ಬಳಲುತ್ತಿವೆ. ಈ ಬಡತನದಲ್ಲಿಯೂ ತಮ್ಮ ಮಾನವೀಯ ಮೌಲ್ಯಗಳ ಮೂಲಕ

ಶ್ರೀಮಂತಿಕೆಯನ್ನು ಹೊಂದಿದ್ದಾರೆ. ಬುಡಕಟ್ಟುಗಳಿಗೆ ಇಂದು ಅನೇಕ ಸೌಲಭ್ಯಗಳು ದೊರೆತರೂ ಸಹ ಅವರು ತಮ್ಮತನವನ್ನು ಬಿಟ್ಟುಕೊಟ್ಟಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆ ಎಷ್ಟೆಲ್ಲಾ ಸೌಲಭ್ಯಗಳನ್ನು ಒದಿಗಿಸಿದರೂ, ಅವರ ಬಡತನವನ್ನು ಹೋಗಲಾಡಿಸಲಿಕ್ಕೆ ಸಾಧ್ಯವಾಗಿಲ್ಲ. ಶ್ರೀಮಂತರು ಮತ್ತು ಸ್ವಾರ್ಥ ಅಧಿಕಾರಿಗಳಿಂದ, ರಾಜಕಾರಣಿಗಳಿಂದ ಬುಡಕಟ್ಟು ಸಮುದಾಯಗಳು ಅವಕಾಶದಿಂದ ವಂಚಿತವಾಗುತ್ತಿವೆ. ಪಂಚಾಯತ್ ರಾಜ್ ವ್ಯವಸ್ಥೆಯು ಅಸ್ಥಿತ್ವಕ್ಕೆ ಬಂದ ನಂತರ ಬುಡಕಟ್ಟುಗಳು ರಾಜಕೀಯವಾಗಿ ಮೇಲೇಳುತ್ತಿರುವ ಅಂಶವನ್ನು ನಾವು ತಳ್ಳಿ ಹಾಕುವಂತಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯು ಬುಡಕಟ್ಟು ಸಮುದಾಯಗಳಿಗೆ ತಕ್ಕಮಟ್ಟಿಗೆ ಭದ್ರತೆಯನ್ನು ಒದಗಿಸುತ್ತಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಆಧುನಿಕತೆಯ ಜೊತೆಗೆ ಬುಡಕಟ್ಟುಗಳು ಆದರ್ಶ ಜೀವನವನ್ನು ನಿರ್ವಹಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಜೊತೆಗೆ ಮೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೊರಟಿದ್ದಾರೆ.

- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯಗಳ ಮುಂದುವರಿಕೆಯನ್ನು ತಿಳಿಯುವುದು.
- ಬುಡಕಟ್ಟು ಸಮುದಾಯಗಳು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ವಹಿಸುತ್ತಿರುವ ಪಾತ್ರವನ್ನು ತಿಳಿಯುವುದು.
- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯಗಳ ಸದಸ್ಯರ ರಾಜಕೀಯ ಜೀವನವನ್ನು ಕುರಿತು ತಿಳಿಯುವುದು.
- ಪಂಚಾಯತ್ ರಾಜ್ ವ್ಯವಸ್ಥೆಯಿಂದ ಬುಡಕಟ್ಟು ಸಮುದಾಯಗಳಿಗಾದ ಅನುಕೂಲಗಳನ್ನು ತಿಳಿಯುವುದು.

ಈ ಮೇಲಿನ ಎಲ್ಲ ಅಂಶಗಳನ್ನು ನನ್ನ ಈ ಅಧ್ಯಯನದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು ಹೇಗಿವೆ ಎಂಬುವುದನ್ನು ಇಲ್ಲಿ ಅರಿತುಕೊಳ್ಳಲು ಯತ್ನಿಸಿದ್ದೇನೆ. ಮತ್ತು ರಾಜಕೀಯ ಪ್ರವೇಶಿಸಿದ ಬುಡಕಟ್ಟು ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಯಾವ ಹಂತದಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಂಡಿದ್ದೇನೆ. ಎಲ್ಲ ಸಮುದಾಯಗಳೂ ರಾಜಕೀಯದ ಮೂಲಕವೇ ತಮ್ಮ ಅಸ್ಥಿತ್ವವನ್ನು ಗುರುತಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಬುಡಕಟ್ಟು ಸಮುದಾಯಗಳು ರಾಜಕೀಯವಾಗಿ ಯಾವ ಹಂತದಲ್ಲಿವೆ ಎಂಬುವುದು ಅರಿತುಕೊಳ್ಳುವುದು ಈ ಅಧ್ಯಯನದ ಮಹತ್ತರವಾದ ಗುರಿಯಾಗಿದೆ.

ಅಧ್ಯಾಯ ೨

೨. ಗಂಗಾವತಿ ತಾಲೂಕಿನ ಪರಿಚಯ

೨.೧ ಭೌಗೋಳಿಕ ಹಿನ್ನೆಲೆ

೨.೨ ಹೋಬಳಿಗಳ ಪರಿಚಯ

ಪೀಠಿಕೆ :

ಕೊಪ್ಪಳ ಜಿಲ್ಲೆಯು ಐತಿಹಾಸಿಕವಾಗಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ನಾಲ್ಕು ತಾಲೂಕುಗಳಿವೆ. ಕೊಪ್ಪಳ, ಗಂಗಾವತಿ, ಯಲಬುರ್ಗ ಹಾಗೂ ಕುಷ್ಟಗಿ. ಈ ನಾಲ್ಕು ತಾಲೂಕುಗಳಲ್ಲಿ ಗಂಗಾವತಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಈಗ "ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು ಆರ್ಥಿಕ ಶ್ರೀಮಂತಿಕೆಯ ಜೊತೆಗೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿದೆ. ವೈಶಿಷ್ಟ್ಯಪೂರ್ಣವಾದ ಇಲ್ಲಿ ಬೌಗೋಳಿಕ ಸನ್ನಿವೇಶ ಚರಿತ್ರೆಯನ್ನು ಭಿನ್ನವಾಗಿರಿಸಿದೆ. ಒಂದೆಡೆ ದಟ್ಟವಾದ ಬೆಟ್ಟ ಸಾಲುಗಳು, ಮತ್ತೊಂದೆಡೆ ಬಟ್ಟ ಬಯಲುಗಳಿಂದ ಕೂಡಿದ ಪ್ರಾಕೃತಿಕ ಪರಿಸರದಲ್ಲಿ ನದಿ, ಹಳ್ಳ, ಕೆರೆ, ಮಣ್ಣು, ಶಿಲೆ, ಖನಿಜ, ಸಸ್ಯ, ಪ್ರಾಣಿಗಳ ವೈವಿದ್ಯತೆ ಇದೆ. ಇದು ಪ್ರಾಚೀನ ಕಾಲದಿಂದಲೂ ಇಲ್ಲಿನ ಮಾನವ ಬದುಕನ್ನು ಸಾಂಸ್ಕೃತೀಕರಣಗೊಳಿಸುವಲ್ಲಿ ಗಟ್ಟಿ ಪಾತ್ರ ವಹಿಸಿದೆ. ಇಲ್ಲಿಯ ಆದಿಯ ಬದುಕು ಶಿಷ್ಟಗೊಳ್ಳುತ್ತ ನಡೆದ ಹಾದಿಯ ಅವಲೋಕನವು ಸ್ವಾರಸ್ಯಕರವಾದ ಸಂಗತಿಯಾಗಿದೆ."[೧]

ಈ ಪ್ರದೇಶವು ಹಲವಾರು ಜಾತಿ, ಉಪಜಾತಿಗಳನ್ನು ಒಳಗೊಂಡಿದೆ. ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹೀಗೆ ವಿವಿಧ ಕ್ಷೇತ್ರದಲ್ಲಿ ವೈಶಿಷ್ಟ್ಯತೆಯನ್ನು ಹೊಂದಿದೆ. ವಿವಿಧ ಸಮುದಾಯಗಳ ಅನನ್ಯತೆಯಿಂದ ಸಾಮರಸ್ಯ ಜೀವನದ ಶೈಲಿಯನ್ನು ಒಳಗೊಂಡ ಪ್ರಮುಖ ತಾಲೂಕ ಆಗಿ ಗುರ್ತಿಸಿಕೊಂಡಿದೆ.

೨.೧ ಭೌಗೋಳಿಕ ಹಿನ್ನೆಲೆ :

ತುಂಗಭದ್ರಾ ಜಲಾಶಯದ ನಿರ್ಮಾಣಕ್ಕೂ ಮುನ್ನ ಈ ಪ್ರದೇಶ ಬರಡು ಭೂಮಿಯಾಗಿತ್ತು. ಈ ಬರಡು ಭೂಮಿ ಇಂದು ಭತ್ತದ ಕಣಜವಾಗಿ ಪ್ರಖ್ಯಾತಿಯನ್ನು ಪಡೆದಿದೆ. ಆರ್ಥಿಕವಾಗಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ರಾಜ್ಯದಲ್ಲಿ ಅತಿ ಹೆಚ್ಚು ವ್ಯಾಪಾರ ವಹಿವಾಟನ್ನು ನಡೆಸುವ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಗಂಗಾವತಿ ತಾಲೂಕು ಸಹ ಒಂದಾಗಿದೆ. ಗಂಗಾವತಿ ತಾಲೂಕಿನ ಭೌಗೋಳಿಕತೆಯನ್ನು ನೋಡುವುದಾದರೆ "ಗಂಗಾವತಿ ಕೊಪ್ಪಳ ಜಿಲ್ಲೆಯ ಪೂರ್ವ ಭಾಗದಲ್ಲಿದೆ. ವಿಶ್ವ ಪರಂಪರೆ ತಾಣ ಹಂಪಿಯಿಂದ ಉತ್ತರಕ್ಕೆ ಕೇವಲ ೧೩ ಕಿಲೋ ಮೀಟರ್ ಅಂತರದಲ್ಲಿರುವ ಗಂಗಾವತಿಗೆ ಆಗ್ನೇಯ ದಿಕ್ಕಿನಲ್ಲಿ ಕೇವಲ ೩ ಕಿಲೋ ಮೀಟರ್ ದೂರದಲ್ಲಿ ತುಂಗಭದ್ರಾ ನದಿ ಹರಿಯುತ್ತದೆ. ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನ ಆನೆಗುಂದಿ, ಕಣ್ಣಿದ್ದವರು ಕಾಣಬೇಕಾದ ಕಲಾತ್ಮಕ ಸ್ಮಾರಕಗಳ ಕನಕಗಿರಿ ಗಂಗಾವತಿಯ ನೆರೆ ಹೊರೆಯಲ್ಲಿವೆ."[೨] ಗಂಗಾವತಿ ತಾಲೂಕ ಪ್ರದೇಶವು ಬೇಸಿಗೆಯಲ್ಲಿ ಅತಿ ಹೆಚ್ಚು ಬಿಸಿಲು ಮತ್ತು ಚಳಿಗಾಲದಲ್ಲಿ ಅತಿ

ಹೆಚ್ಚು ಚಳಿಯಿಂದ ಕೂಡಿದ ಹವಾಮಾನವನ್ನು ಹೊಂದಿದೆ. ೨೦೦೧ ರ ಜನಗಣತಿಯ ವರದಿಯ ಪ್ರಕಾರ ಕೊಪ್ಪಳ ಜಿಲ್ಲೆಯು ೭,೧೮೯ ಚದರ ಕಿಲೋ ಮೀಟರ್ ವ್ಯಾಪ್ತಿಯನ್ನು ಒಳಗೊಂಡಿದೆ. ಇದರಲ್ಲಿ ಗಂಗಾವತಿ ತಾಲೂಕಿನ ವಿಸ್ತೀರ್ಣ ೧,೩೧೧.೨೧ ಚದರ ಕಿಲೋ ಮೀಟರ್ ವ್ಯಾಪ್ತಿಯನ್ನು ಒಳಗೊಂಡಿದೆ. ಕೊಪ್ಪಳ ಜಿಲ್ಲೆಯಲ್ಲಿ ಗಂಗಾವತಿ ತಾಲೂಕು ಅತಿ ಹೆಚ್ಚು ಜನಸಾಂದ್ರತೆಯನ್ನು ಹೊಂದಿದೆ. ಈ ತಾಲೂಕಿನಲ್ಲಿ ಪ್ರತಿ ಚದರ ಕಿಲೋ ಮೀಟರ್‌ಗೆ ೩೧೦ ಜನಸಾಂದ್ರತೆಯನ್ನು ಒಳಗೊಂಡಿದೆ. ೨೦೦೧ ರ ಜನಗಣತಿಯ ಪ್ರಕಾರ ಕೊಪ್ಪಳ ಜಿಲ್ಲೆಯ ೧೧,೯೬,೦೮೯ ಜನಸಂಖ್ಯೆಯನ್ನು ಹೊಂದಿದೆ. ಕೊಪ್ಪಳ ಜಿಲ್ಲೆಯಲ್ಲಿಯ ಅತಿ ಹೆಚ್ಚು ಜನಸಂಖ್ಯೆಯು ಗಂಗಾವತಿ ತಾಲೂಕು ಹೊಂದಿದೆ. ತಾಲೂಕುವಾರು ಜನಸಂಖ್ಯೆಯನ್ನು ನೋಡುವುದಾದರೆ ಯಲಬುರ್ಗ ೨,೩೬,೩೭೩ ಜನಸಂಖ್ಯೆಯನ್ನು, ಕುಷ್ಟಗಿ ೨,೩೯,೩೮೧ ಕೊಪ್ಪಳ ೩,೧೪,೦೫೧ ಮತ್ತು ಗಂಗಾವತಿ ತಾಲೂಕು ೪,೦೬,೩೩೪ ಹೊಂದಿದೆ. ಗಂಗಾವತಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಪುರುಷ ಮತ್ತು ಸ್ತ್ರೀಯರ ಸಂಖ್ಯೆಯು ಕ್ರಮವಾಗಿ ೧,೫೩,೧೪೫ ಮತ್ತು ೧,೫೧,೭೯೭ ಇರುತ್ತದೆ. ಅದೇ ರೀತಿಯಾಗಿ ನಗರ ಪ್ರದೇಶದಲ್ಲಿ ಪುರುಷ ಮತ್ತು ಸ್ತ್ರೀಯರ ಸಂಖ್ಯೆಯು ೫೧,೨೧೧ ಮತ್ತು ೫೦,೧೮೧ ಇರುತ್ತದೆ. ೧೯೯೧ ರಿಂದ ೨೦೦೧ ರಲ್ಲಿ ಜನಸಂಖ್ಯೆಯ ಬೆಳವಣಿಗೆಯ ದರ ೨೧.೮ ರಷ್ಟಿದೆ. ಗಂಗಾವತಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ೨೪,೮೦೦ ಪುರುಷ ಮತ್ತು ೨೪,೭೩೬ ಮಹಿಳಾ ಪರಿಶಿಷ್ಟ ವರ್ಗದವರಿದ್ದಾರೆ. ನಗರ ಪ್ರದೇಶದಲ್ಲಿ ೩,೨೨೧ ಪುರುಷ ಮತ್ತು ೩,೨೩೯ ಮಹಿಳೆಯರು ಪರಿಶಿಷ್ಟ ಜನಸಂಖ್ಯೆಯಲ್ಲಿದ್ದು, ಒಟ್ಟಾರೆಯಾಗಿ ಗಂಗಾವತಿ ತಾಲೂಕಿನಲ್ಲಿ ೨೮,೦೨೧ ಪುರುಷರು ಮತ್ತು ೨೭,೯೭೫ ಮಹಿಳೆಯರು ಪರಿಶಿಷ್ಟ ಪಂಗಡದಲ್ಲಿದ್ದಾರೆ.

“ಈ ತಾಲೂಕಿನ ಪೂರ್ವ ಪಶ್ಚಿಮವಾಗಿ ಪ್ರಸಿದ್ಧ ಏಳು ಗುಡ್ಡದ ಸಾಲುಗಟ್ಟಗಳು ಸುಮಾರು ೪೦ ಕಿಲೋ ಮೀಟರ್ ಎಡಬಿಡದೆ ವಿಸ್ತರಿಸಿವೆ. ಚಾರಿತ್ರಿಕ ಪ್ರಸಿದ್ಧ ಸ್ಥಳಗಳಾದ ಮುಕ್ಕುಂಪಿ, ಹಿರೇಬೆಣಕಲ್, ಆಗೋಲಿ, ಎಮ್ಮಿಗುಡ್ಡ, ವಾನಭದ್ರೇಶ್ವರ, ಆನೆಗುಂದಿ ಈ ಏಳು ಗುಡ್ಡದ ಸಾಲಿನಲ್ಲಿವೆ.”[೩] ಏಳು ಬೆಟ್ಟ ಸಾಲುಗಳನ್ನು ಹೊಂದಿರುವ ಅಪರೂಪದ ಪ್ರದೇಶಗಳಲ್ಲಿ ಒಂದಾಗಿದೆ. ಈ ಎಲ್ಲಾ ಬೆಟ್ಟಗಳಲ್ಲಿ ಹೇಮಗುಡ್ಡವು ಅತಿ ಹೆಚ್ಚು ಅಂದರೆ ೮೨೧ ಮೀಟರ್ ಎತ್ತರವನ್ನು ಹೊಂದಿದೆ. ಮುಕ್ಕುಂಪಿ ಬೆಟ್ಟ ಸಾಲು ಪ್ರಮುಖವಾಗಿ ಕಂಡುಬರುವುದಲ್ಲದೆ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. “ ಮುಕ್ಕುಂಪ ಬೆಟ್ಟ ಶ್ರೇಣಿಗಳಲ್ಲಿ ಏಳುವ ಊಟಿಯೊಂದು ತೊರೆಯಾಗಿ ಹರಿದು ಗಂಗಾವತಿಯಲ್ಲಿ ದೊಡ್ಡ ಹಳ್ಳವಾಗಿ ನಗರವನ್ನೇ ಇಬ್ಭಾಗಿಸುತ್ತದೆ. ನಗರದ ಒಳಗೆ ಒಂದು ಕಾಲು ಸೇತುವೆ ಸಹಿತ ಒಟ್ಟು ೫ ಸೇತುವೆಗಳನ್ನು ಈ ಹಳ್ಳಕ್ಕೆ ನಿರ್ಮಿಸಿರುವುದು ಕಂಡುಬರುತ್ತದೆ. ಹಳ್ಳದ ಗುಂಟ ನಗರ ವಿಸ್ತಾರವಾಗಿ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಆದರೆ ಬೆಂಗಳೂರಿನ ಮಲೀನವನ್ನೆಲ್ಲಾ ಸಾಗಿಸುವ ಆರ್ಕಾವತಿ ನದಿಯಂತೆ ಗಂಗಾವತಿ ಈ ದುರ್ಗಮ್ಮನ

ಹಳ್ಳವಾಗಿರುವುದ ದುರಂತ."[9] ಭೌಗೋಳಿಕವಾಗಿ ಗಂಗಾವತಿ ತಾಲೂಕು ವೈವಿಧ್ಯತೆಯನ್ನು ಹೊಂದಿದೆ. ತಾಲೂಕಿನಲ್ಲಿ ಕಪ್ಪು, ಕೆಂಪು, ಕಂದು ಮಿಶ್ರಿತ ಕೆಂಪು, ಸವಳು, ಮರಳು ಮಿಶ್ರಿತ ಜೇಡಿ ಮಣ್ಣನ್ನು ಹೊಂದಿರುವ ಭೂ ಭಾಗವಾಗಿದೆ.

'ಗಂಗಾವತಿ' ಎಂಬ ಪದ ಹುಟ್ಟಿಕೊಳ್ಳಲು ಹಲವಾರು ಐತಿಹಾಸಿಕ ಹಿನ್ನೆಲೆಗಳನ್ನು ಹೇಳುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ 'ಇತಿಹಾಸಕಾರರು, ಬುದ್ಧಿಜೀವಿಗಳು, ಚಿಂತಕರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಪದನಾಮಕ್ಕೆ ಸಂಬಂಧಿಸಿದಂತೆ ವಿದ್ವಾಂಸರ ವಿಚಾರಗಳಲ್ಲಿ ಸಾಮ್ಯತೆ ಮತ್ತು ವೈವಿಧ್ಯತೆಗಳು ಕಂಡುಬರುತ್ತವೆ. ಗಂಗಾವತಿಗೆ ಹಿಂದೇ ಸುಭಾನುಪುರ ಹಾಗೂ ನೀಲಾವತಿ ಗಂಗಾವತಿಯಾದ ಬಗ್ಗೆ ಕಥೆ ಪ್ರಚಲಿತದಲ್ಲಿದೆ. "ವಿಜಯನಗರ ಕಾಲದಲ್ಲಿ ಅಲ್ಲಿಯ ಗಂಗಾಧರನೆಂಬ ವಿಪ್ರನೋರ್ವನು ಉತ್ತರ ದೇಶಗಳ ಪುಣ್ಯಕ್ಷೇತ್ರಗಳಿಗೆ ಯಾತ್ರೆ ಕೈಗೊಂಡನಂತೆ. ಕಾಶಿ ಕ್ಷೇತ್ರದಲ್ಲಿದ್ದಾಗ ಅವನಿಗೆ ಶಿವಲಿಂಗವೊಂದು ಪ್ರಾಪ್ತಿಯಾಯಿತಂತೆ. ಅವನು ಆ ಲಿಂಗ ಸಮೇತ ಯಾತ್ರೆಯಿಂದ ಹಿಂದಿರುಗುವಾಗ ನೀಲಾವತಿಯ ಅರಸನಿಗೆ ತನ್ನ ತೀರ್ಥಯಾತ್ರೆಯ ಪುಣ್ಯಸಹಿತ ಶಿವಲಿಂಗವನ್ನು ಅರ್ಪಿಸಿದನು. ಇದರಿಂದ ಸಂತುಷ್ಟಗೊಂಡ ಅರಸನು ತನ್ನ ಪುರದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ಬ್ರಾಹ್ಮಣನ ಸ್ಮರಣಾರ್ಥ ಲಿಂಗಕ್ಕೆ ಗಂಗಾಧರನೆಂದು, ನೀಲಾವತಿಗೆ ಗಂಗಾವತಿಯೆಂದು ಹೆಸರಿಟ್ಟನಂತೆ."[10]

ಗಂಗಾವತಿ ಎನ್ನುವ ಹೆಸರು ಸ್ತ್ರೀನಾಮ ಸೂಚಕವೆಂದು ಹೇಳಬಹುದು. ಈ ಹೆಸರು ಗಂಗಾ ಮತ್ತು ವತಿ ಎಂಬ ಎರಡು ಶಬ್ದಗಳ ಸಮ್ಮಿಶ್ರಣವಾಗಿದೆ. ಈ ಪ್ರದೇಶದಲ್ಲಿ ಗಂಗಾಧರೇಶ್ವರನು ಇಲ್ಲಿಯೇ ವಾಸವಾಗಿರುವುದರಿಂದ ಇವನ ಪತ್ನಿಯಾದ ಗಂಗೆಯು ಇಲ್ಲಿಯೇ ವಾಸವಾಗಿದ್ದಾಳೆಂದು ತಿಳಿದು ಈ ಭೂ ಭಾಗಕ್ಕೆ ಗಂಗಾವತಿ ಎಂಬ ಹೆಸರು ಬಂದಿದೆ. ಗಂಗಾಧರೇಶ್ವರನ ಮೂಲ ನಾಮ ಈಶ್ವರ. ಈ ಪ್ರದೇಶದಲ್ಲಿನ ಗಂಗೆಯನ್ನು ಜೊತೆಗೂಡಿದುದರಿಂದ ತನ್ನ ಹೆಸರಿನ ಜೊತೆಗೆ ಪತ್ನಿಯ ಹೆಸರನ್ನು ಸೇರಿಸಿ ಗಂಗಾವತಿ ಎಂಬ ಹೆಸರು ಈ ಪ್ರದೇಶಕ್ಕೆ ಬಂದಿರಬಹುದೆಂದು ಹೇಳಲಾಗುತ್ತದೆ.

ಗಂಗಾವತಿ ತಾಲೂಕಿನ ಮುಕ್ಕಾಲು ಭೂ ಪ್ರದೇಶವು ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರಾವರಿ ಪ್ರದೇಶವಾಗಿದೆ. ಇನ್ನುಳಿದ ಭೂಮಿಯು ಒಣ ವ್ಯವಸಾಯ ಹಾಗೂ ಬೋರ್‌ವೆಲ್ಲ್ ಹಾಗೂ ಕೆಲ ಕೆರೆಗಳ ಮುಖಾಂತರ ನೀರಾವರಿಯನ್ನು ಒಳಗೊಂಡ ಭೂ ಪ್ರದೇಶವಾಗಿದೆ. ನೀರಾವರಿ ಪ್ರದೇಶದಲ್ಲಿ ಯಥೇಚ್ಚವಾಗಿ ಭತ್ತವನ್ನು ಬೆಳೆಯಲಾಗುತ್ತದೆ. ಅಲ್ಲದೆ ತುಂಗಭದ್ರಾ ನದಿ ತೀರದ ಪ್ರದೇಶದಲ್ಲಿ ಬಾಳೆ ಮತ್ತು ಕಬ್ಬನ್ನು ಬೆಳೆಯಲಾಗುತ್ತದೆ. ಇನ್ನುಳಿದಂತೆ ಅರೆ ನೀರಾವರಿ ಮತ್ತು ನೀರಾವರಿಯಲ್ಲದ ಪ್ರದೇಶಗಳಲ್ಲಿ ಜೋಳ, ಮುಸುಕಿನ ಜೋಳ, ಸಜ್ಜೆ, ಸೂರ್ಯಕಾಂತಿ, ಸೇಂಗಾ, ಹತ್ತಿ, ತೊಗರಿ, ಹೆಸರು, ಗುರಳ್ಳು, ನವಣೆ ಮುಂತಾದ ಬೆಳೆಗಳನ್ನು

ಬೆಳೆಯಲಾಗುತ್ತದೆ. ತಾಲೂಕಿನಲ್ಲಿ ಒಟ್ಟು ಬಿತ್ತನೆಯ ಪ್ರದೇಶ ಶೇ. ೫೫.೫೬ ರಷ್ಟು ನೀರಾವರಿ ಪ್ರದೇಶವಿದೆ.

ಭಾರತೀಯ ಸಮಾಜವು ಹಲವಾರು ಜನಾಂಗ, ಜಾತಿ, ಭಾಷೆ, ಧರ್ಮಗಳಿಂದ ಕೂಡಿರುವ ವೈವಿದ್ಯಮಯ ದೇಶವಾಗಿದೆ. ಇದರಂತೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು ಹಲವಾರು ಜಾತಿ, ಉಪಜಾತಿ, ಭಾಷೆ, ಧರ್ಮಗಳನ್ನು ಒಳಗೊಂಡಿದೆ. ಈ ಪ್ರದೇಶವು ವೈವಿದ್ಯತೆ ಹೊಂದಿದ್ದರೂ ಏಕತೆಯನ್ನು ಕಾಣಬಹುದು. ಗಂಗಾವತಿ. ತಾಲೂಕಿನಲ್ಲಿ ವಿವಿಧ ಸಮುದಾಯಗಳು ಕಂಡುಬರುತ್ತವೆ. ಈ ಪ್ರದೇಶದ ಪ್ರಮುಖ ಸಮುದಾಯಗಳೆಂದರೆ ಲಿಂಗಾಯತ, ರೆಡ್ಡಿ (ಆಂದ್ರ ಮೂಲದ), ಗೌಳಿಗರು, ನಾಯಕರು, ಮೇದರು, ವೇಷಗಾರ, ಗೊಲ್ಲರು, ಕುರುಬ, ಲಂಬಾಣಿ, ಅಗಸ, ಹೂಗಾರ, ಬ್ರಾಹ್ಮಣ, ಮುಸ್ಲಿಂ, ಕ್ರಿಶ್ಚಿಯನ್, ಜೈನರು ಮುಂತಾದ ಜಾತಿ ಮತ್ತು ಧರ್ಮದವರು ಕಂಡುಬರುತ್ತಾರೆ. ಹಲವಾರು ಧರ್ಮ ಜಾತಿಗಳಿಗೆ ಸಂಬಂಧಿಸಿದಂತೆ ವಿಭಿನ್ನ ಸಂಸ್ಕೃತಿಯು ಕಂಡುಬರುತ್ತದೆ. ಹಿಂದೂ ಧರ್ಮದ ಹಲವಾರು ದೇವಾಲಯಗಳು, ಇಸ್ಲಾಂ ಧರ್ಮದ ಮಸೀದಿಗಳು, ಕ್ರೈಸ್ತ ಧರ್ಮದ ಚರ್ಚ್‌ಗಳು, ಜೈನ ಧರ್ಮದ ಬಸ್ತಿಗಳು ಪ್ರಮುಖವಾಗಿ ಕಂಡುಬರುತ್ತವೆ. ಹೋಳಿ, ದೀಪಾವಳಿ, ಗಣೇಶ ಚತುರ್ಥಿ, ಮೊಹರಂ, ರಂಜಾನ್, ಕ್ರಿಸ್‌ಮಸ್ ಮುಂತಾದ ಹಬ್ಬಗಳನ್ನು ಎಲ್ಲಾ ಧರ್ಮದವರು ಸೇರಿ ಆಚರಿಸುತ್ತಾರೆ. ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವುದರಲ್ಲಿ ಗಂಗಾವತಿ ತಾಲೂಕು ಮಹತ್ವದ ಪಾತ್ರ ವಹಿಸಿದೆಯೆಂದು ಹೇಳಬೇಕಾಗುತ್ತದೆ.

ಗಂಗಾವತಿ ತಾಲೂಕು ಪ್ರದೇಶವು ಐತಿಹಾಸಿಕಾಗಿ ಹಿನ್ನೆಲೆಯನ್ನು ಒಳಗೊಂಡಿದೆ. ಗಂಗಾವತಿ ತಾಲೂಕಿನ ಗಂಗಾವತಿ, ಸಂಗಾಪುರ, ಮಲ್ಲಾಪುರ, ಆಗೋಲಿ, ಗಡ್ಡಿ, ಹಿರೇಬೆಣಕಲ್ ಪ್ರದೇಶಗಳು ಶಿಲಾಯುಗದ ಕುರುಹುಗಳ ಬಗ್ಗೆ ಇತಿಹಾಸ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಏಳು ಬೆಟ್ಟಗಳ ಸಾಲಿನ ಹಲವಾರು ಪ್ರದೇಶಗಳಲ್ಲಿ ಶಿಲಾಯುಗದ ಗವಿ ಚಿತ್ರಗಳು ಕಂಡುಬರುತ್ತವೆ. ರಾಮಾಯಣ ಮಹಾ ಕಾವ್ಯದಲ್ಲಿ ಉಲ್ಲೇಖಿತವಾಗಿರುವ ಕಿಷ್ಕಿಂದ ಪ್ರದೇಶ ಈ ಭಾಗದಲ್ಲಿ ಕಂಡುಬರುವುದರಿಂದ ಈ ಸ್ಥಳ ಐತಿಹಾಸಿಕ ಹಿರಿಮೆಯ ಹೆಗ್ಗಳಿಕೆಗೆ ಪಾತ್ರವಾಗಿದೆ. "ಆನೆಗುಂದಿ, ಹಿರೇಬೆಣಕಲ್, ಕನಕಗಿರಿ, ಹೆಬ್ಬಾಳ ಪ್ರದೇಶಗಳು ಐತಿಹಾಸಿಕತೆಯನ್ನು ಚಿತ್ರಿಸುತ್ತವೆ. ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪಿ ನೋಡಬೇಕು." ಎಂಬ ಪ್ರತೀತಿ ಇದೆ. ಗಂಗಾವತಿಯ ಚನ್ನಬಸವೇಶ್ವರ, ಕೊಟ್ಟೂರೇಶ್ವರ, ಕನಕಗಿರಿಯ ಕನಕಾಚಲಪತಿ, ಆರ್ಹಾಳ ಗ್ರಾಮದ ರುದ್ರಮುನಿ ಸ್ವಾಮಿ, ಹೇರೂರು ವಿರುಪನಗೌಡ ತಾತ, ಹೆಬ್ಬಾಳ ಮಠ, ಚಿಕ್ಕ ಬೆಣಕಲ್ ಬೆಟ್ಟದ ಲಿಂಗೇಶ್ವರ ಮುಂತಾದ ಪ್ರಮುಖವಾದ ಸ್ಥಳಗಳಲ್ಲಿ ಜಾತ್ರಾ ಮಹೋತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ. ಈ ಪ್ರದೇಶವನ್ನು ಹಲವಾರು ರಾಜ ಮನೆತನಗಳು ಆಳಿವೆ. ಕನಕಗಿರಿಯ

ಪಾಳೇಗಾರರು ಹುಲಿಹೈದರ ಸಂಸ್ಥಾನ ಮತ್ತು ಆನೆಗುಂದಿ ಸಂಸ್ಥಾನಗಳು ಆಳ್ವಿಕೆ ನಡೆಸಿದ್ದರ ಬಗ್ಗೆ ಇತಿಹಾಸ ದಾಖಲೆಯನ್ನು ನೀಡುತ್ತವೆ.

ತುಂಗಭದ್ರ ಜಲಾಶಯ ನಿರ್ಮಾಣದ ನಂತರ ಈ ಪ್ರದೇಶವು ಮುಟ್ಟಿದ್ದೆಲ್ಲ ಚಿನ್ನವೆನ್ನುವಂತೆ ಆರ್ಥಿಕವಾಗಿ ದಿನದಿಂದ ದಿನಕ್ಕೆ ಪ್ರಗತಿಯನ್ನು ಸಾಧಿಸುತ್ತಾ ಮುನ್ನಡೆದಿದೆ. ಗಂಗಾವತಿ ತಾಲೂಕು ಸುಮಾರು ೪೦ ಕ್ಕೂ ಅಧಿಕ ರೈಸ್ ಮಿಲ್‌ಗಳನ್ನು ಒಳಗೊಂಡಿದೆ. ಅಂದರೆ ಈ ಪ್ರದೇಶವು ಭತ್ತದ ಕಣಜವೆಂದು ತಿಳಿದು ಬರುತ್ತದೆ. ಈ ಪ್ರದೇಶದಲ್ಲಿ ಉತ್ಕೃಷ್ಟ ತಳಿಯ "ಸೋನಾ ಮಸೂರಿ" ಭತ್ತವನ್ನು ಬೆಳೆಯಲಾಗುತ್ತದೆ. ಇಲ್ಲಿನ ಅಕ್ಕಿ ದೇಶ ವಿದೇಶಗಳಿಗೆ ರಫ್ತಾಗುತ್ತದೆ. ಪ್ರಸ್ತುತ ಸ್ಥಗಿತವಾಗಿರುವ ಗಂಗಾವತಿ ಶುಗರ್ಸ್ ಲಿಮಿಟೆಡ್ ಭಾರತದಲ್ಲಿ ಅತಿ ದೊಡ್ಡದಾದ ಸಕ್ಕರೆ ಕಾರ್ಖಾನೆ. ಅದು ಏಷ್ಯಾ ಖಂಡದಲ್ಲೇ ಎರಡನೇ ಸ್ಥಾನವನ್ನು ಹೊಂದಿದೆ. ಈ ಪ್ರದೇಶವು ಶ್ರೀಮಂತಿಕೆಯ ಜೊತೆಗೆ ಹಲವಾರು ಆರ್ಥಿಕ ಸಮಸ್ಯೆಗಳನ್ನು ಒಳಗೊಂಡಿದೆ. ಬಡತನ, ನಿರುದ್ಯೋಗ, ಭಿಕ್ಷಾಟನೆ, ವೇಶ್ಯಾವಾಟಿಕೆ ಮುಂತಾದ ಸಮಸ್ಯೆಗಳಿಂದ ತೊಳಲಾಡುತ್ತಿದೆ. ಒಂದೆಡೆ ಆಗರ್ಭ ಶ್ರೀಮಂತರು ಕಂಡುಬಂದರೆ, ಇನ್ನೊಂದೆಡೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗದ ನಿರ್ಗತಿಕ ಜನ ವರ್ಗದವರು ಕಂಡು ಬರುತ್ತಾರೆ.

ಕರ್ನಾಟಕ ರಾಜ್ಯವು ಶೇಕಡಾ ೬೬.೬ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಜಿಲ್ಲಾವಾರು ನೋಡುವುದಾದರೆ ಕೊಪ್ಪಳ ಜಿಲ್ಲೆಯು ಶೇಕಡಾ ೫೪.೧೧ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ಗಂಗಾವತಿ ತಾಲೂಕು ಶೇಕಡಾ ೫೩.೧ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಈ ಪ್ರದೇಶದಲ್ಲಿ ಮಹಿಳೆಯರಿಗಿಂತ ಪುರುಷ ಸಾಕ್ಷರರು ಹೆಚ್ಚಾಗಿದ್ದಾರೆ. ಸ್ತ್ರೀ ಪುರುಷರ ಸಾಕ್ಷರತೆಯನ್ನು ಅನುಕ್ರಮವಾಗಿ ಶೇಕಡಾ ೪೦.೩ ಮತ್ತು ಶೇಕಡಾ ೬೫.೯ ರಷ್ಟಿದೆ.

ಗಂಗಾವತಿ ತಾಲೂಕು ಸ್ವಾತಂತ್ರ್ಯ ಪೂರ್ವದಲ್ಲಿಯೇ ಸ್ವಾತಂತ್ರ್ಯ ಚಳುವಳಿಯಲ್ಲಿ ಗುರುತಿಸಿಕೊಂಡ ಸ್ಥಳವಾಗಿದೆ. ಹಲವಾರು ಹಿರಿಯ ದೇಶಭಕ್ತರು ಬ್ರಿಟೀಷರ ಮತ್ತು ನಿಜಾಮರ ಆಡಳಿತದ ವಿರುದ್ಧ ಹೋರಾಟ ಮಾಡಿರುವುದು ತಿಳಿದು ಬರುತ್ತದೆ. ಪ್ರಮುಖ ಹೋರಾಟಗಾರರೆಂದರೆ ಸರ್ವಶ್ರೀ ಆರ್.ಎಂ. ಗಂಗಾವತಿ, ಕಶೇವರಾವ್ ದೇಶಪಾಂಡೆ, ಸುಗಂಧಿ ಪಂಪಣ್ಣ, ಮಾಸ್ತರ್ ಎಸ್.ಗುರುರಾಜ್‌ರಾವ್ ಹೊಸಳ್ಳಿ, ಮುಕ್ಕುಂದಿ ವೆಂಕೋಬಾಚಾರ್, ಕಾರಟಗಿ ರುದ್ರಪ್ಪ, ಪ್ರಹ್ಲಾದ್‌ರಾವ್, ಕನಕಗಿರಿ ಹಂಪಯ್ಯ, ನಂದಿಹಳ್ಳಿ ರುದ್ರಗೌಡ, ತಿರುಮಲರಾವ್, ಅಕ್ಬರ್, ವನವಳ್ಳಿ ಲಕ್ಷ್ಮಣರಾವ್, ಅಡವಿರಾವ್ ಜಂತಕಲ್, ಡಾ॥ ರಾಮರಾವ್, ಜಯತೀರ್ಥರಾಜ ಪುರೋಹಿತ, ವೈ.ಡಿ. ವೆಂಕೋಬಾಚಾರ್, ಬಿ.ಎನ್.ಅಂಗಡಿ, ಭೋಗೇಶ್‌ರಾವ್, ಗುರುರಾಜ್ ನವಲಿ, ಕೆಂಪಯ್ಯ, ಲಿಂಗಯ್ಯ, ಕೇಶವರಾಜ್ ಶ್ರೀಖಂಡೆ, ಯರಡೋಣಿ ವೆಂಕೋಬಾಚಾರ್, ಒಡೆಯರ ಕನಕಪ್ಪಾಚಾರ್, ಭೀಮಸೇನ್‌ರಾವ್ ಬೆಣಕಲ್, ಬಸಪ್ಪ ಆನೆಗುಂದಿ, ಈರಣ್ಣ

ಆನೆಗುಂದಿ, ಅನಂತಕೃಷ್ಣ ಆನೆಗುಂದಿ, ಮಾಧವಾಚಾರ್ ಜಾಗಿರ್‌ದಾರ್, ಮುಷ್ಟೂರು ಶ್ರೀನಿವಾಸರಾವ್, ರಾಮಭಟ್ಟ ಜೋಷಿ, ರಾಯಚೂರು ಶಿವಯ್ಯ, ಸುಗಂಧಿ ಅನಂತಪ್ಪ .ಎಂ., ಅಮರಪ್ಪ, ಬಿ.ಮರಿಯಪ್ಪ, ಜಿ.ಮಾದೇವಪ್ಪ, ಭಾವಿಕಟ್ಟಿ ಜಗಧೀಶಪ್ಪ ಮತ್ತು ಇತರರು ಪ್ರಮುಖರಾಗಿದ್ದಾರೆ.[೫೬] ೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಈ ಪ್ರಾಂತವು ಹೈದ್ರಾಬಾದ್‌ನ ನಿಜಾಮನ ಆಳ್ವಿಕೆಯಲ್ಲಿತ್ತು. ಈ ಆಳ್ವಿಕೆಯನ್ನು ಲೆಕ್ಕಿಸದೇ ತಾಲೂಕಿನ ಸ್ವತಂತ್ರ್ಯ ಹೋರಾಟಗಾರರು ಧ್ವಜಾರೋಹಣವನ್ನು ಆಚರಿಸಿದರು. ಕೊಪ್ಪಳ ಜಿಲ್ಲೆಯು ಒಂದು ಲೋಕಸಭೆ ಮತ್ತು ೫ ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಗಂಗಾವತಿ ತಾಲೂಕು ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಸ್ವತಂತ್ರ್ಯ ಪೂರ್ವದಿಂದ ಇಂದಿನ ವರೆಗೆ ಗಂಗಾವತಿ ತಾಲೂಕು ರಾಜಕೀಯವಾಗಿ ತನ್ನದೇ ಆದ ಮಹತ್ವವನ್ನು ಹೊಂದಿದೆ.

೨.೨ ಹೋಬಳಿಗಳ ಪರಿಚಯ :

ಆಡಳಿತ ಮತ್ತು ಇನ್ನಿತರ ಅನುಕೂಲತೆಗಾಗಿ ಹೋಬಳಿಗಳನ್ನಾಗಿ ರಚಿಸಲಾಗಿದೆ. ಈ ಹೋಬಳಿಗಳು ಒಟ್ಟಾರೆ ಆಡಳಿತದ ಪ್ರಮುಖ ಅಂಶಗಳಾಗಿ ಕಾರ್ಯನಿರ್ವಹಿಸುತ್ತಿವೆ. ಹೋಬಳಿಗಳು ಕಂದಾಯ ವಸೂಲಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರತಿಯೊಂದು ತಾಲೂಕು ತನ್ನದೇ ಆದ ಹೋಬಳಿಗಳನ್ನು ಒಳಗೊಂಡಿರುತ್ತೆ. ವಿಸ್ತೀರ್ಣ, ಜನಸಂಖ್ಯೆ ಮತ್ತು ಗ್ರಾಮಗಳ ಆಧಾರದ ಮೇಲೆ ಹೋಬಳಿಗಳನ್ನು ರಚಿಸಲಗುತ್ತದೆ. ಗಂಗಾವತಿ ತಾಲೂಕು ಸಹ ತನ್ನದೇ ಆದ ಪ್ರಮುಖ ಎಂಟು ಹೋಬಳಿಗಳನ್ನು ಒಳಗೊಂಡಿದೆ. ಈ ಹೋಬಳಿಗಳು ತಾಲೂಕಿನ ಆಡಳಿತದಲ್ಲಿ ತಮ್ಮದೇ ಆದ ಸಕ್ರೀಯ ಪಾತ್ರವನ್ನು ನಿರ್ವಹಿಸುತ್ತವೆ. ತಾಲೂಕಿನ ಹೋಬಳಿಗಳೆಂದರೆ ಗಂಗಾವತಿ, ಕನಕಗಿರಿ, ಮರಳಿ, ಕಾರಟಗಿ, ನವಲಿ, ಸಿದ್ದಾಪುರ, ಹುಲಿಹೈದರ ಮತ್ತು ವೆಂಕಟಗಿರಿ. ಗಂಗಾವತಿ, ಕಾರಟಗಿ, ಮರಳಿ, ಸಿದ್ದಾಪುರ ಹೋಬಳಿಗಳು ನೀರಾವರಿ ಸೌಲಭ್ಯವನ್ನು ಪಡೆದಿವೆ. ಕನಕಗಿರಿ, ವೆಂಕಟಗಿರಿ, ಹುಲಿಹೈದರ ಮತ್ತು ನವಲಿ ಹೋಬಳಿಗಳು ಒಣ ಭೂಮಿಯನ್ನು ಹೊಂದಿವೆ. ಗಂಗಾವತಿ ತಾಲೂಕಿನ ಹೋಬಳಿಗಳ ವಿವರಗಳು ಈ ಕೆಳಗಿನಂತಿವೆ.

೧. ಗಂಗಾವತಿ :

ಗಂಗಾವತಿ ಪ್ರದೇಶವು ಕೊಪ್ಪಳ ಜಿಲ್ಲೆಯಲ್ಲಿಯೇ ನಗರ ಮತ್ತು ತಾಲೂಕಾಗಿ ಮುಂದುವರೆದುದಾಗಿದೆ. ಆರ್ಥಿಕ ಚಟುವಟಿಕೆಗಳ ಕೇಂದ್ರ ಸ್ಥಾನವೂ ಇದಾಗಿದೆ. ವಾಣಿಜ್ಯ ವ್ಯವಹಾರಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಆರ್ಥಿಕ ವ್ಯವಹಾರದಲ್ಲಿ ಈ ಜಿಲ್ಲೆಯಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಗಂಗಾವತಿ ನಗರದ ಸುತ್ತಮುತ್ತ ಸುಮಾರು ೪೦ ಕ್ಕೂ ಅಧಿಕ ರೈಸ್‌ಮಿಲ್‌ಗಳನ್ನು ಒಳಗೊಂಡಿದೆ. ಗಂಗಾವತಿ ನಗರವು ನಗರಸಭೆ ಆಡಳಿತಕ್ಕೆ ಒಳಪಟ್ಟಿದೆ ಮತ್ತು ಈ ಹೋಬಳಿಯು ಗಂಗಾವತಿಯ ೩೨ ವಾರ್ಡ್‌ಗಳನ್ನು, ಸಂಗಾಪುರ, ಮಲ್ಲಾಪುರ, ಆನೆಗುಂದಿ ಗ್ರಾಮ ಪಂಚಾಯತಿಗಳನ್ನು ಒಳಗೊಂಡಿದೆ. ಈ ಹೋಬಳಿಯಲ್ಲಿ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಸದಸ್ಯರ ಒಟ್ಟು ಸಂಖ್ಯೆ ೭.

೨. ಮರಳಿ :

ಮರಳಿ ಪ್ರಸಿದ್ಧವಾದ ಸಕ್ಕರೆ ಕಾರ್ಖಾನೆಯನ್ನು ಹೊಂದಿದೆ. ಈ ಹೋಬಳಿಯಲ್ಲಿ ಬರುವ ಹೆಬ್ಬಾಳ ಗ್ರಾಮವು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಹೆಬ್ಬಾಳ ಗ್ರಾಮದಲ್ಲಿರುವ ಹೆಬ್ಬಾಳ ಮಠವನ್ನು ರಾಕ್ಷಸರಿಂದ ನಿರ್ಮಿಸಲಾಗಿದೆ ಎನ್ನುವ ಪ್ರತೀತಿ ಇದೆ. ಇಂದಿಗೂ ಸಹ ದೆವ್ವ ಹಿಡಿದವರನ್ನು ಅದರಿಂದ ಮುಕ್ತಿಗೊಳಿಸುವುದಕ್ಕಾಗಿ ಕರೆದುಕೊಂಡು ಹೋಗುವುದು ಇಂದಿಗೂ ರೂಢಿಯಲ್ಲಿದೆ. ಆ ಮಠಕ್ಕೆ ಹೋದರೆ ಹಿಡಿದ ದೆವ್ವ ಬಿಡುತ್ತದೆ ಎಂಬ ನಂಬಿಕೆ ಇದೆ. ಮರಳಿ

ಹೋಬಳಿಯು ಗಂಗಾವತಿ ತಾಲೂಕಿನ ಪ್ರಮುಖ ನೀರಾವರಿ ಸೌಲಭ್ಯವನ್ನು ಹೊಂದಿದೆ ಮತ್ತು ಆರ್ಥಿಕವಾಗಿ ಹೆಚ್ಚಿನ ಆದಾಯವನ್ನು ತಂದುಕೊಡುವ ಹೋಬಳಿಯಾಗಿ ಗುರುತಿಸಿಕೊಂಡಿದೆ. ಈ ಹೋಬಳಿಯಲ್ಲಿ ಗ್ರಾಮ ಪಂಚಾಯತಿಗಳೆಂದರೆ ಮರಳಿ, ಢಣಾಪುರ, ಚಿಕ್ಕಜಂತಕಲ್, ಹೊಸಕೇರ, ಶ್ರೀರಾಮನಗರ, ಹಣವಾಳ ಮತ್ತು ಹೇರೂರು. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಸದಸ್ಯರುಗಳ ಸಂಖ್ಯೆ ೧೬.

೩. ಸಿದ್ದಾಪುರ :

ಈ ಹೋಬಳಿಯು ನೀರಾವರಿ ಸೌಲಭ್ಯವನ್ನು ಹೊಂದಿದೆ. ತುಂಗಭದ್ರಾ ನದಿಯ ದಡದಲ್ಲಿ ಕೆಲವೊಂದು ಗ್ರಾಮಗಳನ್ನು ಒಳಗೊಂಡಿದೆ. ಈ ಹೋಬಳಿಯ ಕೆಲವೊಂದು ಗ್ರಾಮಗಳು ನದಿಯ ನೀರನ್ನು ಬಳಸಿಕೊಂಡು ಬೇಸಾಯ ಮಾಡುತ್ತವೆ. ಈ ಹೋಬಳಿಯಲ್ಲಿ ಗ್ರಾಮ ಪಂಚಾಯತಿಗಳೆಂದರೆ ಸಿದ್ದಾಪುರ, ಮುಷ್ಟೂರು, ಉಳೇನೂರು, ಬನ್ನೂರು ಮತ್ತು ಗುಂಡುರು. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಸದಸ್ಯರುಗಳ ಸಂಖ್ಯೆ ೧೧.

೪. ಕಾರಟಗಿ

ಗಂಗಾವತಿ ತಾಲೂಕಿನಲ್ಲಿ ಕಾರಟಗಿಯು ಅತಿ ದೊಡ್ಡ ಗ್ರಾಮವಾಗಿದೆ. ಗಂಗಾವತಿ ನಂತರದ ಸ್ಥಾನವನ್ನು ಈ ಗ್ರಾಮವು ಪಡೆದುಕೊಂಡಿದೆ ಎಂದು ಹೇಳಬಹುದು. ಗಂಗಾವತಿ ನಂತರ ಕಾರಟಗಿ ಹೋಬಳಿಯು ಅತಿ ಹೆಚ್ಚು ರೈಸ್‌ಮಿಲ್‌ಗಳನ್ನು ಹೊಂದಿರುವ ಪ್ರದೇಶವಾಗಿದೆ. ಈ ಗ್ರಾಮವನ್ನು ಹೊಸ ತಾಲೂಕನ್ನಾಗಿ ಪರಿಗಣಿಸುವುದರ ಸಲುವಾಗಿ ಹೆಚ್ಚಿನ ಹೋರಾಟ ಪ್ರತಿಭಟನೆಗಳು ನಡೆದಿರುವುದು ಕಂಡುಬರುತ್ತದೆ. ಆರ್ಥಿಕವಾದ ಸಮೃದ್ಧಿಯನ್ನು ಈ ಹೋಬಳಿಯು ಒಳಗೊಂಡಿದೆ. ಕಾರಟಗಿ ಗ್ರಾಮದಲ್ಲಿ ಹೆಚ್ಚುವರಿ ತಹಸಿಲ್ದಾರನನ್ನು ನೇಮಿಸಿ ಅಧಿಕಾರ ವಹಿಸಿರುವುದರಿಂ ಒಂದು ರೀತಿಯಲ್ಲಿ ತಾಲೂಕಾಗಿ ಮಾರ್ಪಟ್ಟಿದೆ ಎಂದು ಹೇಳಬಹುದು. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳೆಂದರೆ ಕಾರಟಗಿ, ಬೇವಿನಾಳ, ಚಳ್ಳೂರು, ಉಳ್ಳಿಹಾಳ, ಮರ್ಲಾನಹಳ್ಳಿ, ಬೂದಗುಂಪ ಮತ್ತು ಯರಡೋಣ. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಸದಸ್ಯರುಗಳ ಸಂಖ್ಯೆ ೩೧.

೫. ನವಲಿ :

ನವಲಿ ಪ್ರದೇಶವು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ನವಲಿ ಭಾಗದ ಜನರು ನಿಜಾಮ್ ಸರ್ಕಾರದ ವಿರುದ್ಧ ಬಂಡಾಯವೆದ್ದಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಸರ್ಕಾರಕ್ಕೆ ಕಂದಾಯ ನೀಡದೆ ಪ್ರತಿಭಟಿಸಿರುವುದನ್ನು ಚರಿತ್ರೆಯಿಂದ ತಿಳಿದುಕೊಳ್ಳುತ್ತೇವೆ.

ಪೋಲೀಸರು ಮತ್ತು ಗ್ರಾಮದವರ ಮಧ್ಯೆ ಸಂಘರ್ಷ ಸಂಭವಿಸಿ ಹಲವಾರು ಜನ ಮರಣ ಹೊಂದಿದರು. ಈ ಹೋರಾಟದ ಪ್ರಮುಖ ನಾಯಕರಲ್ಲೊಬ್ಬರಾದ ಮೂಕಣ್ಣ ಕಂಬಳಿ ಎನ್ನುವ ಮುಖಂಡ ಮೃತಪಟ್ಟ ಸ್ಥಳದಲ್ಲಿ ಕಟ್ಟೆಯನ್ನು ಕಟ್ಟಿಸಿ ಪ್ರತಿವರ್ಷ ಧ್ವಜಾರೋಹಣ ಮಾಡುವುದು ಕಂಡುಬರುತ್ತದೆ. ಈ ಹೋಬಳಿಯು ಒಣ ಭೂಮಿಯನ್ನು ಹೊಂದಿದೆ. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳೆಂದರೆ ನವಲಿ, ಕರಡೋಣ ಮತ್ತು ಚಿಕ್ಕಡಂಕನಕಲ್. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಸದಸ್ಯರುಗಳ ಸಂಖ್ಯೆ ೧೬.

೬. ಕನಕಗಿರಿ :

'ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪಿ ನೋಡಬೇಕು' ಎಂಬ ಪ್ರತೀತಿ ಇದೆ. ಕನಕಗಿರಿಯು ಐತಿಹಾಸಿಕವಾದ ತಾಣವಗಿದೆ. ಈ ಪ್ರದೇಶವು ಪಾಳೆಗಾರಿಕೆಗೆ ಒಳಪಟ್ಟಿದ್ದಾಗಿದೆ. ಕನಕಗಿರಿ ಇತಿಹಾಸದಲ್ಲಿ ತನ್ನದೇ ಆದ ಹಿನ್ನೆಲೆಯನ್ನು ಹೊಂದಿದೆ. ೧೪೩೬ ರಿಂದಲೇ ಕನಕಗಿರಿಯು ಪಾಳೇಗಾರಿಕೆಗೆ ಒಳಪಟ್ಟಿದ್ದು ಇತಿಹಾಸದಿಂದ ತಿಳಿದುಬರುತ್ತದೆ. ಹೈದರಾಬಾದ್ ನಿಜಾಮ, ಟಿಪ್ಪುಸುಲ್ತಾನ ಮುಂತಾದ ಪ್ರಮುಖ ನಾಯಕರ ಆಡಳಿತಕ್ಕೆ ಒಳಪಟ್ಟಿರುವುದು ವಿಶೇಷವಾಗಿದೆ. ಕನಕಗಿರಿಯಲ್ಲಿನ ಪ್ರಮುಖ ದೈವವಾದ ಕನಕಾಚಾಲಪತಿ ದೇವರ ಆರಾಧಕರು ದೇಶದ ಮೂಲೆ ಮೂಲೆಯಲ್ಲಿ ನೆಲೆಸಿದ್ದಾರೆ. ಈ ಹೋಬಳಿಯಲ್ಲಿ ಗೊಲ್ಲರು ಎನ್ನುವ ಸಮುದಾಯದವರು ಕಂಡುಬರುತ್ತಾರೆ. ಈ ಪ್ರದೇಶವು ಒಣಭೂಮಿಯನ್ನು ಹೊಂದಿದೆ. ಆರ್ಥಿಕವಾಗಿ ಅಷ್ಟೊಂದು ಸಂಪದ್ಭರಿತವಲ್ಲದ ಪ್ರದೇಶವಾಗಿದೆ. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳೆಂದರೆ ಕನಕಗಿರಿ, ಹಿರೇಖೇಡ, ಸುಳೇಕಲ್, ಚಿಕ್ಕ ಮಾದಿನಾಳ ಮತ್ತು ಮುಸಲಾಪುರ. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಸದಸ್ಯರುಗಳ ಸಂಖ್ಯೆ ೧೫.

೭. ಹುಲಿಹೈದರ :

ಹುಲಿಹೈದರ ಹೋಬಳಿಯು ಇತಿಹಾಸದಲ್ಲಿ ತನ್ನದೇ ಆದ ಹಿನ್ನೆಲೆಯನ್ನು ಹೊಂದಿದೆ. ಈ ಹೋಬಳಿಯು ಕ್ರಿ.ಶ. ೧೮೩೩ ರಲ್ಲಿ ಪಾಳೇಗಾರಿಕೆಗೆ ಒಳಪಟ್ಟಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಹೈದ್ರಾಬಾದ್ ನಿಜಾಮ, ಟಿಪ್ಪು ಸುಲ್ತಾನ್ ಮುಂತಾದ ಪ್ರಮುಖ ನಾಯಕ ಆಡಳಿತಕ್ಕೆ ಒಳಪಟ್ಟಿರುವುದು ವಿಶೇಷವಾಗಿದೆ. ಹುಲಿಹೈದರ ಹೋಬಳಿಯು ಹುಲಿಹೈದರ, ಗೌರಿಪುರ ಗ್ರಾಮ ಪಂಚಾಯತಿಗಳನ್ನು ಒಳಗೊಂಡಿದೆ. ಈ ಗ್ರಾಮ ಪಂಚಾಯತಿಗಳಿಂದ ಪರಿಶಿಷ್ಟ ಪಂಗಡದ ೧೩ ಜನ ಸದಸ್ಯರು ಆಯ್ಕೆಯಾಗಿದ್ದಾರೆ.

೮. ವೆಂಕಟಗಿರಿ :

ಕ್ರಿ.ಪೂ. ನವಶಿಲಾಯುಗ ಸಂಸ್ಕೃತಿಯನ್ನು ಈ ಪ್ರದೇಶವು ಒಳಗೊಂಡಿತ್ತೆಂದು ತಿಳಿದುಬರುತ್ತದೆ. ಈ ಹೋಬಳಿಯು ಹಿರೇಬೆಣಕಲ್, ಗಡ್ಡಿ, ಆಗೋಲಿ ಪ್ರದೇಶಗಳು ಇತಿಹಾಸಲದಲ್ಲಿ ಗುರುತಿಸಿಕೊಂಡಿವೆ. ಹಿರೇಬೆಣಕಲ್ ಪ್ರದೇಶದಲ್ಲಿ ಗುಹೆಗಳು, ಶಿಲಾಸಮಾಧಿಗಳು ಇತಿಹಾಸವನ್ನು ಹೊಂದಿವೆ. ಈ ಪ್ರದೇಶವು ಒಣಭೂಮಿಯಿಂದ ಕೂಡಿದ್ದರೂ ತನ್ನದೇ ಆದ ಐತಿಹಾಸಿ ಕಥೆಯನ್ನು ಹೊಂದಿರುವುದು ವಿಶೇಷವಾಗಿದೆ. ಚಿಕ್ಕಬೆಣಕಲ್, ಇಂದರಗಿ ಗ್ರಾಮಗಳ ಬೆಟ್ಟಗಳಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕುರುಹುಗಳು ದೊರೆತಿವೆ. ಬೇಸಾಯದ ಜೊತೆಗೆ ಈ ಪ್ರದೇಶದಲ್ಲಿ ಇಟ್ಟಿಗೆ ತಯಾರಿಕೆಯನ್ನು ಉಪಕಸುಬಾಗಿ ಅನುಸರಿಸುವುದರಿಂದ ಇಟ್ಟಿಗೆ ತಯಾರಿಕೆಯು ಬಹುಮುಖ್ಯವಾದ ವೃತ್ತಿಯಾಗಿಯೂ ಗುರುತಿಸಿಕೊಂಡಿದೆ. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳೆಂದರೆ ವೆಂಕಟಗಿರಿ, ಕೇಸರಹಟ್ಟಿ, ಆಗೋಲಿ, ವಡ್ಡರಹಟ್ಟಿ, ಚಿಕ್ಕಬೆಣಕಲ್ ಮತ್ತು ಬಸಾಪಟ್ಟಣ. ಈ ಹೋಬಳಿಯಲ್ಲಿ ಬರುವ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಸದಸ್ಯರುಗಳ ಸಂಖ್ಯೆ ೨೨.

ಗಂಗಾವತಿ ತಾಲೂಕಿನ ಈ ಹೋಬಳಿಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಈ ಹೋಬಳಿಗಳು ತಮ್ಮತಮ್ಮ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದರ ಮೂಲಕ ತಾಲೂಕಿನ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಹೋಬಳಿಗಳು ನಿರ್ವಹಿಸುವ ಪ್ರಮುಖ ಕೆಲಸಗಳೆಂದರೆ ಕಂದಾಯ ವಸೂಲಿ, ಭೂದಾಖಲಾತಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಉದ್ದೇಶವನ್ನು ಹೊಂದಿವೆ.

ಅಡಿ ಟಿಪ್ಪಣಿಗಳು :

೧. ಶರಣಬಸಪ್ಪ ಪ.ಕೋಲ್ಕಾರ (ಸಂ); **ಅಕ್ಷಯ ಸವಿಸಂಚಿಕೆ;** ೨೦೦೨.

೨. ಇರಕಲ್ ವ್ಹಿ.ಹೆಚ್. (ಲೇ); **ಪ್ರಜಾಪ್ರಪಂಚ** (ದೀಪಾಳಿ ವಿಶೇಷ); ೨೦೦೬, ಪುಟ ೩.

೩. ಶರಣಬಸಪ್ಪ ಪ.ಕೋಲ್ಕಾರ (ಸಂ); **ಅಕ್ಷಯ ಸವಿಸಂಚಿಕೆ;** ೨೦೦೨.

೪. ಇರಕಲ್ ವ್ಹಿ.ಹೆಚ್. (ಲೇ); **ಪ್ರಜಾಪ್ರಪಂಚ** (ದೀಪಾಳಿ ವಿಶೇಷ); ೨೦೦೬, ಪುಟ ೩.

೫. ಅದೇ, ಪುಟ ೩.

೬. ಶರಣಬಸಪ್ಪ ಪ.ಕೋಲ್ಕಾರ (ಸಂ); **ಅಕ್ಷಯ ಸವಿಸಂಚಿಕೆ;** ೨೦೦೨.

ಅಧ್ಯಾಯ ೩

೩. ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ

೩.೧ ಪಂಚಾಯತ್ ರಾಜ್ ಹುಟ್ಟಿಕೊಳ್ಳಲು ಕಾರಣಗಳು, ಪ್ರಭಾವ ಮತ್ತು ಪ್ರೇರಣೆಗಳು

೩.೨ ಪಂಚಾಯತ್ ರಾಜ್ ಮತ್ತು ತಿದ್ದುಪಡಿಗಳು

೩.೩ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ

ಪೀಠಿಕೆ :

ಪ್ರಾಚೀನ ಕಾಲದಿಂದಲೂ ಮಾನವನು ನ್ಯಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಸಮಾಜ ಮನ್ನಿತವಾದ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಬಂದಿದ್ದಾನೆ. "ವೇದ ಕಾಲದ ಸಮಾಜವು ಗ್ರಾಮೀಣ ಆಡಳಿತಕ್ಕಾಗಿ ಗ್ರಾಮ ಪಂಚಾಯತಿಗಳನ್ನು ಅಸ್ತಿತ್ವಕ್ಕೆ ತಂದಿತ್ತು ಎಂಬುದು ವೇದಕಾಲದ ಸಾಹಿತ್ಯ ಅಧ್ಯಯನದಿಂದ ತಿಳಿದು ಬರುತ್ತದೆ."[1] "ಪ್ರತಿಯೊಂದು ಗ್ರಾಮದಲ್ಲಿಯೂ ವಿವಿಧ ಜಾತಿಗಳಿಗನುಗುಣವಾಗಿ ಪ್ರತಿ ಜಾತಿಗೆ ಒಂದು ಜಾತಿ ಪಂಚಾಯತಿ ಇರುತ್ತದೆ. ತಮ್ಮ ತಮ್ಮ ಜಾತಿಯ ೫ ಜನ ಹಿರಿಯರನ್ನು ಆಯ್ಕೆ ಮಾಡಿ ಅವರನ್ನು ಪಂಚರೆಂದು ಕರೆದು ಅವರನ್ನು ಹೆಚ್ಚಿನ ಗೌರವದಿಂದ ಕಾಣಲಾಗುತ್ತದೆ."[2] ಪ್ರಾಚೀನ ಕಾಲದಿಂದಲೂ ಜಾತಿ ಪಂಚಾಯತಿ, ಗ್ರಾಮ ಪಂಚಾಯತಿಗಳು ಸ್ಥಾನಿಕ ಸ್ವರಾಜ್ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಕಾಲಾಂತರದಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆಯು ಹಂತ ಹಂತವಾಗಿ ಬದಲಾವಣೆಗೆ ಒಳಪಟ್ಟಿದೆ. ಮಧ್ಯಕಾಲೀನ ಯುಗದಲ್ಲಿ ಭಾರತೀಯ ಸಮಾಜವು ಮುಸ್ಲಿಂರ ದೌರ್ಜನ್ಯಕ್ಕೆ ಒಳಪಟ್ಟರೂ ಸಹ ಸ್ಥಾನಿಕ ಸಂಸ್ಥೆಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳಲಿಲ್ಲ. ಆದರೆ ಬ್ರಿಟೀಷರ ಆಡಳಿತದ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಹೊಸ ರೂಪವನ್ನು ಪಡೆದುಕೊಂಡವು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಪಂಚಾಯತ್ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ಮುಂದಿನ ದಿನಮಾನಗಳಲ್ಲಿ ಈ ಸಂಸ್ಥೆಯು ತಿದ್ದುಪಡಿಗೊಂಡು ಸಂವಿಧಾನಾತ್ಮಕ ಸ್ಥಾನವನ್ನು ಪಡೆದುಕೊಂಡಿತು. ಇದರಿಂದಾಗಿ ಸಮಾಜದ ಶೋಷಿತ, ಬುಡಕಟ್ಟು, ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಿ ಸಮಾನತೆಯ ತತ್ವಕ್ಕೆ ಭದ್ರ ನೆಲೆಯನ್ನು ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿತು.

೩.೧ ಪಂಚಾಯತ್ ವ್ಯವಸ್ಥೆ ಹುಟ್ಟಿಕೊಳ್ಳಲು ಕಾರಣ, ಪ್ರಭಾವ ಮತ್ತು ಪ್ರೇರಣೆ :

ಮಾನವ ತನ್ನ ಅಲೆಮಾರಿ ಜೀವನಕ್ಕೆ ಮಂಗಳ ಹಾಡಿ ಒಂದೆಡೆ ಸ್ಥಿರವಾಗಿ ನೆಲೆ ನಿಂತಾಗಿನಿಂದ ಒಂದಲ್ಲಾ ಒಂದು ರೀತಿಯ ಆಡಳಿತವನ್ನು ನಡೆಸುತ್ತಾ ಬಂದಿದ್ದಾನೆ. ಮಿಗುತಾಯ ಮೌಲ್ಯದ ಪ್ರಭಾವದಿಂದ ಅವನಿಗೆ ಆಡಳಿತದ ಪ್ರೇರಣೆಯಾಯಿತು. ಈ ವ್ಯವಸ್ಥೆಯು ಹಲವಾರು ಸಮುದಾಯಗಳ ಸೃಷ್ಟಿಗೆ ಕಾರಣವಾಗಿದ್ದು, ಇದರ ಮೂಲಕ ಪ್ರತಿಯೊಂದು ಸಮುದಾಯದಲ್ಲಿಯೂ ಸ್ಥಾನಿಕ ಸಂಸ್ಥೆಗಳು ಉದಯವಾಗುವುದರ ಜೊತೆಗೆ ಪ್ರತಿಯೊಂದು ಬುಡಕಟ್ಟು ಸಮುದಾಯಗಳು ಸಹ ತನ್ನದೇ ಆದ ವಿಶಿಷ್ಟವಾದ ನ್ಯಾಯ ವ್ಯವಸ್ಥೆಯನ್ನು ರೂಢಿಸಿಕೊಂಡವು. ಮಾನವನಲ್ಲಿ ಆಸ್ತಿ, ಕುಟುಂಬ ವ್ಯವಸ್ಥೆ ಜಾರಿಗೆ ಬಂದ ನಂತರ ಅವನ ತಾರತಮ್ಯ ಹಾಗೂ ದ್ವೇಷ ಅಸೂಯೆಗಳಿಂದ ಸಂಘರ್ಷಗಳು ಪ್ರಾರಂಭವಾದವು. ಇದರಿಂದಾಗಿ

ಪ್ರತಿ ಸಮುದಾಯಗಳು ವ್ಯಾಜ್ಯಗಳನ್ನು ಬಗೆಹರಿಸುವುದಕ್ಕೆ ತಮ್ಮ ತಮ್ಮ ಸಮುದಾಯದಲ್ಲಿ ಒಂದು ರೀತಿಯಾದ ನ್ಯಾಯ ವ್ಯವಸ್ಥೆಯನ್ನು ರೂಪಿಸಿಕೊಂಡವು. ಈ ವ್ಯವಸ್ಥೆ ಮುಂದೆ ಪಂಚಾಯತ್ ರಾಜ್ ವ್ಯವಸ್ಥೆಯಾಗಲು ಕಾರಣವಾಗಿರಬಹುದು.

ಗ್ರಾಮೀಣ ಪ್ರದೇಶಗಳಲ್ಲಿಯ ನ್ಯಾಯ ನಿರ್ಣಯಗಳು ಅಲಿಖಿತ ರೂಪದಲ್ಲಿದ್ದವು. ಇಂದಿನಂತೆ ಯಾವುದೇ ರೀತಿಯ ಲಿಖಿತ ರೂಪದ ನ್ಯಾಯಾಲಯಗಳು ಅಸ್ತಿತ್ವದಲ್ಲಿರಲಿಲ್ಲ. ಆ ಗ್ರಾಮದ ಹಿರಿಯ ಪಂಚರೇ ನ್ಯಾಯ ನಿರ್ಣಯ ಮಾಡುತ್ತಿದ್ದರು. "ನ್ಯಾಯ ತೀರ್ಮಾನ ಮಾಡುವಾಗ ದೈವ ಸಾಕ್ಷಿ, ಆಣೆ, ಪ್ರಮಾಣ, ವಾಕ್‌ತೀರ್ಮಾನ, ಹಿರಿಯರ ರಾಜಿ, ರಾಜಿ ಪತ್ರ ಹೀಗೆ ವಿವಿಧ ರೀತಿಯ ದಿವ್ಯಗಳು ಅಥವಾ ಪರೀಕ್ಷೆಗಳು ಮೊದಲಾದ ವಿಧಾನಗಳನ್ನು ಬಳಸಲಾಗುತ್ತಿತ್ತು."[3] ಒಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ ಮತ್ತು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ನ್ಯಾಯಪದ್ದತಿ ಭಿನ್ನವಾಗಿರುತ್ತಿತ್ತು. ಈ ನ್ಯಾಯ ಪದ್ದತಿಯಲ್ಲಿ ಆ ಸಮುದಾಯ ಅಥವಾ ಗ್ರಾಮಗಳಿಗೆ ಮಾತ್ರ ಅದರ ತೀರ್ಮಾನಗಳು ಅನ್ವಯವಾಗುತ್ತಿದ್ದವು. ವಿವಾದಗಳನ್ನು ಆ ಕ್ಷಣದಲ್ಲಿ ತೀರ್ಮಾನ ತೆಗೆದುಕೊಂಡು ಶಿಕ್ಷೆಯನ್ನು ವಿಧಿಸುತ್ತಿದ್ದರು. ಸಮುದಾಯದ ಹಿರಿಯರು ನೀಡುವ ನಿರ್ಣಯಗಳೇ ಅಂತಿಮವಾಗಿರುತ್ತಿದ್ದವು. ಈ ನಿರ್ಣಯಗಳಿಗೆ ಯಾವುದೇ ರೀತಿಯ ಲಿಖಿತ ದಾಖಲೆಗಳಿರುತ್ತಿರಲಿಲ್ಲ. ತಪ್ಪಿತಸ್ಥರಿಗೆ ಅವರ ಅಪರಾಧದ ಪ್ರಮಾಣದ ಮೇಲೆ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಆ ಶಿಕ್ಷೆಗೆ ಅನುಗುಣವಾಗಿ ಪ್ರತಿಯೊಬ್ಬನು ಶಿಕ್ಷೆಯನ್ನು ಪಡೆದುಕೊಳ್ಳಲೇಬೇಕಾಗುತ್ತಿತ್ತು. ಈ ತೀರ್ಮಾನಕ್ಕೆ ವಿರೋಧವಾಗಿ ವರ್ತಿಸಿದವರಿಗೆ ಸಮುದಾಯದಿಂದ ಹೊರಹಾಕಲಾಗುತ್ತಿತ್ತು ಇಲ್ಲವೇ ಗಡಿಪಾರು ಮಾಡಲಾಗುತ್ತಿತ್ತು. "ಸ್ಥಳೀಯವಾಗಿ ನ್ಯಾಯ ನಿರ್ಣಯ ಮಾಡುವ ಮೂರೂ ಬಗೆಯ 'ಜನತಾ' ನ್ಯಾಯಾಲಯಗಳು ಪ್ರಾಚೀನ ಭಾರತದಲ್ಲಿ ಅಸ್ತಿತ್ವದಲ್ಲಿದ್ದವೆಂದು ಹೆಚ್.ಟಿ.ಕೋಲ್‌ಬ್ರೂಕ್ ಅಭಿಪ್ರಾಯ ಪಡುತ್ತಾರೆ. ಗ್ರಾಮೀಣರು ಬಹುತೇಕವಾಗಿ ಇಂತಹ ನ್ಯಾಯಾಲಯಗಳನ್ನೇ ಬಳಸಿಕೊಳ್ಳುತ್ತಿದ್ದರೆಂದರೆ ತಪ್ಪಿಲ್ಲ. ಇವುಗಳಲ್ಲಿ ಮೊದಲನೆಯದು ತಮ್ಮ ಕುಟುಂಬ ಅಥವಾ ಬಗೆಹರಿಸುವ ಕುಟುಂಬ ಅಥವಾ ಕುಲ ನ್ಯಾಯಾಲಯಗಳು ಹಿಂದೂ ನ್ಯಾಯಶಾಸ್ತ್ರದಲ್ಲಿ ಇವುಗಳನ್ನು 'ಕುಲ' ಎನ್ನುತ್ತಿದ್ದರು. ಕುಟುಂಬದ ಹಿರಿಯರು ಅಥವಾ ಸಗೋತ್ರಿಗಳಾದ ಸಂಬಂಧಿಗಳು ಇಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದರು. ಎರಡನೇಯ ಬಗೆಯ ನ್ಯಾಯಾಲಯಗಳನ್ನು ಶಾಸ್ತ್ರಗಳು 'ಶ್ರೇಣಿ'ಗಳೆಂದು ಕರೆದಿವೆ. ಒಂದು ವೃತ್ತಿಯ ಅಥವಾ ವಾಣಿಜ್ಯ ಅಥವಾ ಕೌಶಲ್ಯವನ್ನು ಅನುಸರಿಸುತ್ತಿದ್ದ ಸ್ಥಳೀಯ ಕುಟುಂಬಗಳು ಒಟ್ಟಾಗಿ ಇಂತಹ ಶ್ರೇಣಿ ಪಂಚಾಯತಿಗಳನ್ನು ಸ್ಥಾಪಿಸುತ್ತಿದ್ದವು. ಇವು ಹೆಚ್ಚಾಗಿ ದೊಡ್ಡ ಗ್ರಾಮ ಅಥವಾ ಪಟ್ಟಣಗಳಲ್ಲಿದ್ದವು. ಕುಲ ಮತ್ತು ಶ್ರೇಣಿಗಳಿಗಿಂತ ವಿಸ್ತಾರವಾದ ವ್ಯಾಪ್ತಿಯುಳ್ಳ 'ಪೂಗ'ಗಳ ಪ್ರಸ್ತಾಪ ಬರುತ್ತವೆ. ಪೂಗಗಳು ಕುಲ ಮತ್ತು ಶ್ರೇಣಿಗಳು ಕೊಟ್ಟ ತೀರ್ಪನ್ನು ಪುನರ್ ಪರಿಶೀಲಿಸುವ ಅಧಿಕಾರ

ಹೊಂದಿದ್ದವು." ಈ ರೀತಿಯಾಗಿ ಪಂಚಾಯತಿಗಳು ಅಧಿಕಾರವನ್ನು ನಿರ್ವಹಿಸುತ್ತಿದ್ದವು. ಮುಂದಿನ ದಿನಮಾನದಲ್ಲಿ ಪಂಚಾಯತಿಯ ಅಧಿಕಾರವು ತನ್ನದೇ ಆದ ರೂಪಗಳನ್ನು ಪಡೆದುಕೊಳ್ಳುತ್ತಾ ಬಂದಿತು. ಬ್ರಿಟೀಷರ ಕಾಲವು ಪಂಚಾಯತ್ ರಾಜ್ ನಿರ್ಮಾಣಕ್ಕೆ ಪ್ರೇರಣೆಯನ್ನು ನೀಡಿತು. ೧೭ ನೇ ಮತ್ತು ೧೮ ನೇ ಶತಮಾನಗಳು ಜಾಗತೀಕ ಮಟ್ಟದಲ್ಲಿ ಬದಲಾವಣೆಗೆ ಅವಕಾಶವನ್ನು ತಂದೊಡ್ಡಿದವು. ಈ ರೀತಿಯಾಗಿ ಪಂಚಾಯತ್ ರಾಜ್ ವ್ಯವಸ್ಥೆಯು ಹುಟ್ಟಿಕೊಳ್ಳಲು ಹಲವು ಪ್ರಮುಖ ಅಂಶಗಳು ಕಾರಣವಾಗಿವೆ. ಅವುಗಳೆಂದರೆ;

೧. ಬ್ರಿಟೀಷ್ ಸರ್ಕಾರ
೨. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ
೩. ಶಿಕ್ಷಣ ವ್ಯವಸ್ಥೆಯಲ್ಲಿನ ಬದಲಾವಣೆ
೪. ಹಿಂದುಳಿದ ವರ್ಗಗಳಲ್ಲಿ ಜಾಗೃತಿ
೫. ಗಾಂಧೀಜಿಯ ರಾಮರಾಜ್ಯದ ಕನಸು
೬. ಅಧಿಕಾರದ ವಿಕೇಂದ್ರೀಕರಣ
೭. ರಾಜಕೀಯ ಶಿಕ್ಷಣ
೮. ಕಲ್ಯಾಣ ರಾಜ್ಯದ ನಿರ್ಮಾಣ
೯. ಸಾಮಾಜಿಕ ಸಮಾನತೆ

೧) ಬ್ರಿಟೀಷ್ ಸರ್ಕಾರ :

ಭಾರತ ದೇಶಕ್ಕೆ ಪ್ರಾಚೀನ ಕಾಲದಿಂದ ೧೯೪೭ ರ ವರೆಗೆ ವಿದೇಶಿಯರು ಭೇಟಿ ನೀಡುತ್ತಲೇ ಬಂದಿದ್ದಾರೆ. ಕೆಲವು ವಿದೇಶಿಯರು ಇಲ್ಲಿಯೇ ನೆಲೆ ನಿಂತಿದ್ದಾರೆ. ಇನ್ನೂ ಕೆಲವು ಜನರು ಇಲ್ಲಿನ ಆರ್ಥಿಕ ಸಂಪತ್ತನ್ನು ದೋಚಿಕೊಂಡು ಹೋಗಿದ್ದಾರೆ. ವಿದೇಶಿಯರಲ್ಲಿ ಬ್ರಿಟೀಷರು ಭಾರತೀಯ ಸಂಸ್ಕೃತಿಯ ಮೇಲೆ ಹೆಚ್ಚಿನ ಪ್ರಭಾವ ಬೀರಿದ್ದಾರೆ. ಅವರ ಆಡಳಿತ ವೈಖರಿ, ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರಾಭಿಮಾನ ಇವು ಪ್ರಮುಖ ಅಂಶಗಳು ಬ್ರಿಟೀಷ್ ಆಡಳಿತ ಭಾರತೀಯರಿಗೆ ಹೊಸ ದಿಕ್ಕನ್ನು ಸೂಚಿಸಿತು. ಬ್ರಿಟೀಷರ ಸರ್ಕಾರದ ಪ್ರೇರಣೆಯಿಂದ ಭಾರತೀಯ ಸಂಸ್ಕೃತಿಯಲ್ಲಿ ಸಮಾನತೆಯ ಮೊಳಕೆಯೊಡೆಯಿತು.

೨) ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ :

ಪೋರ್ಚುಗೀಸರು, ಡಚ್ಚರು, ಬ್ರಿಟೀಷರು ಹೀಗೆ ಹಲವಾರು ವಿದೇಶಿಯರು ಭಾರತಕ್ಕೆ ಬಂದು ಹೋಗಿದ್ದಾರೆ. ಭಾರತೀಯ ಸಂಸ್ಕೃತಿಯು ತನ್ನದೇ ಆದ ಸಂಸ್ಕೃತಿಯನ್ನು ಹಾಗೂ ಚೌಕಟ್ಟನ್ನು ಒಳಗೊಂಡಿರುವಂತಹದ್ದು. ಭಾರತೀಯ ಸಂಸ್ಕೃತಿ ಶ್ರೇಷ್ಠವಾದುದು. ಆದರೆ, ವಿದೇಶಿಯರ ಸಂಪರ್ಕದಿಂದಾಗಿ ಅವರ ಜೀವನದ ರೀತಿ–ನೀತಿಗಳು, ಆಚಾರ–ವಿಚಾರಗಳು

ಮತ್ತು ಧ್ಯೇಯ ಧೋರಣೆಗಳು ಭಾರತೀಯರಿಗೆ ಹೊಸ ಸ್ಫೂರ್ತಿಯನ್ನು ನೀಡಿತು. ಅದರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಉಗಮಕ್ಕೂ ಸಹ ಕಾರಣವಾಗಿದೆ ಎಂದು ಹೇಳಬಹುದು.

೩) ಶಿಕ್ಷಣ ವ್ಯವಸ್ಥೆಯಲ್ಲಿನ ಬದಲಾವಣೆ :

ಪ್ರಾಚೀನ ಕಾಲದ ಹಿಂದೂ ಸಮಾಜವು ಶೂದ್ರ ಮತ್ತು ಮಹಿಳೆಯರಿಗೆ ಶಿಕ್ಷಣವನ್ನು ನಿರಾಕರಿಸಿತ್ತು. ದ್ವಿಜರು ಮಾತ್ರ ಶಿಕ್ಷಣವನ್ನು ಪಡೆಯುವುದಕ್ಕೆ ಅರ್ಹರಾಗಿದ್ದರು. ಈ ಶಿಕ್ಷಣವು ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟನ್ನು ಒಳಗೊಂಡಿತ್ತು. ಕೆಳವರ್ಗದವರು ಶಿಕ್ಷಣ ಪಡೆಯುವುದಕ್ಕೂ ನಿರ್ಭಂದಿಸಲಾಗಿತ್ತು. ಬ್ರಿಟೀಷರು ಭಾರತದಲ್ಲಿ ಆಳ್ವಿಕೆ ನಡೆಸುವಾಗ ಎಲ್ಲ ಸಮುದಾಯದವರು ಸಹ ಶಿಕ್ಷಣವನ್ನು ಪಡೆಯಬಹುದೆಂದು ತಿಳಿಸಿದರು. ಇದರಿಂದ ಹಿಂದುಳಿದ ವರ್ಗಗಳು ಶಿಕ್ಷಣವನ್ನು ಪಡೆಯುವಂತಾಯಿತು. ಇಂಗ್ಲೀಷ್ ಶಿಕ್ಷಣವು ಮುಖ್ಯವಾಗಿ ಸಮಾನತೆ ಮತ್ತು ಸ್ವಾತಂತ್ರ್ಯದ ಅರಿವನ್ನು ಜನತೆಗೆ ಮೂಡಿಸಿತು ಎಂದು ಹೇಳಬೇಕಾಗುತ್ತದೆ. ಶಿಕ್ಷಣ ಪಡೆದ ಹಿಂದುಳಿದ ವರ್ಗದವರು ಸಮಾಜದಲ್ಲಿ ತಮ್ಮನ್ನು ಪ್ರಮುಖರೆಂದು ಪರಿಗಣಿಸಲ್ಪಡಲು ಪ್ರೇರಣೆ ನೀಡಿತು.

೪) ಹಿಂದುಳಿದ ವರ್ಗಗಳಲ್ಲಿ ಜಾಗೃತಿ :

ಪಾಶ್ಚಾತ್ಯ ಸಂಸ್ಕೃತಿ ಮತ್ತು ಶಿಕ್ಷಣ ವ್ಯವಸ್ಥೆಯ ಬದಲಾವಣೆಯಿಂದ ಹಿಂದುಳಿದ ವರ್ಗದವರಲ್ಲಿ ಜಾಗೃತಿ ಉಂಟಾಯಿತು. ಪರಿಣಾಮವಾಗಿ ಬ್ರಾಹ್ಮಣೇತರರ ಆಂದೋಲನಗಳು ಪ್ರಾರಂಭವಾದವು. ಎಂತಹ ಪ್ರಮುಖ ಸಂದರ್ಭಗಳಲ್ಲಿಯೂ ಬ್ರಾಹ್ಮಣರನ್ನು ಕರೆಯಬಾರದೆಂದು ಹಿಂದುಳಿದ ವರ್ಗಗಳು ಆಲೋಚಿಸಿದವು. ಇದರಿಂದಾಗಿ ಕೆಲ ಸಮುದಾಯಗಳಲ್ಲಿ ವಿನೂತನವಾದ ವಿಚಾರಗಳು ಹುಟ್ಟಿಕೊಂಡವು. ಸತ್ಯಶೋಧಕ ಸಮಾಜದಂತಹ ಹಿಂದುಳಿದ ವರ್ಗಗಳ ಆಂದೋಲನದ ಪ್ರಭಾವವು ಹಿಂದುಳಿದ ವರ್ಗದವರಿಗೆ ಎಲ್ಲ ರಂಗಗಳಲ್ಲಿ ಪ್ರವೇಶಿಸುವುದಕ್ಕೆ ಪ್ರೇರಣೆಯಾಯಿತು.

೫) ಗಾಂಧೀಜಿ ರಾಮರಾಜ್ಯದ ಕನಸು :

ಭಾರತ ದೇಶವು ಗ್ರಾಮ ಸಮುದಾಯದಿಂದ ಕೂಡಿದ್ದಾಗಿದೆ. ಗ್ರಾಮೀಣ ಸಮುದಾಯವು ಹಲವು ಬಗೆಯ ಮೂಢನಂಬಿಕೆ, ಅಸಮಾನತೆ, ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಯಿಂದ ಕೂಡಿದೆ. ಇವೆಲ್ಲಾ ತೊಡೆದುಹಾಕಿ ಸಮೃದ್ಧ ಗ್ರಾಮೀಣ ಅಭಿವೃದ್ಧಿಯನ್ನು ಮಾಡುವುದು ಗಾಂಧೀಜಿಯವರ ಮಹತ್ವದ ಉದ್ಧೇಶವಾಗಿತ್ತು. ದೀನ–ದಲಿತರೆನ್ನದೆ, ಅಸ್ಪೃಶ್ಯರೆನ್ನದೆ ಎಲ್ಲರನ್ನೂ ಒಂದೇ ಪಥದಲ್ಲಿ ಕೊಂಡೊಯ್ಯುವ ಮಹತ್ವದ ಉದ್ಧೇಶವಾಗಿದೆ. ಗ್ರಾಮೀಣ ಪ್ರದೇಶಗಳು ಸ್ವಯಂ ಪರಿಪೂರ್ಣ ಘಟಕಗಳಾಗಿ ಕಾರ್ಯನಿರ್ವಹಿಸಬೇಕಾಗಿದೆ. ಎಲ್ಲ ವಿಧದ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶಗಳಿಗೆ ಒದಗಿಸುವುದರ ಮೂಲಕ ಗ್ರಾಮೀಣ ಪ್ರದೇಶವನ್ನು

ಅಭಿವೃದ್ಧಿಪಡಿಸಬೇಕಾಗಿದೆ. ಗ್ರಾಮಗಳ ಉದ್ಧಾರವಾಗದೆ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂಬುವುದು ಗಾಂಧೀಜಿಯವರ ಅಭಿಪ್ರಾಯವಾಗಿದೆ.

೬) ಅಧಿಕಾರದ ವಿಕೇಂದ್ರೀಕರಣ :

ಅಧಿಕಾರವನ್ನು ಪ್ರತಿಯೊಬ್ಬ ಪ್ರಜೆಯು ಸಮರ್ಪಕವಾಗಿ ಪಡೆಯುವುದರ ಉದ್ದೇಶದಿಂದ ಪಂಚಾಯತ್ ರಾಜ್ ವ್ಯವಸ್ಥೆಯ ನಿರ್ಮಾಣಕ್ಕೆ ಕಾರಣವಾಗಿದೆ. ವಂಶ ಪಾರಂಪರ್ಯ ಆಡಳಿತವನ್ನು ಮೊಟಕುಗೊಳಿಸಿ ಪ್ರಜೆಗಳು ತಮ್ಮ ನಾಯಕರನ್ನು ತಾವೇ ಆಯ್ಕೆ ಮಾಡಿಕೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತರುವುದಾಗಿದೆ. ದೇಶದ ಆಡಳಿತ ವ್ಯವಸ್ಥೆ ಭದ್ರವಾಗಿರಬೇಕಾದರೆ ಕೆಳಮಟ್ಟದಿಂದ ಭದ್ರವಾಗಿದ್ದರೆ ಮಾತ್ರ ಅದು ಸಾಧ್ಯವಾಗುತ್ತದೆ. ಆದ್ದರಿಂದ ಗ್ರಾಮೀಣ ಮಟ್ಟದಿಂದ ಅಧಿಕಾರವನ್ನು ಭದ್ರಗೊಳಿಸುವುದು ಪ್ರಮುಖ ಕಲ್ಪನೆಯಾಗಿ ಪಂಚಾಯತ್ ರಾಜ್ ವ್ಯವಸ್ಥೆ ರೂಪುಗೊಂಡಿರುವುದು ಕಂಡುಬರುತ್ತದೆ.

೭) ರಾಜಕೀಯ ಶಿಕ್ಷಣ :

ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದಿಂದಾಗಿ ಪ್ರತಿಯೊಬ್ಬ ನಾಗರಿಕನೂ ಕೆಳಹಂತದ ಅಧಿಕಾರದ ಸಂಸ್ಥೆಗಳಾದ ಪಂಚಾಯತ್‌ಗಳಲ್ಲಿ ಸ್ಪರ್ಧಿಸುವ ಮೂಲಕ ಪ್ರತಿಯೊಬ್ಬ ನಾಗರಿಕನೂ ರಾಜಕೀಯದಲ್ಲಿ ಸ್ಪರ್ಧಿಸುವುದು, ಪಾಲ್ಗೊಳ್ಳುವುದು ಇನ್ನಿತರ ರಾಜಕೀಯ ಚಟುವಟಿಕೆಗಳಿಂದ ರಾಜಕೀಯ ಶಿಕ್ಷಣಕ್ಕೆ ಒಳಪಡುತ್ತಾನೆ. ಈ ರಾಜಕೀಯ ಶಿಕ್ಷಣವು ದೇಶದ ಅಭಿವೃದ್ಧಿಗೆ ಪೂರಕವಾದ ಅಂಶವಾಗಿದೆ. ಸಮಾಜದಲ್ಲಿನ ಪ್ರತಿಯೊಬ್ಬರಿಗೂ ರಾಜಕೀಯ ಶಿಕ್ಷಣ ಅತ್ಯವಶ್ಯಕವಾಗಿದೆ. ಇದರಿಂದ ನಾಗರಿಕರು ತಮ್ಮ ಬೇಕು ಬೇಡಗಳನ್ನು ಈಡೇರಿಸಿಕೊಳ್ಳುವುದಕ್ಕೆ ಹಾಗೂ ತಮಗೆ ಬೇಕಾದ ಶಾಸನಗಳನ್ನು ರೂಪಿಸಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ.

೮) ಕಲ್ಯಾಣ ರಾಜ್ಯ :

ಪ್ರತಿಯೊಬ್ಬ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ ಕಲ್ಯಾಣ ರಾಜ್ಯದ ಗುರಿಯಾಗಿದೆ. ಕಲ್ಯಾಣ ರಾಜ್ಯ ಸ್ಥಾಪನೆಗಾಗಿ ಆಧುನಿಕ ರಾಷ್ಟ್ರಗಳು ಪರಿಶ್ರಮಿಸುತ್ತಿವೆ. ಪ್ರತಿಯೊಂದು ರಾಷ್ಟ್ರ ವ್ಯಕ್ತಿಯ ಕನಿಷ್ಠ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಸಂವಿಧಾನ ಮತ್ತು ಸರ್ಕಾರಗಳು ಹಲವಾರು ಶಾಸನಗಳನ್ನು ಜಾರಿಗೆ ತಂದಿವೆ. ಕಲ್ಯಾಣ ರಾಷ್ಟ್ರವಾಗಬೇಕಾದರೆ ಆ ರಾಷ್ಟ್ರವು ಆರೋಗ್ಯ, ರಕ್ಷಣೆ, ಶಿಕ್ಷಣ, ಆರ್ಥಿಕ ಭದ್ರತೆ, ಸಾಮಾಜಿಕ ಪಿಡುಗುಗಳ ನಿರ್ಮೂಲನೆ ಮಾಡಬೇಕು.

೯) ಸಾಮಾಜಿಕ ಸಮಾನತೆ :

ಭಾರತೀಯ ಸಮಾಜದ ಪ್ರತಿಯೊಂದು ರಂಗದಲ್ಲೂ ಅಸಮಾನತೆ ಎದ್ದು ಕಾಣುತ್ತಿತ್ತು. ಅಂದರೆ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಕೆಳವರ್ಗದವರು ಅಸಮಾನತೆಯಿಂದ ನರಳುತ್ತಿದ್ದರು. ಸಮಾಜದಲ್ಲಿನ ಬುದ್ಧಿಜೀವಿಗಳು ಅಸಮಾನತೆಯನ್ನು ತೊಲಗಿಸುವುದರ ಸಲುವಾಗಿ ಮಾನವೀಯ ಮೌಲ್ಯಗಳಿಗೆ ಹೆಚ್ಚು ಪ್ರಚಾರ ನೀಡಿದರು. ಇದರಿಂದ ಸಾಮಾಜಿಕ ಸಮಾನತೆ ಸಾಧಿಸಬೇಕಾದರೆ ಆಡಳಿತದ ವಿಕೇಂದ್ರೀಕರಣ ಅತ್ಯಗತ್ಯವೆಂದು ಮನಗಂಡರು.

ಈ ಮೇಲಿನ ಅಂಶಗಳಲ್ಲದೇ ಇನ್ನೂ ಹಲವಾರು ಅಂಶಗಳು ಪಂಚಾಯತ್ ರಾಜ್ ವ್ಯವಸ್ಥೆಯ ಅಸ್ತಿತ್ವಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣವಾಗಿವೆ.

ಪಂಚಾಯತ್ ರಾಜ್ ಅಸ್ತಿತ್ವಕ್ಕೆ ಪ್ರಭಾವ ಮತ್ತು ಪ್ರೇರಣೆಗಳು :

ಯಾವುದೇ ಒಂದು ವ್ಯವಸ್ಥೆ ಒಮ್ಮಿಂದೊಮ್ಮೆಲೆ ಅಸ್ತಿತ್ವಕ್ಕೆ ಬರದೆ ಕಾಲ, ಪರಿಸ್ಥಿತಿ, ಸುತ್ತಮುತ್ತಲಿನ ಪರಿಸರದ ಮೇಲೆ ಅವಲಂಬನೆಯಾಗಿ ಬೆಳವಣಿಗೆಯಾಗುತ್ತದೆ. ಭಾರತೀಯ ಸಮಾಜದಲ್ಲಿನ ಪಂಚಾಯತ್ ರಾಜ್ ವ್ಯವಸ್ಥೆಯು ಸಹ ಇದಕ್ಕೆ ನಿದರ್ಶನವಾಗಿದೆ. ಈ ವ್ಯವಸ್ಥೆಯು ಅಸ್ತಿತ್ವಕ್ಕೆ ಬರಬೇಕಾದರೆ ಹಲವಾರು ಪ್ರಭಾವ ಮತ್ತು ಪ್ರೇರಣೆಯಾಗಿವೆ. ಅವುಗಳೆಂದರೆ,

೧. ರಾಜಕೀಯ ಕ್ರಾಂತಿ

೨. ಕೈಗಾರಿಕಾ ಕ್ರಾಂತಿ

೩. ವಿಜ್ಞಾನ ಮತ್ತು ತಂತ್ರಜ್ಞಾನ

೪. ನಗರೀಕರಣ

೫. ವಿಶ್ವದ ವಿವಿಧ ದೇಶಗಳ ಆಡಳಿತ ವ್ಯವಸ್ಥೆ

೬. ವೈಚಾರಿಕತೆ

೧) ರಾಜಕೀಯ ಕ್ರಾಂತಿ :

೧೭ ನೇ ಶತಮಾನದಲ್ಲಿ ಫ್ರಾನ್ಸ್ ದೇಶದಲ್ಲಿ ರಾಜಕೀಯ ಕ್ರಾಂತಿ ಸಂಭವಿಸಿತು. ಈ ಕ್ರಾಂತಿಯ ಪರಿಣಾಮವಾಗಿ ಕ್ರಾಂತಿಗಳ ಸರಮಾಲೆಯೇ ಸೃಷ್ಟಿಯಾದವು. ಅಂದರೆ ಇದರ ಪ್ರೇರಣೆಯಾಗಿ ಪಡೆದ ಇತರೆ ದೇಶಗಳು ಸಹ ರಾಜಕೀಯ ಕ್ರಾಂತಿಗೆ ಇಳಿಯುವಂತೆ ಮಾಡಿತು. ಅರಸೊತ್ತಿಗೆಯ ಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ವ್ಯವಸ್ಥೆ ನಿರ್ಮಾಣಗೊಂಡಿತು. ಈ ಅಂಶವನ್ನು ಗಮನಿಸಿದ ಭಾರತೀಯ ಸಮಾಜವು ಸಹ ರಾಜಕೀಯ ಬದಲಾವಣೆಗೆ

ಅವಕಾಶವನ್ನು ತಂದುಕೊಂಡಿತು. ಮತ್ತು ಪ್ರಜಾಪ್ರಭುತ್ವದ ನಿರ್ಮಾಣಕ್ಕೆ ವೇದಿಕೆ ಮಾಡಿಕೊಂಡಿತು.

೨) ಕೈಗಾರಿಕಾ ಕ್ರಾಂತಿ :

ಕ್ರಿ.ಶ. ೧೮ ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಕೈಗಾರಿಕಾ ಕ್ರಾಂತಿ ಸಂಭವಿಸಿತು. ಕೈಗಾರಿಕಾ ಕ್ರಾಂತಿಯ ಫಲವಾಗಿ ಸಮಾಜಗಳು ಗಣನೀಯ ಪ್ರಮಾಣದಲ್ಲಿ ಪರಿವರ್ತನೆಗೊಂಡವು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಬರಡಾಗಿದ್ದ ಪ್ರದೇಶಗಳು ಆರ್ಥಿಕ ಸಂಪತ್ತನ್ನು ತಂದುಕೊಡುವಂತವುಗಳಾಗಿ ನಿರ್ಮಾಣಗೊಂಡವು. ಈ ಕ್ರಾಂತಿಯಿಂದಾದ ಮಹತ್ವದ ಪರಿಣಾಮವೆಂದರೆ ಕುಲಕಸುಬುಗಳು ಮತ್ತು ಗುಡಿ ಕೈಗಾರಿಕೆಗಳು ಅವನತಿಯನ್ನು ಹೊಂದಿದವು. ಇದರ ಪರಿಣಾಮವಾಗಿ ಇದನ್ನೇ ನಂಬಿಕೊಂಡು ಬದುಕುತ್ತಿದ್ದವರಿಗೆ ಬೇರೆ ವೃತ್ತಿಯನ್ನು ಅನುಸರಿಸುವುದಕ್ಕೂ ಪ್ರೇರಣೆ ನೀಡಿತು. ಜೊತೆಗೆ ಕ್ರಾಂತಿಯ ಪರಿಣಾಮವಾಗಿ ಸಮಾಜಗಳು ಶ್ರೀಮಂತಿಕೆಯನ್ನು ಹೊಂದಿದವು. ಅಂತಹ ಸಮಾಜದಲ್ಲಿ ನೂತನವಾದ ಸರ್ಕಾರಗಳು ಅಸ್ತಿತ್ವಕ್ಕೆ ತರುವ ಉದ್ದೇಶಕ್ಕೂ ಚಾಲನೆ ದೊರಕಿತು.

೩) ವಿಜ್ಞಾನ ಮತ್ತು ತಂತ್ರಜ್ಞಾನ :

ಇಂದು ಮಾನವನು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದಾನೆ. ತಾನು ಕುಳಿತಿರುವ ಪ್ರದೇಶದಿಂದಲೇ ಇತರೆ ಗ್ರಹಗಳ ಸಂಪರ್ಕ ಬೆಳೆಸುವಷ್ಟರ ಮಟ್ಟಿಗೆ ರೂಪುಗೊಂಡಿದ್ದಾನೆ. ವಿಜ್ಞಾನ ಹಾಗೂ ತಂತ್ರಜ್ಞಾನದಿಂದ ಇಂದು ಜಗತ್ತು ಒಂದು ಚಿಕ್ಕ ಹಳ್ಳಿಯಾಗಿದೆ. ತಂತ್ರಜ್ಞಾನಗಳು ಬೆಳೆದಂತೆಲ್ಲಾ ಅವನ ಬುದ್ಧಿವಂತಿಕೆಯೂ ಸಹ ಅಗಾಧವಾದ ಪ್ರಮಾಣದಲ್ಲಿ ಬೆಳೆದಿದೆ. ಇದರ ಪರಿಣಾಮವಾಗಿ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ವರ್ಗದ ಕಲ್ಪನೆ ಮುಂತಾದ ಅಮಾನವೀಯ ಗುಣಗಳನ್ನು ಕಡಿಮೆ ಮಾಡಿಕೊಳ್ಳುತ್ತಾ ಬಂದನು. ಅದರ ಫಲವಾಗಿ ನೂತನ ಅವಿಷ್ಕಾರಗಳ ಬೆಳವಣಿಗೆಗೆ ಮತ್ತಷ್ಟು ಕಾರಣವಾಯಿತು. ಹೊಸ ರಾಜಕೀಯ ಪ್ರೌಢಿಮೆಯ ಅಂಶಗಳನ್ನು ಬೆಳೆಸಿಕೊಳ್ಳುತ್ತಾ ಬಂದನು.

೪) ನಗರೀಕರಣ :

ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೈಗಾರಿಕೆ ಕ್ರಾಂತಿಯ ಫಲವಾಗಿ ನಗರೀಕರಣ ಪ್ರಕ್ರಿಯೆಯು ಹೆಚ್ಚಿನ ಚಾಲನೆಯನ್ನು ಪಡೆದುಕೊಂಡಿತು. ಇದರಿಂದಾಗಿ ಜಾತಿ ಆಧಾರಿತ ಕಸುಬುಗಳು ನಶಿಸಿದವು. ಪರಿಣಾಮವಾಗಿ ಉದ್ಯೋಗವನ್ನು ಕಳೆದುಕೊಂಡ ಗ್ರಾಮೀಣ ಪ್ರದೇಶದವರು ಉದ್ಯೋಗವನ್ನರಸಿ ನಗರಗಳ ಕಡೆಗೆ ವಲಸೆ ಬಂದರು. ಬದಲಾದ ಸಮಾಜ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ಜೀವನವನ್ನು ರೂಢಿಸಿಕೊಂಡರು. ನಗರವು ವಿಸ್ತಾರವಾಗಿ

ಬೆಳೆದಂತೆಲ್ಲಾ ತಾರತಮ್ಯತೆ ಮಾಯವಾಗಿ ಸ್ವಾತಂತ್ರ್ಯ ಮತ್ತು ಸ್ವ ಆಯ್ಕೆಯ ನಾಯಕನನ್ನು ಆರಿಸಿಕೊಳ್ಳುವಂತಾಯಿತು.

೫) ವಿಶ್ವದ ವಿವಿಧ ದೇಶಗಳ ಆಡಳಿತ ವ್ಯವಸ್ಥೆ :

ರಾಜಕೀಯ ಕ್ರಾಂತಿ, ಕೈಗಾರಿಕಾ ಕ್ರಾಂತಿ ಮತ್ತು ನಗರೀಕರಣ ಪ್ರಕ್ರಿಯೆಯಿಂದಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿವಿಧ ರೀತಿಯ ಆಡಳಿತ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ವಿಶ್ವದ ಹಲವಾರು ರಾಷ್ಟ್ರಗಳು ತಮ್ಮದೇ ಆದ ಸಂವಿಧಾನ, ಸರ್ಕಾರ ಮತ್ತು ಅದರ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ಜಾರಿಗೆ ತಂದವು. ಉತ್ತಮವಾದ ಆಡಳಿತ ನಡೆಸುವುದಕ್ಕೆ ಬೇಕಾದ ಅಂಶಗಳನ್ನು ಮೈಗೂಡಿಸಿಕೊಂಡವು. ಇದರಿಂದ ಆಯಾ ದೇಶದ ಭದ್ರತೆ ಹೆಚ್ಚುತ್ತಾ ಅಭಿವೃದ್ಧಿಯನ್ನು ಸಾಧಿಸುತ್ತ ಮುನ್ನಡೆದವು. ಈ ರೀತಿಯ ಆಡಳಿತ ವ್ಯವಸ್ಥೆಯು ಭಾರತೀಯ ಸಮಾಜದಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರುವುದಕ್ಕೆ ಪ್ರೇರಣೆ ಮತ್ತು ಪುಷ್ಠಿಯಾಯಿತೆಂದು ಹೇಳಬಹುದು.

೬) ವೈಚಾರಿಕತೆ :

ಬೌದ್ಧಿಕ ಬೆಳವಣಿಗೆ ಮತ್ತು ಮಾನವ ಸಮಾಜವು ಒಮ್ಮಿಂದೊಮ್ಮೆಲೇ ರೂಪುಗೊಳ್ಳದೆ ಕಾಲಕ್ರಮೇಣವಾಗಿ ರೂಪುಗೊಳ್ಳುತ್ತ ಬಂದಿದೆ. ಇತ್ತೀಚಿನ ದಿನಗಳಲ್ಲಿ ಮಾನವನು ಅಗಾಧವಾದ ಬುದ್ಧಿಶಕ್ತಿಯನ್ನು ಪಡೆದಿದ್ದಾನೆ. ಸಾಂಪ್ರದಾಯಿಕ ಸಮಾಜದಲ್ಲಿ ಕಂಡುಬರುತ್ತಿದ್ದ ಅನ್ಯಾಯ ಮತ್ತು ಮೂಢ ನಂಬಿಕೆಗಳನ್ನು ಖಂಡಿಸಿ ಸಮಾನತೆಯ ತತ್ವಗಳನ್ನು ಬೋಧಿಸುತ್ತಿದ್ದಾನೆ. ಮಾನವೀಯ ಮೌಲ್ಯಗಳಾದ ದಯೆ, ಕರುಣೆ, ಅನುಕಂಪ, ಪ್ರೀತಿ, ವಿಶ್ವಾಸ, ಮಮತೆ ಹೆಚ್ಚು ವ್ಯಾಪಕವಾಗಿ ಕಂಡುಬರುತ್ತಿದೆ. ಪಾಶ್ಚಾತ್ತೀಕರಣ ಪ್ರಕ್ರಿಯೆಯೂ ಸಹ ಮಾನವನ ಬದಲಾದ ಜೀವನಕ್ಕೆ ಸಾಕ್ಷಿಯಾಗಿದೆ. ಸಮಾನತೆಯ ತತ್ವದಿಂದಾಗಿ ತಾರತಮ್ಯವನ್ನು ಮರೆತು ಒಂದಾಗಿ ಬಾಳುವ ಅಥವಾ ಎಲ್ಲರೂ ಕೂಡಿ ಅಧಿಕಾರ ನಡೆಸುವ ಉದ್ದೇಶವು ಸಹ ಕಾರಣವಾಗಿರಬಹುದು.

ಈ ಎಲ್ಲ ಕಾರಣ ಹಾಗೂ ಪ್ರಭಾವ ಪ್ರೇರಣೆಗಳನ್ನು ಗಮನಿಸುವುದಾದರೆ ನಮ್ಮ ಸಮಾಜವು ಬದಲಾವಣೆಯಾಗಿರುವುದು ಕಂಡುಬರುತ್ತದೆ. ನಮ್ಮ ಸಮಾಜದಲ್ಲಿ ಶತ-ಶತಮಾನಗಳಿಂದ ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಗೆ ಒಳಗಾದ ಸಮುದಾಯಗಳು ನಿಟ್ಟುಸಿರು ಬಿಡುವಂತಾಗಿದೆ. ಪ್ರತಿಯೊಬ್ಬ ಪ್ರಜೆಯು ಸಹ ಪ್ರಜಾಪ್ರಭುತ್ವದ ಅಧಿಕಾರದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. ಇದರಿಂದಾಗಿ ಹಿಂದುಳಿದ ವರ್ಗದವರು ಸಹ ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುವಂತಾಗಿದೆ. ಜೊತೆಗೆ ಎಲ್ಲ ರಂಗಗಳಲ್ಲಿಯೂ ಗುರುತಿಸಿಕೊಳ್ಳುವುದಕ್ಕೆ ಸಹಾಯಕ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಒಟ್ಟಾರೆಯಾಗಿ ಪಂಚಾಯತ್ ರಾಜ್ ವ್ಯವಸ್ಥೆಯು ಸಮಾಜದ ಅಭಿವೃದ್ಧಿಗೆ ಪ್ರಮುಖ ಕಾರಣವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

೩.೨ ಪಂಚಾಯತ್ ರಾಜ್ ಮತ್ತು ತಿದ್ದುಪಡಿಗಳು :

ಪ್ರಾಚೀನ ಮತ್ತು ಮಧ್ಯ ಕಾಲೀನ ಭಾರತೀಯ ಸಮಾಜದ ಸ್ಥಾನಿಕ ಸಂಸ್ಥೆಗಳು ಲಿಖಿತ ಕಾಯ್ದೆಗಳನ್ನು ರೂಪಿಸಿಕೊಂಡಿದ್ದಿಲ್ಲ. ಬ್ರಿಟೀಷರ ಆಡಳಿತದ ಕಾಲದಲ್ಲಿ ಲಿಖಿತ ಕಾಯ್ದೆಯು ರಚನೆಗೊಂಡವು. ಸಮಾನ ತಪ್ಪಿಗೆ ಸಮಾನ ಶಿಕ್ಷೆ ಎನ್ನುವ ಆಡಳಿತವನ್ನು ಜಾರಿಗೆ ತಂದರು. ಈ ರೀತಿಯಾಗಿ ಕಾಯ್ದೆಗಳು ರೂಪುಗೊಳ್ಳುತ್ತ ಬಂದವು. ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದಕ್ಕಿಂತ ಪೂರ್ವದಿಂದಲೂ ಮಹತ್ಮಾ ಗಾಂಧೀಜಿಯವರು ಗ್ರಾಮ ಸ್ವರಾಜ್ಯ ಕನಸು ಕಂಡಿದ್ದರು. ಅವರ ಕನಸನ್ನು ನನಸು ಮಾಡುವುದರ ಸಲುವಾಗಿ ಭಾರತ ಸರ್ಕಾರವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿತು. ನಮ್ಮ ಭಾರತೀಯ ಸಮಾಜವು ಹಳ್ಳಿಗಳಿಂದ ಕೂಡಿರುವ ರಾಷ್ಟ್ರವಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.೭೫ ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರಾಗಿದ್ದಾರೆ. ಮಹಾತ್ಮ ಗಾಂಧೀಜಿಯವರ ಪ್ರಕಾರ "ನಿಜವಾದ ಭಾರತ ಗ್ರಾಮೀಣ ಭಾರತ ಗ್ರಾಮಗಳು ನಶಿಸಿ ಹೋದರೆ ಅಥವಾ ಅವನತಿ ಹೊಂದಿದರೆ ದೇಶದ ಅವನತಿಯಾದಂತೆಯೇ, ಅಂತಹ ಭಾರತವು ನಿಜವಾದ ಭಾರತವಾಗಲಾರದು."[೫] ಕೆಳಹಂತದಿಂದ ದೇಶದ ರಾಜಕೀಯ ಭದ್ರತೆಯನ್ನು ಸಾಧಿಸುವ ಸಲುವಾಗಿ ಪಂಚಾಯತ್ ರಾಜ್ ವ್ಯವಸ್ಥೆ ಅತ್ಯವಶ್ಯಕವಾದದ್ದು ಎಂದು ಗಮನಿಸಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ತೀರ್ಮಾನಿಸಲಾಯಿತು.

ಭಾರತೀಯ ಸಮಾಜವು ಸಾವಿರಾರು ಜಾತಿ ಉಪಜಾತಿಗಳನ್ನು ಒಳಗೊಂಡಿದೆ. ಈ ಎಲ್ಲ ಜಾತಿಗಳು ಏಕರೂಪವಾದ ಸ್ಥಾನವನ್ನು ಹೊಂದಿಲ್ಲ. ಅಂದರೆ ಜಾತಿ ಪದ್ದತಿಯು ಸ್ಥರವಿನ್ಯಾಸದ ಒಂದು ರಾಷ್ಟ್ರವಾಗಿದೆ. ಇಂದು ನಾವು ಪರಿಗಣಿಸಲ್ಪಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಜಾತಿ ವ್ಯವಸ್ಥೆಯ ಕೊನೆಯ ಹಂತದಲ್ಲಿ ಗುರುತಿಸಲ್ಪಡುತ್ತವೆ. ಈ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಹಿಂದುಳಿದವುಗಳಾಗಿವೆ. ಈ ಹಿಂದುಳಿದ ಸಮುದಾಯಗಳ ಏಳಿಗೆಗಾಗಿ ಸಂವಿಧಾನದಲ್ಲಿ ಮೀಸಲಾತಿಯನ್ನು ಕಲ್ಪಿಸುವುದರ ಮುಖಾಂತರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಲಾಗುತ್ತಿದೆ. ಭಾರತೀಯ ಸಂವಿಧಾನವು ಭಾರತೀಯ ನಾಗರಿಕರೆಲ್ಲರೂ ಸಮಾನರು ಎಂದು ಸಾರುವುದರ ಮೂಲಕ ಮೇಲು-ಕೀಳು ಎನ್ನುವ ಬೇಧ-ಭಾವವನ್ನು ತೊಡೆದು ಹಾಕುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಕೆಳವರ್ಗದವರಿಗೂ ಸಹ ರಾಜಕೀಯದಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಸಂವಿಧಾನವು ರಚನೆಯಾಯಿತು. ಅದುವರೆಗೆ ಜಾತಿ ಪಂಚಾಯತಿಗಳು ಅಥವಾ ಕುಲ ಪಂಚಾಯತಿಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳುವ ಮೂಲಕ ಗ್ರಾಮ ಪಂಚಾಯತಿಗಳು ಸ್ಥಳೀಯ ಆಡಳಿತ ಘಟಕಗಳಾಗಿ ಕಾರ್ಯವನ್ನು ನಿರ್ವಹಿಸಲು

ಪ್ರಾರಂಭಿಸಿದವು. ಪಂಡಿತ್ ಜವಹರಲಾಲ್ ನೆಹರೂ ರವರ ನೇತೃತ್ವದಲ್ಲಿ ೧೯೫೧ ನೇ ಇಸ್ವಿಯಲ್ಲಿ ಭಾರತ ದೇಶ ಪ್ರಥಮವಾಗಿ ಪಂಚವಾರ್ಷಿಕ ಯೋಜನೆಯನ್ನು ಮೊದಲ ಬಾರಿಗೆ ಅನುಷ್ಠಾನಗೊಳಿಸಿತು. ಇದರ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಚಾಲನೆ ದೊರಕಿತು. ಸ್ವತಂತ್ರ್ಯ ಭಾರತದಲ್ಲಿ ೧೯೫೨ ರಲ್ಲಿ ಪ್ರಥಮ ಬಾರಿಗೆ ಸಮುದಾಯ ಅಭಿವೃದ್ಧಿ ಯೋಜನೆ ಎನ್ನುವ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೆ ತಂದಿತು. ಈ ಯೋಜನೆಗಾಗಿ ಸರ್ಕಾರವು ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತು. ಆದರೂ ಈ ಕಾರ್ಯಕ್ರಮ ನಿರೀಕ್ಷಿತ ಪ್ರಮಾಣದ ಯಶಸ್ಸನ್ನು ಸಾಧಿಸಿಲ್ಲ. ಇದರ ವಿಫಲತೆಯನ್ನು ಕುರಿತು ವರದಿ ನಿಡುವುದರ ಸಲುವಾಗಿ ಬಲವಂತರಾಯ್ ಮೆಹತಾ ಸಮಿತಿಯನ್ನು ರಚಿಸಿತು. ಈ ಸಮಿತಿಯು ಅಧ್ಯಯನ ಕೈಗೊಂಡು ಸರ್ಕಾರಕ್ಕೆ ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಪ್ರಮುಖವಾದ ಶಿಫಾರಸ್ಸುಗಳೆಂದರೆ ಗ್ರಾಮೀಣ ಮಟ್ಟದಲ್ಲಿ ಮೂರು ಶ್ರೇಣಿಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತರಬೇಕು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕವಾದ ಸ್ಥಾನಮಾನವನ್ನು ನೀಡಬೇಕೆಂದು ತಿಳಿಸಿತು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡಲು ಸರ್ಕಾರವು ಹಲವಾರು ಸಮಿತಿಗಳನ್ನು ರಚಿಸಿತು. ಅವುಗಳೆಂದರೆ ಬಲವಂತ್‌ರಾಯ್ ಮೆಹತಾ ಸಮಿತಿ, ಅಶೋಕ್ ಮೆಹತಾ ಸಮಿತಿ, ಜಿ.ವಿ.ಕೆ. ರಾವ್ ಸಮಿತಿ ಮತ್ತು ಸಿಂಘ್ವಿ ಸಮಿತಿ ಈ ಎಲ್ಲ ಸಮಿತಿಗಳು ಮುಖ್ಯವಾಗಿ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ನೀಡಬೇಕೆನ್ನುವ ಶಿಫಾರಸ್ಸನ್ನು ಮಾಡಿದವು. ಇವುಗಳ ವರದಿಯ ಪರಿಣಾಮವಾಗಿ ಪಂಚಾಯತ್ ರಾಜ್ ವ್ಯವಸ್ಥೆಯು ಸಂವಿಧಾನಾತ್ಮಕವಾದ ಸ್ಥಾನಮಾನವನ್ನು ಪಡೆದುಕೊಂಡಿತು.

ಗ್ರಾಮೀಣ ಪ್ರದೇಶದ ಜನರು ಗ್ರಾಮಾಭಿವೃದ್ಧಿಯಲ್ಲಿ ತೊಡಗಿಕೊಳ್ಳುವುದರ ಸಲುವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಪ್ರಾಚೀನ ಕಾಲದ ಗ್ರಾಮ ಪಂಚಾಯತಿಗಳು ಗ್ರಾಮೀಣ ಪ್ರದೇಶದ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದವು. ಮೊಗಲರು ಮತ್ತು ಬ್ರಿಟೀಷರ ಆಡಳಿತದ ಅವಧಿಯಲ್ಲಿ ಗ್ರಾಮ ಪಂಚಾಯತಿಗಳ ಕಂದಾಯ ವಸೂಲಿ ಮಾಡುವ ಕೆಲಸಕ್ಕೆ ಮಾತ್ರ ಸೀಮಿತವಾಗಿದ್ದವು. ಸ್ವತಂತ್ರ್ಯ ಭಾರತದಲ್ಲಿ ಗ್ರಾಮಗಳು ಹೆಚ್ಚಿನ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದವು. ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕ ಸ್ಥಾನಮಾನ ಲಭ್ಯವಾಗುವುದಕ್ಕಿಂತ ಮುಂಚೆ ನಿರೀಕ್ಷಿತ ಪ್ರಮಾಣದ ಯಶಸ್ಸನ್ನು ಸಾಧಿಸಿರಲಿಲ್ಲ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಯಶಸ್ಸಾಗಬೇಕಾದರೆ ಪಂಚಾಯತ್ ರಾಜ್ ಮುಖಾಂತರವೇ ಸಾಧ್ಯ. ಮಹತ್ಮ ಗಾಂಧೀಜಿಯವರು ಪ್ರಾಚೀನ ಕಾಲದಲ್ಲಿ ಇದ್ದಂತಹ ಐದು ಹಂತಗಳ ಗ್ರಾಮ ಪಂಚಾಯತಿ ವ್ಯವಸ್ಥೆಯು ಅಸ್ತಿತ್ವದಲ್ಲಿರಬೇಕೆಂದು ತಿಳಿಸುತ್ತಾರೆ. "ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತ್, ತಾಲೂಕ ಮಟ್ಟದಲ್ಲಿ ತಾಲೂಕ ಪಂಚಾಯತ್, ಜಿಲ್ಲಾ

ಮಟ್ಟದಲ್ಲಿ ಜಿಲ್ಲಾ ಪಂಚಾಯತ್, ವಲಯ ಮಟ್ಟದಲ್ಲಿ ವಲಯ ಪಂಚಾಯತ್ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಪಂಚಾಯತ್"[೬] ಈ ವ್ಯವಸ್ಥೆಗಳನ್ನು ಅಸ್ತಿತ್ವಕ್ಕೆ ತಂದರೆ ಗ್ರಾಮೀಣ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಭಾವಿಸಲಾಯಿತು.

ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕವಾದ ಸ್ಥಾನಮಾನವನ್ನು ನೀಡಬೇಕಾದರೆ ರಾಷ್ಟ್ರದ ಮಹಾನ್ ವ್ಯಕ್ತಿಗಳ ಪರ ಮತ್ತು ವಿರೋಧದ ಅಲೆಗಳು ಕಂಡುಬಂದವು. ಮಹತ್ಮ ಗಾಂಧೀಜಿಯವರು ಪಂಚಾಯತ್ ರಾಜ್ ವ್ಯವಸ್ಥೆಗ ಸಂವಿಧಾನಾತ್ಮಕವಾದ ಸ್ಥಾನಮಾನವನ್ನು ನೀಡಬೇಕೆಂದು ಆಗ್ರಹಿಸಿದರು. ಆದರೆ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಆಸಕ್ತಿ ವಹಿಸಲಿಲ್ಲ. ಕಾರಣ ಗ್ರಾಮ ಪಂಚಾಯತ್ ವ್ಯವಸ್ಥೆಯು ಸ್ಥಳೀಯ ಮಟ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಅಲ್ಲಿ ಅಜ್ಞಾನ, ಕೋಮು ಭಾವನೆಗಳು ಪ್ರಮುಖವಾಗಿ ಕಂಡು ಬರುತ್ತವೆ. ಗ್ರಾಮೀಣ ಪ್ರದೇಶಗಳಿಗೆ ಗಣರಾಜ್ಯದ ಸ್ಥಾನಮಾನವನ್ನು ನೀಡಿದರೆ ಯಶಸ್ಸಾಗುವುದಿಲ್ಲ. ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಇವುಗಳು ಯಾವ ಪಾತ್ರವನ್ನು ವಹಿಸುವುದಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ರೀತಿಯಾದ ಭಿನ್ನ ವಿಚಾರಗಳು ವ್ಯಕ್ತವಾದವು. ಎರಡು ಗುಂಪುಗಳಿಂದ ವಾದ ವಿವಾದವು ಪ್ರಾರಂಭವಾದವು. ಒಂದು ಕಡೆ ಗಾಂಧಿವಾದಿಗಳು ಇನ್ನೊಂದು ಕಡೆ ಅಂಬೇಡ್ಕರ್‌ವಾದಿಗಳು ಈ ಶೀತಲ ಸಮರವು ಮುಂದುವರೆಯುತ್ತಿರುವಾಗ ಪಂಡಿತ್ ಜವಾಹರ್‌ಲಾಲ್ ನೆಹರೂರವರು ಮಧ್ಯ ಪ್ರವೇಶಿಸಿ ಎರಡು ಗುಂಪಿನವರನ್ನು ಸಂಧಾನಕ್ಕೆ ಪ್ರಯತ್ನಿಸಿದರು. ಮುಂದಿನ ದಿನ ಮಾನಗಳಲ್ಲಿ ಅಥವಾ ಭವಿಷ್ಯದ ಪೀಳಿಗೆಗೆ ಯಾವ ರೀತಿ ಅನುಕೂಲವಾಗುತ್ತದೆಯೋ ಆ ರೀತಿಯಾಗಿ ಅನುಸರಿಸಲು ಸಮ್ಮತಿ ಸೂಚಿಸಿದರು. ಆದ್ದರಿಂದ ಈ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಂವಿಧಾನದ ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿ ೪೦ ನೇ ಕಲಂನಲ್ಲಿ ಸೇರಿಸಲಾಯಿತು. ಈ ತತ್ವಗಳು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿಗೆ ತರಲು ಸೂಚಿಸುವುದಿಲ್ಲ.

"ಕೇಂದ್ರ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವದಲ್ಲಿ ತರಲು ಬಲವಂತ್‌ರಾಯ್ ಮೆಹತಾ ಸಮಿತಿಯನ್ನು ೧೯೫೭ ರಲ್ಲಿ ಯೋಗ್ಯ ರೀತಿಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತರುವ ಸಲುವಾಗಿ ಮಾರ್ಗದರ್ಶನ ಮತ್ತು ಶಿಫಾರಸ್ಸನ್ನು ಮಾಡಲು ನೇಮಕ ಮಾಡಿತು."[೭] ಈ ಸಮಿತಿಯು ನೀಡಿದ ಶಿಫಾರಸ್ಸನ್ನು ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ಮಾಡದೇ ರಾಜ್ಯಗಳಿಗೆ ಕಳುಹಿಸಿಕೊಟ್ಟಿತು. ಈ ಶಿಫಾರಸ್ಸುಗಳು ಸಂವಿಧಾನಾತ್ಮಕ ಸ್ಥಾನಮಾನಗಳನ್ನು ಪಡೆಯದೇ ಇರುವುದರಿಂದ ಕೆಲವೊಂದು ರಾಜ್ಯಗಳು ಈ ಶೀಫಾರಸ್ಸನ್ನು ಅಂಗೀಕರಿಸಿದವು ಮತ್ತು ಕೆಲವು ರಾಜ್ಯಗಳು ಶಿಫಾರಸ್ಸನ್ನು ಅಂಗೀಕರಿಸಲಿಲ್ಲ.

ಸರ್ಕಾರದ ಕಾರ್ಯಕ್ರಮಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ಸನ್ನು ಸಾಧಿಸದಿದ್ದಾಗ ಕೇಂದ್ರ ಸರ್ಕಾರವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸುಧಾರಣೆ ಮಾಡುವುದರ ಸಲುವಾಗಿ ೧೯೭೮ ರಲ್ಲಿ ಅಶೋಕ್ ಮೆಹತಾ ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿಯು ಸಹ ಮೂರು ಪ್ರಕಾರದ ಶ್ರೇಣಿಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲು ಶೀಫಾರಸ್ಸು ಮಾಡಿತು. ಈ ಶೀಫಾರಸ್ಸುಗಳನ್ನು ಸಹ ಜಾರಿಗೆ ತರಲು ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿಯನ್ನು ತರಲಿಲ್ಲ. "೧೯೮೫ ರಲ್ಲಿ ಜಿ.ವಿ.ಕೆ.ರಾವ್ ಸಮಿತಿ ಮತ್ತು ೧೯೮೬ ರಲ್ಲಿ ಸಿಂಘ್ವಿ ಸಮಿತಿಗಳನ್ನು ಸರ್ಕಾರ ನೇಮಿಸಿತು. ಆ ಸಮಿತಿಗಳು ಕೂಡಾ ಪಂಚಾಯತ್ ರಾಜ್ಯಕ್ಕೆ ಸಂವಿಧಾನಾತ್ಮಕ ಮಾನ್ಯತೆ ಕೊಡಲು ಒತ್ತಾಯಿಸಿದವು."೮

ಮೇಲಿನ ಎಲ್ಲ ಸಮಿತಿಗಳ ಶಿಫಾರಸ್ಸಿನ ಅನ್ವಯ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವುದರ ಮೂಲಕ ಸರ್ಕಾರ ದಿಟ್ಟ ನಿರ್ಧಾರವನ್ನು ಕೈಗೊಂಡಿತು. ರಾಜೀವ್‌ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರವು ಸಂವಿಧಾನದ ೬೪ ನೇ ತಿದ್ದುಪಡಿ ಮಂಡನೆ ಮಾಡಿತು. ಈ ಮಸೂದೆಯು ಲೋಕಸಭೆಯಲ್ಲಿ ಅಂಗೀಕಾರವಾಯಿತು. ಆದರೆ ರಾಜ್ಯಸಭೆಯಲ್ಲಿ ಸ್ವೀಕೃತವಾಗಲಿಲ್ಲ. ನಂತರದಲ್ಲಿ "ರಾಜೀವ್‌ಗಾಂಧಿಯವರ ಕನಸನ್ನು ನನಸು ಮಾಡಲು ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ದಿಟ್ಟ ಕ್ರಮವನ್ನು ಕೈಗೊಂಡಿತು. ಪರಿಣಾಮವಾಗಿ ಸಂವಿಧಾನದ ೭೩ ನೇ ತಿದ್ದುಪಡಿಗೆ ಸಂಸತ್ತಿನ ಅಂಗೀಕಾರ ೧೯೯೨ ರಲ್ಲಿ ದೊರೆಯಿತು. ೨೪-೦೪-೧೯೯೩ ರಿಂದ ಜಾರಿಗೆ ಬಂದಿದೆ. ಪಂಚಾಯತ್ ಶೀರ್ಷಿಕೆಯನ್ನು ಒಳಗೊಂಡ ೧೭ ನೇ ಭಾಗವನ್ನು ಸಂವಿಧಾನದಲ್ಲಿ ಸೇರಿಸಿ ೨೪೩ ರಿಂದ ೨೪೩ ಓ ವರೆಗೆ ೧೬ ಹೊಸ ವಿಧಿಗಳನ್ನು ಅಳವಡಿಸಲಾಗಿದೆ."೯ ಈ ೭೩ ನೇ ತಿದ್ದುಪಡಿಯ ಪಂಚಾಯತ್ ರಾಜ್ ಸಂಸ್ಥೆಯನ್ನು ರಾಜ್ಯಗಳು ಅಳವಡಿಸಿಕೊಳ್ಳುವಾಗ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಲು ಅವಕಾಶ ನೀಡಿತು. ಈ ೭೩ ನೇ ತಿದ್ದುಪಡಿಯು ಜಾರಿಗೆ ಬಂದ ೧ ವರ್ಷದ ಒಳಗಾಗಿ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಳ್ಳಬೇಕೆಂದು ಸೂಚಿಸಿತು. ಇದರನ್ವಯ ಭಾರತದಾದ್ಯಂತ ಏಕರೂಪದ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದಿತು.

ಸಂವಿಧಾನದ ೭೩ ನೇ ತಿದ್ದುಪಡಿಯ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

೧. "ಪ್ರತಿಯೊಂದು ಗ್ರಾಮವು ಗ್ರಾಮ ಪಂಚಾಯತಿಯನ್ನು ಹೊಂದಿರುತ್ತದೆ.

೨. ವಿಕೇಂದ್ರೀಕೃತ ಮೂರು ಹಂತಗಳ ವ್ಯವಸ್ಥೆ ಇದ್ದಲ್ಲಿ ಪಂಚಾಯತಿಗಳನ್ನು ರಾಜಕೀಯ ಸಂಸ್ಥೆಗಳೆಂದು ಪರಿಗಣಿಸುವುದು.

೩. ಗ್ರಾಮಸಭೆಯನ್ನು ಪಂಚಾಯತ್ ಸಂಸ್ಥೆಯನ್ನಾಗಿ ಪುನರುಜ್ಜೀವನಗೊಳಿಸುವುದು.

೪. ಗ್ರಾಮ, ತಾಲೂಕು ಮತ್ತು ಜಿಲ್ಲಾ ಈ ಮೂರು ಹಂತಗಳ ಪಂಚಾಯತ್ ಸಂಸ್ಥೆಗಳಿಗೆ ಆಡಳಿತ ನಿರ್ವಾಹಕರ ಆಯ್ಕೆಗೆ ನೇರವಾದ ಚುನಾವಣೆಗಳನ್ನು ನಡೆಸುವುದು.

೫. ನಿರ್ದಿಷ್ಟ ಸಂಖ್ಯೆಯ ಸ್ಥಾನಗಳನ್ನು ಅನುಸೂಚಿತ ಜಾತಿ ಮತ್ತು ಪಂಗಡಗಳ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿಡುವುದು. ಚುನಾವಣಾ ಕ್ಷೇತ್ರವನ್ನು ಮತ್ತು ಅಧ್ಯಕ್ಷರ ಸ್ಥಾನವನ್ನು ಸರದಿಯ ಮೇಲೆ ಬದಲಿಸುವುದು.

೬. ಪ್ರತಿ ಪಂಚಾಯತ್ ಆಡಳಿತಾವಧಿ ೫ ವರ್ಷಗಳು. ಒಂದು ವೇಳೆ ರಾಜ್ಯ ಸರ್ಕಾರವೇನಾದರೂ ಅದನ್ನು ವಿಸರ್ಜಿಸಿದಲ್ಲಿ ಹೊಸ ಚುನಾವಣೆಯಲ್ಲಿ ೬ ತಿಂಗಳು ನಡೆಸಬೇಕು.

೭. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಿಯಮಿತವಾಗಿ ನಡೆಸಬೇಕು.

೮. ಪ್ರತಿಯೊಂದು ರಾಜ್ಯದಲ್ಲಿ ಪಂಚಾಯತ್ ರಾಜ್ಯಗಳಿಗೆ ಆರ್ಥಿಕ ಆಯೋಗ ಮತ್ತು ಚುನಾವಣಾ ಆಯೋಗಗಳಿರಬೇಕು. ಪ್ರತಿ ಐದು ವರ್ಷಗಳಿಗೊಮ್ಮೆ ಪಂಚಾಯತ್‌ಗಳ ಹಣಕಾಸಿನ ಮೊತ್ತವನ್ನು ವಿತರಿಸುವುದು.

೯. ಪಂಚಾಯತ್‌ಗಳಿಗೆ ವಿಧಿಸಲಾಗಿರುವ ಕೆಲಸ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವಂತೆ ನೋಡಿಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮರ್ಪಕ ಆರ್ಥಿಕ ಸಂಪನ್ಮೂಲಗಳನ್ನೊದಗಿಸಿ ಕೊಡಬೇಕು.

೧೦. ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಪಂಚಾಯತಿಗಳು ಬದ್ಧವಾಗಿರಬೇಕು. ಗ್ರಾಮ ಪಂಚಾಯತಿಗಳಿಗೆ ಕಂದಾಯ ಸಂಗ್ರಹ, ತೆರಿಗೆ ವಿಧಿಸುವ ಅಧಿಕಾರವನ್ನು ಕೊಡಬೇಕು."[೧೦]

ಪಂಚಾಯತ್ ರಾಜ್ ವ್ಯವಸ್ಥೆಯು ಭಾರತದಲ್ಲಿ ಏಕರೂಪ ಆಡಳಿತವನ್ನು ಜಾರಿಗೆ ತಂದಿತು. ಕರ್ನಾಟಕ ರಾಜ್ಯ ಸರ್ಕಾರವು ಮೇ ೧೦ ೧೯೯೩ ರಂದು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿತು. ಹೀಗೆ ಹಲವಾರು ರಾಜ್ಯಗಳು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಳವಡಿಸಿಕೊಂಡವು. ೭೩ ನೇ ತಿದ್ದುಪಡಿಯಿಂದಾಗಿ ಗ್ರಾಮೀಣ ನಾಯಕತ್ವಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಈ ವ್ಯವಸ್ಥೆಯು ಪಂಚಾಯತ್ ರಾಜ್ ವ್ಯವಸ್ಥೆಯ ಬಹುಮುಖ್ಯ ಅಂಶವಾಗಿದೆ. ಅದೇ ರೀತಿಯಾಗಿ ಮೀಸಲಾತಿಯನ್ನು ಕಡ್ಡಾಯಗೊಳಿಸುವುದರಿಂದ ಎಲ್ಲ ಸಮುದಾಯಗಳಿಗೆ ರಾಜಕೀಯ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಿತು. ಅಲ್ಲದೆ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೆ ತಂದು ಕಾರ್ಯಗತಗೊಳಿಸಲು ಸಹಕಾರಿಯಾಯಿತು.

೭೩ ನೇ ತಿದ್ದುಪಡಿಯಿಂದಾಗಿ ಸರ್ಕಾರವು ಅರ್ಹ ಫಲಾನುಭವಿಗಳನ್ನು ಗುರುತಿಸಲು ಮಹತ್ವದ ಪಾತ್ರ ವಹಿಸುತ್ತಿದೆ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ :

ಸಂವಿಧಾನವನ್ನು ರಚಿಸುವಾಗ ಎಲ್ಲ ಸಮುದಾಯಗಳನ್ನು ದೃಷ್ಠಿಯಲ್ಲಿಟ್ಟುಕೊಂಡು ರಚಿಸಲಾಯಿತು. ಭಾರತವು ಒಂದು ಜಾತ್ಯಾತೀತ, ಸಮಾಜವಾದಿ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿದೆ. ಯಾವುದೇ ಸಮುದಾಯ ಮೇಲು ಅಥವಾ ಕೀಳಲ್ಲ. ಸಂವಿಧಾನದ ದೃಷ್ಠಿಯಲ್ಲಿ ಸರ್ವರೂ ಸಮಾನರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಲಾಗುತ್ತಿದೆ. ಸರ್ಕಾರದ ಪ್ರತಿಯೊಂದು ರಂಗದಲ್ಲಿಯೂ ಸಹ ಮೀಸಲಾತಿಯನ್ನು ಬಳಸಲಾಗುತ್ತಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿಯನ್ನು ಕಲ್ಪಿಸುವುದರ ಮೂಲಕ ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗದವರು ಸಹ ಆಡಳಿತ ನಡೆಸುವುದಕ್ಕೆ ಸಹಕಾರಿಯಾಗಿದೆ. ಗ್ರಾಮ ಪಂಚಾಯತ್, ತಾಲೂಕ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಎಂಬ ಮೂರು ಹಂತದ ಆಡಳಿತ ವ್ಯವಸ್ಥೆಯು ಅಧಿಕಾರದ ಭದ್ರತೆಗೆ ನಾಂದಿಯಾಗಿದೆ. ಪ್ರಜಾಪ್ರಭುತ್ವದ ಮೊದಲ ಘಟಕವೇ ಗ್ರಾಮ ಪಂಚಾಯತಿ. ಗ್ರಾಮ ಪಂಚಾಯತಿಯಿಂದ ಹಿಡಿದು ಲೋಕಸಭೆಯ ವರೆಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಭಾರತೀಯ ಸಮಾಜದ ಆಡಳಿತ ವ್ಯವಸ್ಥೆಯು ಕಾಲದಿಂದ ಕಾಲಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿತ್ತು. ಪ್ರಾಚೀನ ಭಾರತದಲ್ಲಿ ಆಡಳಿತವನ್ನು ಗಮನಿಸಿ ಹೇಳುವುದಾದರೆ ಎಲ್ಲ ವರ್ಗಗಳಲ್ಲೂ ಸಮಾನತೆಯನ್ನು ಕಲ್ಪಿಸಲಾಗಿತ್ತು. ಮನುಸ್ಮೃತಿ ರಚನೆಯ ನಂತರ ಸಮಾಜದ ಚಿತ್ರಣವೇ ಬದಲಾಯಿತು. ಮನು ತನ್ನ ಸ್ಮೃತಿಯಲ್ಲಿ ಶೂದ್ರ ಮತ್ತು ಮಹಿಳೆಯರನ್ನು ಪ್ರತ್ಯೇಕಿಸುತ್ತಾನೆ. ಅಂದರೆ ಶೂದ್ರ ಮತ್ತು ಮಹಿಳೆಯರಿಗೆ ಎಲ್ಲ ರಂಗದಿಂದಲೂ ತಾರತಮ್ಯವನ್ನು ಎಸಗಲಾಯಿತು. ಅಂದು ಪ್ರಾರಂಭವಾದ ಈ ತಾರತಮ್ಯ ವ್ಯವಸ್ಥೆ ಇಂದಿಗೂ ಚರ್ಚೆಯ ವಿಷಯವಾಗಿದೆ. ಅನ್ಯ ಧರ್ಮದ ಆಕ್ರಮಣದ ಜೊತೆಗೆ ಬಲವಂತದ ಮತಾಂತರ ಪ್ರಕ್ರಿಯೆಯು, ಜಾತಿಯ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿತು. ಇದರಿಂದಾಗಿ ಮಹಿಳೆ ಮತ್ತು ಕೆಳ ವರ್ಗದವರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದರು. ಬ್ರಿಟೀಷರ ಅವಧಿಯಲ್ಲಿ ಸಮಾನ ತಪ್ಪಿಗೆ ಸಮಾನ ಶಿಕ್ಷೆ ಎನ್ನುವ ಆಡಳಿತ ಜಾರಿಗೆ ಬಂದಿತು. ಈ ವ್ಯವಸ್ಥೆ ಜಾರಿಗೆ ಬಂದ ನಂತರ ಜಾತಿಗಳಲ್ಲಿಯ ಕೆಲವೊಂದು ನಿರ್ಬಂಧಗಳು ಸಡಿಲಗೊಂಡವು. ಭಾರತ ಗಣರಾಜ್ಯವಾದ ನಂತರ ಎಲ್ಲ ಸಮುದಾಯಗಳ ಅಭಿವೃದ್ಧಿಯ ಧ್ಯೋತಕವಾಗಿ ಸಂವಿಧಾನವು ರೂಪುಗೊಂಡಿತು. ಪ್ರಾಚೀನ ಕಾಲದಿಂದ ಅನರ್ಹತೆಗಳಿಗೆ ಒಳಗಾಗಿದ್ದ ಸಮುದಾಯಗಳಿಗೆ ವಿಶೇಷ ಪ್ರಾತಿನಿಧ್ಯವನ್ನು ಕಲ್ಪಿಸಿತು. ಶತ ಶತಮಾನದಿಂದ ಅನ್ಯಾಯಕ್ಕೆ ಒಳಗಾಗಿದ್ದ ಸಮುದಾಯಗಳಿಗೆ ಭಾಗ್ಯದ ಬಾಗಿಲು

ತೆರೆದಂತಾಯಿತು. ದುರ್ಬಲ ವರ್ಗದ ಸಮುದಾಯಗಳಿಗೆ ಮೀಸಲಾತಿಯನ್ನು ಕಲ್ಪಿಸುವುದರ ಮೂಲಕ ಅವರ ಸರ್ವಾಂಗೀಣ ಏಳಿಗೆಗಾಗಿ ಶ್ರಮಿಸಲು ಪ್ರಾರಂಭಿಸಲಾಯಿತು. ಮೀಸಲಾತಿ ಎಂದರೆ ಸ್ಥಾನಗಳನ್ನು ಕಾಯ್ದಿರಿಸುವುದರ ಬದಲಾಗಿ ಆ ಸ್ಥಾನಕ್ಕೆ ದುರ್ಬಲ ವರ್ಗಗಳ ಏಳಿಗೆಗೆ ಶ್ರಮಿಸುವುದಾಗಿದೆ. "ಅನುಸೂಚಿತ ಜಾತಿಗೆ ಶೇ.೧೫, ಅನುಸೂಚಿತ ಪಂಗಡಕ್ಕೆ ಶೇ.೩, ಹಿಂದುಳಿದ ವರ್ಗಕ್ಕೆ ಶೇ.೩೩"[೧೧] ರಾಜಕೀಯವಾಗಿ, ಶೈಕ್ಷಣಿಕಾಗಿ ಸರ್ಕಾರಿ ಹುದ್ದೆಗಳಲ್ಲಿಯೂ ಈ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಸರ್ಕಾರವು ಹೆಣ್ಣು ಮಕ್ಕಳಿಗಾಗಿ ವಿಶೇಷವಾದ ಶೈಕ್ಷಣಿಕ ಯೋಜನೆಯನ್ನು ಹಮ್ಮಿಕೊಂಡಿದೆ.

ಸಂವಿಧಾನವು ಹಲವಾರು ಶಾಸನಾತ್ಮಕ, ರಕ್ಷಣಾತ್ಮಕ ಮತ್ತು ಮೀಸಲಾತಿ ಕ್ರಮಗಳನ್ನು ಹಿಂದುಳಿದ ವರ್ಗದವರಿಗಾಗಿ ಕೈಗೊಂಡಿದೆ.

೧) ಸಾಮಾಜಿಕ ಕ್ರಮಗಳು :

ಭಾರತೀಯ ಸಮಾಜದಲ್ಲಿ ತಾರತಮ್ಯ ಎನ್ನುವುದು ಪ್ರಾಚೀನ ಕಾಲದಿಂದಲೂ ಕಂಡುಬರುವ ಸಂಗತಿಯಾಗಿದೆ. ಈ ತಾರತಮ್ಯವನ್ನು ನಿವಾರಿಸುವ ಸಲುವಾಗಿ ಸಂವಿಧಾನದಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸಂವಿಧಾನದ ೧೫ ನೇ ವಿಧಿಯು ತಾರತಮ್ಯ ಮಾಡುವುದನ್ನು ಅಪರಾಧವೆಂದು ತಿಳಿಸುತ್ತದೆ. ೧೭ ನೇ ವಿಧಿಯು ಅಸ್ಪೃಶ್ಯತೆ ಆಚರಿಸುವುದನ್ನು ಶಿಕ್ಷಾರ್ಹ ಅಪರಾಧವೆಂದು ತಿಳಿಸುತ್ತದೆ. ಕೆಳವರ್ಗದವರು ಹೆಚ್ಚಾಗಿ ಜೀತದಾಳಾಗಿ ದುಡಿಯುತ್ತಿದ್ದರು/ದ್ದಾರೆ. ಪರಿಶಿಷ್ಟ ಜಾತಿಯ ಹಲವಾರು ಜನರನ್ನು ಜೀತದಿಂದ ಮುಕ್ತಗೊಳಿಸಿ ಪುನರ್‌ವಸತಿಯನ್ನು ಕಲ್ಪಿಸಲಾಗಿದೆ. "ಭಾರತ ಸರ್ಕಾರದ ಕಾರ್ಮಿಕ ಹಾಗೂ ಪುನರ್‌ವಸತಿ ಖಾತೆಯ ೧೯೮೩ ರ ವರದಿಯಂತೆ ಒಟ್ಟು ೧.೬೧ ಲಕ್ಷ ಜೀತದಾಳುಗಳಲ್ಲಿ ೧.೧೯ ಲಕ್ಷ ಜನರಿಗೆ ಜೀತಮುಕ್ತರಾಗಿಸಿ ಅವರಿಗೆ ಪುನರ್‌ವಸತಿ ಕಲ್ಪಿಸಲಾಗಿತ್ತು."[೧೨] ಸಂವಿಧಾನದಲ್ಲಿ ಸಮಾನತೆಯನ್ನು ತರುವುದರ ಮೂಲಕ ಹೀನ ವೃತ್ತಿಗೆ ಮಾತ್ರ ಮೀಸಲಾಗಿದ್ದ ಕೆಳಜಾತಿಯ ಜನರು ಉತ್ತಮವಾದ ಬದುಕನ್ನು ಕಟ್ಟಿಕೊಳ್ಳಲು ಸಹಕಾರಿಯಾಯಿತು.

೨) ಆರ್ಥಿಕ ಕ್ರಮಗಳು :

ಆರ್ಥಿಕ ಅಸಮಾನತೆ ನಮ್ಮ ಸಮಾಜದ ಬಹುಮುಖ್ಯವಾದ ಸಮಸ್ಯೆಯಾಗಿದೆ. ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡಲು ಸಂವಿಧಾನ ಮತ್ತು ಸರ್ಕಾರಗಳು ತಕ್ಕ ಮಟ್ಟಿಗೆ ಶ್ರಮಿಸುತ್ತಿವೆ. ಪರಿಶಿಷ್ಟ ಜಾತಿ ಜನಾಂಗಗಳ ಅಭಿವೃದ್ಧಿಗಾಗಿ ಸರ್ಕಾರವು ಪಂಚವಾರ್ಷಿಕ ಯೋಜನೆಗಳ ಮುಖಾಂತರ ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಕೃಷಿ ಅಭಿವೃದ್ಧಿಗಾಗಿ ಸಂಬಂಧಿಸಿದ ಉಪಕರಣಗಳು, ಬೀಜ, ರಸಗೊಬ್ಬರಗಳು ಮತ್ತಿತರ ಸೌಕರ್ಯಗಳನ್ನು ಸರ್ಕಾರ ಒದಗಿಸುತ್ತಿದೆ.

"ಅಸ್ಸಾಂ ರಾಜ್ಯವೊಂದರಲ್ಲಿಯೇ ೯೦೭೪ ಎಕರೆ ಜಮೀನನ್ನು ಪರಿಶಿಷ್ಟ ಜನಾಂಗಗಳಿಗೆ ನೀಡಿ ಸ್ಥಿರವಾಗಿ ನೆಲೆಸಿ ಬೇಸಾಯ ವೃತ್ತಿಯನ್ನು ಅವಲಂಬಿಸಲು ಉತ್ತೇಜನ ನೀಡಲಾಗಿದೆ."[೧೩]

ವಿವಿಧ ರೀತಿಯ ಯೋಜನೆಗಳ ಮೂಲಕ ಹಿಂದುಳಿದ ವರ್ಗಗಳ ಅಭಿವೃದ್ಧಿಯನ್ನು ಸಾಧಿಸಲಾಗುತ್ತಿದೆ. ಪಶುಪಾಲನೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಜೇನು ಸಾಕಾಣಿಕೆ, ಗುಡಿ ಕೈಗಾರಿಕೆ ಮುಂತಾದವುಗಳಿಗೆ ಸಬ್ಸಿಡಿ ದರದಲ್ಲಿ ಸಾಲ ಸೌಲಭ್ಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹಲವಾರು ಸ್ಪರ್ಧಾತ್ಮಕ ಹಾಗೂ ಜೀವನ ಅವಶ್ಯಕ ವೃತ್ತಿಗಳಿಗಾಗಿ ತರಬೇತಿಗಳನ್ನು ನೀಡುತ್ತಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸರ್ಕಾರವು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆರ್ಥಿಕ ಪ್ರಬಲತೆಗೆ ಉತ್ತೇಜನ ನೀಡುತ್ತಿದೆ.

೩) ಶೈಕ್ಷಣಿಕ ಕ್ರಮಗಳು :

ಹಿಂದುಳಿದ ವರ್ಗದವರ ಶೈಕ್ಷಣಿಕ ಸ್ಥಾನಮಾನವನ್ನು ಬಲಪಡಿಸುವ ಸಲುವಾಗಿ ಹಲವಾರು ಕ್ರಮಗಳನ್ನು ಸಂವಿಧಾನ ಮತ್ತು ಸರ್ಕಾರದಿಂದ ಕೈಗೊಳ್ಳಲಾಗುತ್ತಿದೆ. ಸಂವಿಧಾನದ ೨೯ ನೇ ವಿಧಿಯು ಸರ್ಕಾರದಿಂದ ನಡೆಯುತ್ತಿರುವ ಇಲ್ಲವೇ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವನ್ನು ನಿರಾಕರಿಸುವಂತಿಲ್ಲ. ಸಂವಿಧಾನದ ೧೫ (೪) ಮತ್ತು ೨೯ (೨) ವಿಧಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ವಿಶೇಷ ಸವಲತ್ತುಗಳನ್ನು ಸೂಚಿಸುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭ್ಯುದಯಕ್ಕೆ ಯೋಗ್ಯ ಶಿಕ್ಷಣವನ್ನು ಕಲ್ಪಿಸುವ ಮಹತ್ವದ ಇರಾದೆಯನ್ನು ಸರ್ಕಾರಗಳು ಒಳಗೊಂಡಿವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಕರ್ಯ, ವಿದ್ಯಾರ್ಥಿ ವೇತನ, ವಸತಿ ನಿಲಯದ ಅನುಕೂಲತೆ, ಪಠ್ಯ ಪುಸ್ತಕಗಳ ವಿತರಣೆ, ಹೊರದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯುವವರಿಗೆ ವಿದ್ಯಾರ್ಥಿ ವೇತನವನು ನೀಡಲಾಗುತ್ತಿದೆ. "ಗಂಗಾವತಿ ತಾಲೂಕಿನ ಬಸಾಪಟ್ಟಣ ಗ್ರಾಮ ಪಂಚಾಯತಿಯಲ್ಲಿ ಶೇಕಡಾ ೧೮ ರ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಲಾಯಿತು."[೧೪] ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಗಳೆಡೆಗೆ ಆಕರ್ಷಿಸಿಕೊಳ್ಳಲು ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಬಿಸಿಯೂಟ, ಬೈಸಿಕಲ್ ವಿತರಣೆ, ಚಿಣ್ಣರ ಅಂಗಳ, ಪ್ರೋತ್ಸಾಹ ಧನ ನೀಡುವಿಕೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೪) ಧಾರ್ಮಿಕ ಕ್ರಮಗಳು :

ಭಾರತ ದೇಶವು ಹಲವಾರು ಧರ್ಮಗಳನ್ನು ಒಳಗೊಂಡಿದೆ. ವಿಶ್ವದ ಹಲವಾರು ಧರ್ಮಗಳು ಭಾರತೀಯ ಸಮಾಜದಲ್ಲಿ ಕಂಡುಬರುತ್ತವೆ. ಹಲವಾರು ಧರ್ಮ, ಭಾಷೆ, ಜನಾಂಗ, ಸಂಸ್ಕೃತಿಗಳನ್ನು ಒಳಗೊಂಡ ವೈವಿಧ್ಯಮಯ ರಾಷ್ಟ್ರವಾಗಿದೆ. ಎಲ್ಲ ಧರ್ಮಗಳನ್ನು ಸಮಾನವಾಗಿ

ಪರಿಗಣಿಸಲ್ಪಟ್ಟಿದೆ. ಪ್ರತಿಯೊಬ್ಬ ಪ್ರಜೆಯು ಯಾವ ಧರ್ಮವನ್ನು ಬೇಕಾದರೂ ಅನುಸರಿಸುವುದಕ್ಕೆ ನಮ್ಮ ಸಂವಿಧಾನವು ಅವಕಾಶ ಕಲ್ಪಿಸಿ ಕೊಟ್ಟಿದೆ. ಸಂವಿಧಾನದಲ್ಲಿ ೨೫ ರಿಂದ ೨೮ ಕಲಂಗಳು ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ವಿವರಿಸುತ್ತದೆ. ೨೫ ನೇ ವಿಧಿಯು ಭಾರತೀಯ ಪ್ರಜೆಯು ತನಗೆ ಇಷ್ಟವಾದ ಧರ್ಮದಲ್ಲಿ ನಂಬಿಕೆ ವಿಶ್ವಾಸವನ್ನಿಟ್ಟು ಅನುಸರಿಸುತ್ತಾ ಧರ್ಮ ಪ್ರಚಾರವನ್ನು ಮಾಡಬಹುದೆಂದು ತಿಳಿಸುತ್ತದೆ. ೨೬ ನೇ ವಿಧಿಯು ಪ್ರತಿಯೊಂದು ಧಾರ್ಮಿಕ ವರ್ಗದವರು ತಮ್ಮ ಧಾರ್ಮಿಕ ವ್ಯವಹಾರ ಚಟುವಟಿಕೆಗಳನ್ನು ನಿರ್ವಹಿಸಲು ಸ್ವಾತಂತ್ರವನ್ನು ನೀಡಿದೆ. ೨೭ ನೇ ವಿಧಿಯು ಪ್ರತಿಯೊಂದು ಧರ್ಮ ಅಥವಾ ಧಾರ್ಮಿಕ ಸಂಸ್ಥೆಗಳ ರಕ್ಷಣೆಗೆ ಅಥವಾ ಪ್ರಚಾರಕ್ಕೆ ಸರ್ಕಾರವು ಧರ್ಮದ ಹೆಸರಿನಲ್ಲಿ ತೆರಿಗೆ ವಿಧಿಸಿ ವಂತಿಗೆಯನ್ನು ನೀಡಬೇಕೆಂದು ಒತ್ತಾಯಿಸುವಂತಿಲ್ಲ. ೨೮ ನೇ ಕಲಂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ಧನಸಹಾಯವನ್ನು ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮದ ಬೋಧನೆಯನ್ನು ಮಾಡುವುದನ್ನು ನಿಷೇಧಿಸುತ್ತದೆ. ದೇಶದ ಶಾಂತಿ ಸುವ್ಯವಸ್ಥೆಗೆ ಭಂಗ ತರದಂತೆ ಯಾವ ಧರ್ಮವನ್ನಾದರೂ ಅನುಸರಿಸಲು ಅವಕಾಶ ನೀಡಿದೆ.

೫) ರಾಜಕೀಯ ಕ್ರಮಗಳು :

ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿಯೇ ಭಾರತವು ಒಂದು ಪ್ರಜಾಸತ್ತಾತ್ಮಕ ಗಣರಾಜ್ಯವೆಂದು ಘೋಷಿಸುತ್ತದೆ. ಸಂವಿಧಾನ ರಚನೆಯಾದ ನಂತರ ವಂಶ ಪಾರಂಪರ್ಯವಾದ ಆಡಳಿತ ವ್ಯವಸ್ಥೆಗೆ ಕಡಿವಾಣ ಹಾಕಿತು. ಪ್ರತಿಯೊಬ್ಬರಿಗೂ ಅಧಿಕಾರ ಎನ್ನುವ ದೃಷ್ಠಿಯಲ್ಲಿ ಸಂವಿಧಾನ ರಚನೆಯಾಗಿದೆ. ಸ್ಥಳೀಯ ಮಟ್ಟದಿಂದ ಹಿಡಿದು ಕೇಂದ್ರದವರೆಗೂ ಪ್ರತಿಯೊಂದು ಸಮುದಾಯದ ವರಿಗೂ ರಾಜಕೀಯ ಅವಕಾಶವನ್ನು ಕಲ್ಪಿಸಲಾಗಿದೆ. ಸಂವಿಧಾನದ ೩೩೦, ೩೩೨, ೩೩೪ ವಿಧಿಗಳು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕಲ್ಪಿಸುತ್ತದೆ. ಜನಸಂಖ್ಯೆಯ ಆಧಾರದ ಮೇರೆಗೆ ಅನುಸೂಚಿತ ಜಾತಿ–ಜನಾಂಗದವರಿಗೆ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಸಂವಿಧಾನದ ೩೩೦ ನೇ ಅನುಚ್ಛೇದವು ವಿವರಿಸುತ್ತದೆ. ಇದರ ಪ್ರಕಾರ "ಈಗ ಲೋಕಸಭೆಯ ಒಟ್ಟು ಸ್ಥಾನಗಳಲ್ಲಿ ೭೯ ಸ್ಥಾನಗಳನ್ನು ಅನುಸೂಚಿತ ಜಾತಿಯ ಜನರಿಗೆ ಹಾಗೂ ೩೮ ಸ್ಥಾನಗಳನ್ನು ಅನುಸೂಚಿತ ಜನಾಂಗದವರಿಗೆ ಒಟ್ಟು ೧೧೭ ಸ್ಥಾನಗಳನ್ನು ಮೀಸಲು ಕ್ಷೇತ್ರಗಳನ್ನಾಗಿ ಘೋಷಿಸಲಾಗಿದೆ."[೧೫] ಮಹಿಳೆಯರಿಗೂ ಸಹ ಸಂವಿಧಾನದ ಮೂಲಕ ಮೀಸಲಾತಿಯನ್ನು ನೀಡಲಾಗಿದೆ. "ಸಂವಿಧಾನದ ೭೩ ನೇ ತಿದ್ದುಪಡಿಯ ಮೇರೆಗೆ ಗ್ರಾಮೀಣ ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯತಿ, ತಾಲೂಕ ಪಂಚಾಯತ್ ಸಮಿತಿ ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇಕಡಾ ೩೩ ರಷ್ಟು

ಮೀಸಲಾತಿಯ ಅವಕಾಶವನ್ನು ಕಲ್ಪಿಸಲಾಗಿದೆ."[೧೬] ಇನ್ನುಳಿದಂತೆ ವಿಧಾನಸಭೆ ಮತ್ತು ಲೋಕಸಭೆ ಈ ಮೀಸಲಾತಿ ಜಾರಿಗೆ ಬಂದಿಲ್ಲ.

ಒಟ್ಟಾರೆಯಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಹೀಗೆ ಜೀವನದ ವಿವಿಧ ರಂಗಗಳಲ್ಲಿ ಎಲ್ಲ ಸಮುದಾಯಗಳಿಗೆ ಸಮಾನತೆಯನ್ನು ಕಲ್ಪಿಸಲಾಗಿದೆ. ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಬಡವ-ಬಲ್ಲಿದ ಎನ್ನುವ ಬೇಧ-ಭಾವವನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಸಂವಿಧಾನ, ಸರ್ಕಾರ ಮತ್ತು ವಿವಿಧ ಸಂಘ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ.

ಅಡಿ ಟಿಪ್ಪಣಿಗಳು :

೧. ಬಡಿಗೇರ ಜಿ.ಎಲ್. **"ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ"** ೨೦೦೫, ಪುಟ ೨೫೦.

೨. ಬೈರಪ್ಪ ಕೆ. **"ಭಾರತೀಯ ಸಮಾಜ"** ೨೦೦೫, ಪುಟ ೭೧.

೩. ನಾಗೇಶ ಹೆಚ್.ವಿ. **"ಗ್ರಾಮೀಣ ನ್ಯಾಯ"** ೧೯೯೪, ಪುಟ ೩.

೪. ಅದೇ ಪುಟ ೫.

೫. ಬಡಿಗೇರ ಜಿ.ಎಲ್. **"ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ"** ೨೦೦೫, ಪುಟ ೩.

೬. ಅದೇ ಪುಟ ೨೫೪.

೭. ಅದೇ ಪುಟ ೨೫೬.

೮. ಅದೇ ಪುಟ ೨೫೬.

೯. ರಾಜಶೇಖರ ಹೆಚ್.ಎಂ. **"ಭಾರತ ಸರ್ಕಾರ ಮತ್ತು ರಾಜಕೀಯ"** ೧೯೯೯, ಪುಟ ೩೧೬.

೧೦. ಬಿಡಗೇರ ಜಿ.ಎಲ್. **"ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ"** ೨೦೦೫, ಪುಟ ೨೬೪.

೧೧. ಡಾ॥ ಭಟ್ ಎಂ.ಎಂ. **"ಕರ್ನಾಟಕ ಗ್ರಾಮ ಪಂಚಾಯತ್ ಶಾಸನ ಪರಿಚಯ"** ೧೯೯೪, ಪುಟ ೯.

೧೨. ಬೈರಪ್ಪ ಕೆ. **"ಭಾರತೀಯ ಸಮಾಜ"** ಪುಟ ೧೩೦.

೧೩. ಅದೇ ಪುಟ ೧೪೮.

೧೪. **"ಪ್ರಜಾ ಪ್ರಪಂಚ"** ಸೋಮವಾರ ಅಗಸ್ಟ್ ೧೪, ೨೦೦೮, ಪುಟ ೧.

೧೫. ಕಬ್ಬೂರ ಎಸ್.ಕೆ. ಡಾ॥ ದಿಲಾರ್.ಕೆ.ಎಫ್. **"ರಾಜಕೀಯ ಚಿಂತಕರು, ಪ್ರವೃತ್ತಿಗಳು ಮತ್ತು ಪ್ರಕ್ರಿಯೆಗಳು"** ಪುಟ ೨೧೮.

೧೬. ಅದೇ ಪುಟ ೨೧೯.

ಅಧ್ಯಾಯ ೪

೪. ಗಂಗಾವತಿ ತಾಲೂಕಿನ ಪಂಚಾಯತ್ ರಾಜ್ ಆಡಳಿತ

೪.೧ ಜಿಲ್ಲಾ ಪಂಚಾಯತ್

೪.೨ ತಾಲೂಕ ಪಂಚಾಯತ್

೪.೩ ಗ್ರಾಮ ಪಂಚಾಯತ್

ಪೀಠಿಕೆ :

ನಗರ ಮತ್ತು ಗ್ರಾಮೀಣ ಪ್ರದೇಶಗಳ ಸ್ಥಳೀಯ ಆಡಳಿತ ಸಂಸ್ಥೆಗಳನ್ನು ನೋಡುವುದಾದರೆ ಗ್ರಾಮೀಣ ಪ್ರದೇಶಗಳಲ್ಲಿ ಎರಡು ಶತಮಾನಗಳಷ್ಟು ತಡವಾಗಿ ಆಡಳಿತ ಅಸ್ತಿತ್ವಕ್ಕೆ ಬಂದಿದೆ. "ಬ್ರಿಟೀಷರ ಆಡಳಿತ ಕಾಲದಲ್ಲಿ ಮದ್ರಾಸಿನ ಮುನ್ಸಿಪಲ್ ಕಾರ್ಪೊರೇಶನ್ ೧೬೮೭ ರಲ್ಲಿ ರಚಿತಗೊಂಡಿತ್ತು. ೧೭೨೬ ರಲ್ಲಿ ಮುಂಬೈ ಮತ್ತು ಕಲ್ಕತ್ತಾ ಕಾರ್ಪೊರೇಶನ್‌ಗಳು ಅಸ್ತಿತ್ವಕ್ಕೆ ಬಂದವು. ೧೮೮೨ ರಲ್ಲಿ ಸ್ಥಳೀಯ ಸರ್ಕಾರಗಳ ಬೆಳವಣಿಗೆಗೆ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿತು. ರಾಯಲ್ ಕಮಿಷನ್ ಕೂಡಾ ೧೯೦೭ ರಲ್ಲಿ ಸ್ಥಳೀಯ ಸರ್ಕಾರಗಳ ಅಭಿವೃದ್ಧಿಗೆ ತನ್ನ ಶಿಫಾರಸ್ಸು ಮಾಡಿತು. ಬೆಂಗಳೂರಿನ ಕಾಂಟೋನ್ಮೆಂಟ್ ಪ್ರದೇಶದಲ್ಲಿ ಮುನ್ಸಿಪಾಲಿಟಿಯನ್ನು ರಚಿಸಲು ಹಿಂದಿನ ಮೈಸೂರು ಸರ್ಕಾರ ೧೮೯೭ ರಲ್ಲಿ ಕಾಯ್ದೆಯನ್ನು ಜಾರಿಗೆ ತಂದಿತು. ೧೯೯೩ ರಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಚುನಾಯಿತ ಮುನ್ಸಿಪಲ್ ಸಂಸ್ಥೆಗಳನ್ನು ರಚಿಸಿತು."[೧] ಹೀಗೆ ಭಾರತೀಯ ಸಮಾಜದಲ್ಲಿ ಆಡಳಿತ ವ್ಯವಸ್ಥೆ ರೂಪಗೊಳ್ಳುತ್ತಾ ಬಂದಿದ್ದು ಸ್ವಾತಂತ್ರ್ಯದ ನಂತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವುದರ ಸಲುವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಈ ವ್ಯವಸ್ಥೆ ಸಮಾಜದ ಅಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ಪಂಚಾಯತ್ ರಾಜ್ ವ್ಯವಸ್ಥೆಯು ತನ್ನದೇ ಆದ ಮಹತ್ವವನ್ನು ಒಳಗೊಂಡಿದೆ. "೧೯೮೩ ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರವು ವಿಕೇಂದ್ರೀಕರಣಕ್ಕೆ ಒತ್ತು ನೀಡುವ ಉದ್ದೇಶದಿಂದ ಜನತೆಗೆ ಅಧಿಕಾರ ಎಂಬ ಘೋಷಣೆಯೊಂದಿಗೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಶಾಸನಾತ್ಮಕ ಕ್ರಮಗಳನ್ನು ರೂಪಿಸಿತು. ಈ ನಿಟ್ಟಿನಲ್ಲಿ ೧೯೮೩ ರ ಜಿಲ್ಲಾ ಪಂಚಾಯತ್, ತಾಲೂಕ ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತಿ ಹಾಗೂ ನ್ಯಾಯ ಪಂಚಾಯತಿಗಳ ಕಾಯ್ದೆಯನ್ನು ಜಾರಿಗೊಳಿಸಲು ೧೯೮೭ ರಲ್ಲಿ ಪಂಚಾಯತ್ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಿತು."[೨] ಸ್ವತಂತ್ರ್ಯ ಭಾರತದಲ್ಲಿ ಪ್ರಥಮವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಜಸ್ಥಾನ ಸರ್ಕಾರವು ಜಾರಿಗೆ ತಂದಿತು. ನಂತರದ ದಿನಗಳಲ್ಲಿ ಕರ್ನಾಟಕ ರಾಜ್ಯವೂ ಸಹ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿತು.

೪.೧ ಜಿಲ್ಲಾ ಪಂಚಾಯತ್ :

ಕೊಪ್ಪಳ ಜಿಲ್ಲೆ ಸ್ವತಂತ್ರ್ಯವಾಗಿ ಅಸ್ತಿತ್ವಕ್ಕೆ ಬರುವುದಕ್ಕಿಂತ ಪೂರ್ವದಲ್ಲಿ ಅದು ರಾಯಚೂರು ಜಿಲ್ಲೆಯಲ್ಲಿ ಗುರ್ತಿಸಿಕೊಂಡಿತ್ತು. ಜನತಾ ಪಕ್ಷದ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ ಏಳು ನೂತನ ಜಿಲ್ಲೆಗಳನ್ನು ರಚಿಸಿದರು. ಈ ಏಳು ನೂತನ ಜಿಲ್ಲೆಗಳಲ್ಲಿ ಕೊಪ್ಪಳವೂ ಒಂದಾಗಿದೆ. ೧೯೯೭ ಆಗಸ್ಟ್ ೨೪ ರಂದು ಕೊಪ್ಪಳವನ್ನು ನೂತನ ಜಿಲ್ಲೆ ಎಂದು ಘೋಷಿಸಲಾಯಿತು. ಈ ಜಿಲ್ಲೆಯು ನಾಲ್ಕು ತಾಲೂಕುಗಳನ್ನು ಒಳಗೊಂಡಿದೆ. ಕೊಪ್ಪಳ, ಗಂಗಾವತಿ, ಕುಷ್ಟಗಿ ಹಾಗೂ ಯಲಬುರ್ಗ. ಕೊಪ್ಪಳ ಜಿಲ್ಲೆಯು ಒಟ್ಟು ೨೭ ಜಿಲ್ಲಾ ಪಂಚಾಯತ್ ಸ್ಥಾನಗಳನ್ನು ಒಳಗೊಂಡಿದೆ. ಕೊಪ್ಪಳ ಜಿಲ್ಲೆಯಲ್ಲಿ ಅತಿ ಹೆಚ್ಚು ಜಿಲ್ಲಾ ಪಂಚಾಯತ್ ಸದಸ್ಯರನ್ನು ಒಳಗೊಂಡಿರುವ ತಾಲೂಕು ಎಂದರೆ ಗಂಗಾವತಿ. ಗಂಗಾವತಿ ತಾಲೂಕು ಒಟ್ಟು ಎಂಟು ಜಿಲ್ಲಾ ಪಂಚಾಯತ್ ಸ್ಥಾನಗಳನ್ನು ಒಳಗೊಂಡಿದೆ. ಉಳಿದಂತೆ ಕೊಪ್ಪಳ ಏಳು, ಕುಷ್ಟಗಿ ಆರು ಮತ್ತು ಯಲಬುರ್ಗ ಆರು ಜಿಲ್ಲಾ ಪಂಚಾಯತ್ ಸ್ಥಾನಗಳನ್ನು ಒಳಗೊಂಡಿದೆ. ಗಂಗಾವತಿ ತಾಲೂಕು ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತ್‌ನಲ್ಲಿ ಪ್ರಮುಖ ರಾಜಕೀಯ ಸ್ಥಾನವನ್ನು ಪಡೆದುಕೊಂಡಿದೆ.

ಕನಾಟಕ ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗೆ ಪ್ರಪ್ರಥಮವಾಗಿ ೧೯೯೩ ರ ಹೊಸ ಕಾಯ್ದೆಯನ್ವಯ ಜಿಲ್ಲಾವಾರು ಸ್ಥಾನಗಳನ್ನು ಮತ್ತು ಆಯಾ ಪಕ್ಷಗಳ ಸದಸ್ಯರ ಸಂಖ್ಯೆಯನ್ನು ಈ ಕೆಳಗಿನಂತೆ ನೋಡಬಹುದು.

"೧೯೯೩ ರಲ್ಲಿ ಜಿಲ್ಲಾ ಪಂಚಾಯತ್ ವಿವಿಧ ಪಕ್ಷಗಳು ಗೆದ್ದ ಸ್ಥಾನಗಳು

ಕ್ರ ಸಂ.	ಜಿಲ್ಲೆ	ಒಟ್ಟು ಸ್ಥಾನಗಳು	ಜನತಾ ದಳ	ಕಾಂಗ್ರೆಸ್	ಬಿಜೆಪಿ	ಕೆಸಿಪಿ	ರೈತ ಸಂಘ	ಇತರ ಪಕ್ಷಗಳು	ಪಕ್ಷೇತರರು
೧	ಬೆಂಗಳೂರು (ನ)	೧೮	೧೨	೪	೨	-	-	-	-
೨	ಬೆಂಗಳೂರು (ಗ್ರಾ)	೩೮	೩೩	೧	೪	-	-	-	-
೩	ಚಿತ್ರದುರ್ಗ	೪೬	೨೪	೧೪	೬	-	-	-	೨
೪	ಕೋಲಾರ	೫೦	೩೫	೧೪	-	-	-	೧ ಸಿ.ಪಿ.ಎಂ.	-
೫	ಶಿವಮೊಗ್ಗ	೪೧	೧೮	೧೦	೭	೫	೧	-	-
೬	ತುಮಕೂರು	೫೪	೨೯	೧೬	೪	-	-	-	೫
೭	ಚಿಕ್ಕಮಂಗಳೂರು	೩೩	೨೮	೩	-	-	-	-	೨
೮	ದಕ್ಷಿಣ ಕನ್ನಡ	೫೫	೧೫	೧೪	೨೫	-	-	೧ ಸಿ.ಪಿ.ಎಂ.	-
೯	ಹಾಸನ	೩೭	೩೩	೩	-	-	-	-	-
೧೦	ಕೊಡಗು	೨೭	೧೫	೫	೭	-	-	-	-

೧೧	ಮಂಡ್ಯ	೩೯	೩೦	೭	–	–	೨	–	–
೧೨	ಮೈಸೂರು	೬೪	೪೦	೧೯	೨	–	–	–	೩
೧೩	ಬೆಳಗಾವಿ	೭೬	೫೪	೧೦	–	–	–	–	೧೨
೧೪	ಬಿಜಾಪುರ	೬೦	೫೧	೯	–	–	–	–	–
೧೫	ಧಾರವಾಡ	೬೭	೫೨	೧೫	–	–	–	–	–
೧೬	ಉತ್ತರ ಕನ್ನಡ	೩೮	೩೬	–	೨	–	–	–	–
೧೭	ಬಳ್ಳಾರಿ	೩೮	೨೭	೧೦	–	–	–	–	೧
೧೮	ಬೀದರ್	೨೯	೨೨	೫	೨	–	–	–	–
೧೯	ಗುಲ್ಬರ್ಗಾ	೫೫	೨೭	೧೬	೨	೯	–	೧ ಸಿ.ಪಿ.ಎಂ.	–
೨೦	ರಾಯಚುರು	೫೪	೩೪	೧೭	–	–	೧	–	೨
	ಒಟ್ಟು	೯೧೯	೬೧೪	೧೬೨	೬೩	೧೪	೪	೩	೨೭

೨೩

೨೦೦೫-೦೬ ರ ಸಾರ್ವತ್ರಿಕ ಪಂಚಾಯತ್ ಚುನಾವಣೆಯಲ್ಲಿ ಕೊಪ್ಪಳ ಜಿಲ್ಲಾ ಪಂಚಾಯತಿ ೨೭ ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆಯ ಮೂಲಕ ಸದಸ್ಯರನ್ನು ಆರಿಸಲಾಯಿತು. ೨೭ ಸ್ಥಾನಗಳಲ್ಲಿ ಕಾಂಗ್ರೆಸ್‌ನಿಂದ ೧೮, ಜಾತ್ಯಾತೀತ ಜನತಾದಳ (ಜಾತ್ಯಾತೀತ) ೬, ಭಾರತೀಯ ಜನತಾಪಕ್ಷ ೧ ಮತ್ತು ಪಕ್ಷೇತ್ರರು ೨ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಪಂಚಾಯತಿಯ ಒಟ್ಟು ಸ್ಥಾನಗಳಲ್ಲಿ ಮೂರು ಸ್ಥಾನಗಳಲ್ಲಿ ಒಂದು ಸ್ಥಾನ ಪರಿಶಿಷ್ಟ ಪಂಗಡದ ಮಹಿಳೆಗೆ ಮೀಸಲಿಡಲಾಗಿತ್ತು. ಪರಿಶಿಷ್ಟ ಪಂಗಡದ ಮೂರು ಜನ ಸದಸ್ಯರಲ್ಲಿ ಇಬ್ಬರು ಕಾಂಗ್ರೆಸ್ ಪಕ್ಷದಿಂದ ಹಾಗೂ ೧ ಜನತಾದಳ(ಜಾತ್ಯಾತೀತ)ದಿಂದ ಆಯ್ಕೆಯಾಗಿದ್ದರು. ಇನ್ನುಳಿದಂತೆ ಪರಿಶಿಷ್ಟ ಜಾತಿಗೆ ನಾಲ್ಕು ಸ್ಥಾನಗಳನ್ನು ಮೀಸಲಿಡಲಾಗಿತ್ತು. ಇದರಲ್ಲಿ ಒಬ್ಬರು ಪುರುಷರು ಮತ್ತು ಇಬ್ಬರು ಮಹಿಳೆಯರಿಗೆ ಮೀಸಲಾತಿಯನ್ನು ನೀಡಲಾಗಿತ್ತು. ಹಿಂದುಳಿದ ವರ್ಗದ ೯ ಸ್ಥಾನಗಳಲ್ಲಿ ಮೂರು ಮಹಿಳೆಯರಿಗೆ ನಿಗದಿಗೊಳಿಸಲಾಗಿತ್ತು. ಸಾಮಾನ್ಯ ವರ್ಗದ ಸ್ಥಾನಗಳಲ್ಲಿ ನಾಲ್ಕು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿತ್ತು.

ಕೊಪ್ಪಳ ಜಿಲ್ಲಾ ಪಂಚಾಯತಿಯು ತಾಲೂಕವಾರು ಕ್ಷೇತ್ರಗಳನ್ನು ಈ ಮುಂದಿನಂತೆ ವಿಂಗಡಿಸಲಾಗಿದೆ. ಕೊಪ್ಪಳ ತಾಲೂಕಿನ ಜಿಲ್ಲಾ ಪಂಚಾಯತಿಯ ಕ್ಷೇತ್ರಗಳು ಹೀಗಿವೆ. ಅಳವಂಡಿ, ಹಿರೇ ಸಿಂದೋಗಿ, ಲೇಬಗೇರಿ, ಇರಕಲಗಡ, ಬಂಡಿ ಹರ್ಲಾಪುರ, ಹಿಟ್ನಾಳ ಮತ್ತು ಗಿಣಿಗೇರ. ಗಂಗಾವತಿ ತಾಲೂಕಿನ ಜಿಲ್ಲಾ ಪಂಚಾಯತ್ ಕ್ಷೇತ್ರಗಳು ಆನೆಗೊಂದಿ, ಮರಳಿ, ಸಿದ್ದಾಪೂರ, ಕಾರಟಗಿ, ಹೇರೂರು, ಕನಕಗಿರಿ, ಹುಲಿಹೈದರ ಮತ್ತು ನವಲಿ. ಕುಷ್ಟಗಿ ತಾಲೂಕಿನ ಜಿಲ್ಲಾ

ಪಂಚಾಯತ್ ಕ್ಷೇತ್ರಗಳು ಹನುಮನಾಳ, ಹನುಮಸಾಗರ, ಚಳಿಗೇರ, ಕೊರಡಕೇರ, ಹಿರೇಪನ್ನಾಪುರ ಮತ್ತು ತಾವರಗೇರಿ ಹಾಗೂ ಯಲಬುರ್ಗಾ ತಾಲೂಕಿನ ಜಿಲ್ಲಾ ಪಂಚಾಯತಿ ಕ್ಷೇತ್ರಗಳು ಹಿರೇವಂಕಲಕುಂಟ, ಚಿಕ್ಕ ಮ್ಯಾಗೇರಿ, ಮಂಗಳೂರು, ತಳಕಲ್, ಕುಕನೂರು ಮತ್ತು ಮುಧೋಳ.

೪.೨ ತಾಲೂಕ ಪಂಚಾಯತ್ :

ಕೊಪ್ಪಳ ಜಿಲ್ಲೆಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಮುಂದುವರೆದ ತಾಲೂಕು ಪ್ರದೇಶವೆಂದರೆ ಗಂಗಾವತಿ ತಾಲೂಕು. ಗಂಗಾವತಿ ತಾಲೂಕ ಬಹುಪಾಲು ಪ್ರದೇಶದಲ್ಲಿ ತುಂಗಭದ್ರಾ ಜಲಾಶಯದ ಎಡದಂಡೆಯ ಕಾಲುವೆಯ ನೀರನ್ನು ಬಳಸಿ ಕೃಷಿ ಮಾಡಲಾಗುತ್ತಿದೆ. ಉತ್ತಮವಾದ ಮಣ್ಣು ಮತ್ತು ನೀರಿನಿಂದಾಗಿ ಸಮೃದ್ಧವಾದ ಬೆಳೆಯನ್ನು ಈ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಇದರಿಂದ ಆರ್ಥಿಕವಾಗಿ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಕೊಪ್ಪಳ ಲೋಕಸಭೆ ಸ್ಥಾನಕ್ಕೆ ಗಂಗಾವತಿ ನಾಗರಿಕರು ಅತೀ ಹೆಚ್ಚು ಬಾರಿ ಆಯ್ಕೆಯಾಗಿರುವುದರಿಂದ ಗಂಗಾವತಿ ತಾಲೂಕ ರಾಜಕೀಯವಾಗಿ ವೈಶಿಷ್ಟ್ಯತೆಯನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಗಂಗಾವತಿ ತಾಲೂಕಿನ ವಿಧಾನಸಭಾ ಕ್ಷೇತ್ರಗಳ ಸ್ಥಾನಗಳನ್ನು ಗಮನಿಸಿದರು ಸಹ ರಾಜ್ಯ ರಾಜಕಾರಣದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಆದರೆ ಈ ಕ್ಷೇತ್ರದ ಹಲವಾರು ವಿಧಾನ ಸಭೆಯ ಸದಸ್ಯರುಗಳು ರಾಜ್ಯ ಸರ್ಕಾರದ ಸಚಿವರಾಗಿರುವುದು ಕಂಡುಬರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗೆ ಪ್ರಪ್ರಥಮವಾಗಿ ೧೯೯೩ ರ ಹೊಸ ಕಾಯ್ದೆ ಅನ್ವಯ ತಾಲೂಕ ಪಂಚಾಯತ್ ಸ್ಥಾನಗಳು ಮತ್ತು ಆಯಾ ಪಕ್ಷಗಳ ಸದಸ್ಯರ ಸಂಖ್ಯೆಯನ್ನು ಈ ಕೆಳಗಿನಂತೆ ನೋಡಬಹುದು.

"೧೯೯೩ ರಲ್ಲಿ ತಾಲೂಕು ಪಂಚಾಯತ್ ವಿವಿಧ ಪಕ್ಷಗಳು ಗೆದ್ದ ಸ್ಥಾನಗಳು

ಕ್ರ ಸಂ.	ಜಿಲ್ಲೆ	ಒಟ್ಟು ಸ್ಥಾನಗಳು	ಜನತಾ ದಳ	ಕಾಂಗ್ರೆಸ್	ಬಿಜೆಪಿ	ಕೆಸಿಪಿ	ರೈತ ಸಂಘ	ಇತರ ಪಕ್ಷಗಳು	ಪಕ್ಷೇತರರು
೧	ಬೆಂಗಳೂರು (ನ)	೬೯	೩೭	೧೯	೧೨	–	–	–	೧
೨	ಬೆಂಗಳೂರು (ಗ್ರಾ)	೧೪೩	೧೧೫	೧೫	೧೧	–	–	–	೨
೩	ಕೋಲಾರ	೧೮೬	೧೧೨	೬೯	–	–	–	೨ ಸಿ.ಪಿ.ಎಂ.	೨
೪	ಚಿತ್ರದುರ್ಗ	೧೭೨	೮೧	೫೬	೧೮	೬	–	–	೧೧
೫	ತುಮಕೂರು	೨೦೩	೧೦೨	೧೬	೧೫	೫	–	–	೧೫
೬	ಶಿವಮೊಗ್ಗ	೧೪೮	೫೬	೩೮	೨೬	೧೪	೬	–	೫

೭	ದಕ್ಷಿಣ ಕನ್ನಡ	೨೦೬	೬೧	೬೦	೭೯	೩	–	೧ ಸಿ.ಪಿ.ಎಂ.	೨
೮	ಚಿಕ್ಕಮಂಗಳೂರು	೧೦೫	೭೭	೧೭	೨	–	–	೨ ಸಿ.ಪಿ.ಎಂ.	೭
೯	ಕೊಡಗು	೪೮	೨೬	೪	೧೮	–	–	–	–
೧೦	ಹಾಸನ	೧೪೩	೧೨೨	೧೫	೨	–	–	–	೭
೧೧	ಮಂಡ್ಯ	೧೪೭	೮೫	೪೦	೩	–	೧೨	–	೭
೧೨	ಮೈಸೂರು	೨೪೩	೧೨೯	೭೭	೭	೩	–	–	೨೭
೧೩	ಬಿಜಾಪುರ	೨೨೬	೧೫೪	೫೭	೧೦	–	–	–	೫
೧೪	ಬೆಳಗಾವಿ	೨೮೭	೧೭೨	೬೮	–	೧೧	–	–	೪೬
೧೫	ಉತ್ತರ ಕನ್ನಡ	೧೨೩	೧೦೪	೯	೧೦	–	–	–	–
೧೬	ಧಾರವಾಡ	೨೪೮	೧೬೬	೬೩	೯	–	೫	–	೫
೧೭	ಬಳ್ಳಾರಿ	೧೩೭	೮೨	೪೮	೧	೨	–	–	೪
೧೮	ಬೀದರ್	೧೦೭	೫೭	೩೨	೧೨	–	–	–	೬
೧೯	ಗುಲ್ಬರ್ಗಾ	೨೦೪	೧೦೧	೫೯	೪	೩೦	–	೪ ಸಿ.ಪಿ.ಎಂ.	೬
೨೦	ರಾಯಚುರು	೧೯೫	೧೦೯	೭೫	೧	–	೩	೧ ಸಿ.ಪಿ.ಎಂ.	೬
	ಒಟ್ಟು	೩೩೪೦	೧೯೫೦	೮೮೭	೨೪೦	೬೪	೨೬	೧೧	೧೬೧

ಗಂಗಾವತಿ ತಾಲೂಕು ಪಂಚಾಯತಿ ೩೨ ಕ್ಷೇತ್ರಗಳನ್ನು ಹೊಂದಿದೆ. ಆ ಕ್ಷೇತ್ರಗಳೆಂದರೆ, ವಡ್ಡರಹಟ್ಟಿ, ಕರಡೋಣಾ, ಹೊಸಕೇರಾ, ಆನೆಗೊಂದಿ, ಮಲ್ಲಾಪುರ, ಚಿಕ್ಕಬೇಣಕಲ್, ಜಂಗಮರ ಕಲ್ಗುಡಿ, ಡಣಾಪುರ, ಮುಸ್ಟೂರು, ಹುಳೇನೂರು, ಬೆನ್ನೂರು, ಯರಡೋಣಾ, ಸಿದ್ದಾಪುರ, ಬರಗೂರು, ಶ್ರೀರಾಮನಗರ, ಹಣವಾಳ, ಹೇರೂರು, ಬಸಾಪಟ್ಟಣ, ವೆಂಕಟಗಿರಿ, ಚಿಕ್ಕಮಾದಿನಾಳ, ಕನಕಗಿರಿ (೧), ಕನಕಗಿರಿ (೨), ಸುಳೇಕಲ್, ಚಿಕ್ಕಡಂಕನಕಲ್, ಚಳ್ಳುರು ಮರ್ಲಾನಹಳ್ಳಿ, ಕಾರಟಗಿ–೧, ಕಾರಟಗಿ–೨, ನವಲಿ, ಬೇವಿನಾಳ, ಹುಲಿಹೈದರ, ಗೌರಿಪುರ. ಗಂಗಾವತಿ ತಾಲೂಕಿನ ೩೨ ತಾಲೂಕ ಪಂಚಾಯತಿ ಕ್ಷೇತ್ರಗಳಲ್ಲಿ ೫ ಸ್ಥಾನಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. ಈ ೫ ಪರಿಶಿಷ್ಟ ಪಂಗಡದ ಮೀಸಲು ಸ್ಥಾನಗಳಲ್ಲಿ ೨ ಸ್ಥಾನಗಳನ್ನು ಮಹಿಳೆಗೆ ಮೀಸಲಿಡಲಾಗಿದೆ. ಇನ್ನುಳಿದಂತೆ ಪರಿಶಿಷ್ಟ ಜಾತಿಯ ೬ ಸ್ಥಾನಗಳಲ್ಲಿ ೨ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಹಿಂದುಳಿದ ವರ್ಗದ ೧೧ ಸ್ಥಾನಗಳಲ್ಲಿ ೩ ಜನ ಮಹಿಳೆಯರಿಗೆ ಮೀಸಲಿರಿಸಲಾಗಿದೆ. ಈ ಮೀಸಲಾತಿ ಪ್ರಕ್ರಿಯೆಯನ್ನು ಆಯಾ ತಾಲೂಕಿನ

ಜನಸಂಖ್ಯೆ ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆನ್ನು ಆಧರಿಸಿ ಮೀಸಲಾತಿಯನ್ನು ಕಲ್ಪಿಸಲಾಗುತ್ತದೆ.

೪.೩ ಗ್ರಾಮ ಪಂಚಾಯತ್ :

ನಮ್ಮ ದೇಶವು ೬ ಲಕ್ಷ ಹಳ್ಳಿಗಳಿಂದ ಕೂಡಿದ ಗ್ರಾಮ ಭಾರತವಾಗಿದೆ. ಭಾರತದಲ್ಲಿ ಗ್ರಾಮಗಳು ವೇದಗಳ ಕಾಲದಿಂದಲೂ ಇರುವುದರ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಕುಟುಂಬವು ಚಿಕ್ಕ ಘಟಕವಾಗಿತ್ತು. ಹಲವಾರು ಕುಟುಂಬಗಳು ಸೇರಿ ಒಂದು ಗ್ರಾಮವೆಂದು ಕರೆಯಲಾಗುತ್ತಿತ್ತು. ಆ ಗ್ರಾಮದಲ್ಲಿ ನ್ಯಾಯ ನಿರ್ಣಯ ಮಾಡುವುದರ ಸಲುವಾಗಿ ಒಬ್ಬ ಮುಖ್ಯಸ್ಥನನ್ನು ನೇಮಿಸಲಾಗುತ್ತಿತ್ತು. ಆ ಮುಖ್ಯಸ್ಥನನ್ನು ಗ್ರಾಮೀಣ ಗ್ರಾಮಪ್ಪ, ಗಾವುಂಡ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಕೆಲವೊಂದು ಸಂದರ್ಭದಲ್ಲಿ ಒಬ್ಬ ಮುಖ್ಯಸ್ಥನು ಹತ್ತಾರು ಗ್ರಾಮಗಳ ನಾಯಕನಾಗಿ ಗುರುತಿಸಿಕೊಂಡಿದ್ದುಂಟು. ಪ್ರಾಚೀನ ಕಾಲದಲ್ಲಿ ಗ್ರಾಮಗಳು ಮತ್ತು ಗ್ರಾಮಗಳ ಆಡಳಿತ ಈ ಮೇಲಿನ ವ್ಯವಸ್ಥೆಯನ್ನು ಹೊಂದಿತ್ತು ಎನ್ನುವುದು ತಿಳಿದು ಬರುತ್ತದೆ. ಮುಸ್ಲಿಂರ ಆಳ್ವಿಕೆಯ ಅವಧಿಯಲ್ಲಿ ಗ್ರಾಮಗಳ ಕರವಸೂಲಿ ಸಲುವಾಗಿ ಮುಸ್ಲಿಂ ದೊರೆಗಳು ಅಧಿಕಾರಿಗಳನ್ನು ನೇಮಿಸಿದ್ದರು. ಈ ಅಧಿಕಾರಿಗಳು ಆ ಗ್ರಾಮಗಳ ಒಡೆಯರಂತೆ ವರ್ತಿಸತೊಡಗಿದರು. ಹೀಗಾಗಿ ಮಧ್ಯಕಾಲೀನ ಭಾರತೀಯ ಸಮಾಜದ ಗ್ರಾಮಗಳು ನಿರ್ಲಕ್ಷ್ಯಗೊಳ್ಳಲ್ಪಟ್ಟವು. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿಯೂ ಸಹ ಗ್ರಾಮಗಳ ಆರ್ಥಿಕ ದುಸ್ಥಿತಿಗೆ ಕಾರಣವಾಯಿತು. ಗ್ರಾಮ ಪಂಚಾಯತಿಯ ಅಧಿಕಾರಗಳನ್ನು ಮೊಟಕುಗೊಳಿಸಿ ಏಕರೂಪದ ಕಾಯ್ದೆಯನ್ನು ಜಾರಿಗೆ ತಂದಿತು. ಇದರಿಂದಾಗಿ ಗ್ರಾಮ ಪಂಚಾಯತಿಗಳು ಸಂಪೂರ್ಣವಾಗಿ ವಿನಾಶದೆಡೆಗೆ ಮುಖ ಮಾಡಿದವು. ಇದರ ಅವಧಿಯಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಗ್ರಾಮೀಣ ಪ್ರದೇಶದ ಜನರ ಕುಲಕಸುಬುಗಳು ವಿನಾಶಹೊಂದುವುದರ ಮೂಲಕ ಗ್ರಾಮದ ಚಿತ್ರಣವನ್ನೇ ಬದಲಾಯಿಸಿ ಬಿಟ್ಟಿತ್ತು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಗ್ರಾಮಗಳಿಗೆ ಮರುಜನ್ಮ ಸಿಕ್ಕಂತಾಯಿತಾದರೂ ಗ್ರಾಮೀಣ ಪ್ರದೇಶದ ಗುಡಿಕೈಗಾರಿಕೆಗಳು ಮೇಲೇಳಲಿಲ್ಲ.

ಪ್ರಾಚೀನ ಕಾಲದಿಂದಲೂ ಗ್ರಾಮ ಪಂಚಾಯತಿಗಳು ತಮ್ಮದೇ ಆದ ಮತ್ತು ವಿಶಿಷ್ಟವಾದ ರಚನೆಯನ್ನು ಹೊಂದಿದ್ದವು. "ಗ್ರಾಮಗಳಲ್ಲಿ ಪಂಚಾಯತ್ ಆಡಳಿತ ವ್ಯವಸ್ಥೆ ವಸಾಹತುದಾರನಾಗಿದ್ದು ದೋಬಾ ರಾಜ್ಯದ ಪಿತ್ರು ರಾಜನು ಮೊಟ್ಟ ಮೊದಲಿಗೆ ಅಸ್ತಿತ್ವದಲ್ಲಿ ತಂದಿದ್ದನೆಂದು ತಿಳಿದು ಬರುತ್ತದೆ."[೨] ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ ಮುಂತಾದ ಪ್ರಾಚೀನ ಕೃತಿಗಳಲ್ಲಿ ಆ ಕಾಲದ ಗ್ರಾಮ ಪಂಚಾಯತಿಯ ರಚನೆ, ಆಡಳಿತ ವೈಖರಿ ಹೇಗಿತ್ತು ಎಂಬುದು ತಿಳುದುಬರುತ್ತದೆ. ಪ್ರಾಚೀನ ಕಾಲದಿಂದ ಇಂದಿನವರೆಗಿನ ಗ್ರಾಮ ಪಂಚಾಯತಿಯ ಅಧಿಕಾರದಲ್ಲಿ ಗಮನಾರ್ಹ ಬದಲಾವಣೆಗಳು ಆಗುತ್ತಾ ಬಂದಿದೆ. ಪ್ರಸ್ತುತ ಗ್ರಾಮ ಪಂಚಾಯತಿಗಳು

ಸಂವಿಧಾನಾತ್ಮಕ ಸರ್ವತೋಮುಖಿ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ವಂಶಪಾರಂಪರ್ಯವಾದ ಆಡಳಿತ ವ್ಯವಸ್ಥೆಯನ್ನು ಮೊಟಕುಗೊಳಿಸಿ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿವೆ.

ಗಂಗಾವತಿ ತಾಲೂಕಿನಲ್ಲಿ ೧೫೮ ಗ್ರಾಮಗಳಿವೆ. ಈ ಗ್ರಾಮಗಳಿಗೆ ಒಟ್ಟು ೩೮ ಗ್ರಾಮ ಪಂಚಾಯತಿಗಳಿರುವುದು ಕಂಡುಬರುತ್ತದೆ. ೨೦೦೫-೦೬ ನೇ ಸಾಲಿಗೆ ಆಯ್ಕೆಯಾದ ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿ ಸದಸ್ಯರ ಮೀಸಲಾತಿ ಮಾಹಿತಿಯನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ. ಕಾರಟಗಿ ಗ್ರಾಮ ಪಂಚಾಯತಿಯು ಗಂಗಾವತಿ ತಾಲೂಕಿನ ಅತಿ ದೊಡ್ಡ ಗ್ರಾಮ ಪಂಚಾಯತಿಯಾಗಿದೆ. ಅಂದರೆ ಪಂಚಾಯತಿ ಸದಸ್ಯರ ಸಂಖ್ಯೆ ೬೨, ಕನಕಗಿರಿಯು ಗಂಗಾವತಿ ತಾಲೂಕಿನ ಎರಡನೇ ದೊಡ್ಡ ಗ್ರಾಮ ಪಂಚಾಯತಿಯಾಗಿದೆ. ಈ ಪಂಚಾಯತಿಯು ೩೭ ಸದಸ್ಯರನ್ನು ಒಳಗೊಂಡಿದೆ. ಗಂಗಾವತಿ ತಾಲೂಕಿನ ಒಟ್ಟು ೩೮ ಗ್ರಾಮ ಪಂಚಾಯತಿಗಳಿಂದ ೮೦೨ ಸದಸ್ಯರಿದ್ದಾರೆ. ಇದರಲ್ಲಿ ೪೯೫ ಪುರುಷ ಮತ್ತು ೩೦೭ ಮಹಿಳಾ ಸದಸ್ಯರಿದ್ದಾರೆ. ಒಟ್ಟು ಸದಸ್ಯರಲ್ಲಿ ಪರಿಶಿಷ್ಟ ಜಾತಿಯ ೮೩ ಪುರುಷ ಮತ್ತು ೫೭ ಮಹಿಳಾ ಸದಸ್ಯರಿದ್ದಾರೆ. ಒಟ್ಟು ಸದಸ್ಯರಲ್ಲಿ ೧೩೧ ಪರಿಶಿಷ್ಟ ಪಂಗಡದವರಿದ್ದಾರೆ. ಇದರಲ್ಲಿ ೭೩ ಪುರುಷ ಮತ್ತು ೫೪ ಮಹಿಳೆಯರಿದ್ದಾರೆ. ಒಟ್ಟು ಸದಸ್ಯರಲ್ಲಿ ಇತರ ಹಿಂದುಳಿದ ವರ್ಗದಿಂದ ೨೬೭ ಸದಸ್ಯರಿದ್ದಾರೆ. ಇದರಲ್ಲಿ ೧೬೯ ಪುರುಷ ಮತ್ತು ೯೮ ಮಹಿಳಾ ಸದಸ್ಯರಿದ್ದಾರೆ. ಸಾಮಾನ್ಯ ವರ್ಗದಿಂದ ೨೬೪ ಸದಸ್ಯರಿದ್ದಾರೆ. ಇದರಲ್ಲಿ ೧೬೬ ಪುರುಷ ಮತ್ತು ೯೮ ಮಹಿಳಾ ಸದಸ್ಯರಿದ್ದಾರೆ.

ಗಂಗಾವತಿ ತಾಲೂಕಿನಲ್ಲಿ ಬರುವ ಗ್ರಾಮ ಪಂಚಾಯತಿಗಳೆಂದರೆ, ಆನೆಗೊಂದಿ, ಮಲ್ಲಾಪುರ, ಸಂಗಾಪುರ, ಚಿಕ್ಕಜಂತಕಲ್, ಢಣಾಪುರ, ಹಣವಾಳ, ಹೊಸಕೇರ, ಮರಳಿ, ಶ್ರೀರಾಮನಗರ, ಗುಂಡೂರು, ಹೇರೂರು, ಕೆಸರಹಟ್ಟಿ, ವಡ್ಡರಹಟ್ಟಿ, ಬಸಾಪಟ್ಟಣ, ವೆಂಕಟಗಿರಿ, ಉಳೇನೂರು, ಚಿಕ್ಕಬೆಣಕಲ್, ಜೆನ್ನೂರು, ಬೂದಗುಂಪ, ಯರಡೋಣ, ಮರ್ಲಾನಹಳ್ಳಿ, ಉಳ್ಳಿಹಾಳ, ಕಾರಟಗಿ, ಬೇವಿನಾಳ, ಚಳ್ಳೂರು, ಚಿಕ್ಕಡಂಕನಕಲ್, ನವಲಿ, ಕರಡೋಣ, ಹಿರೇಖೇಡ, ಹುಲಿಹೈದರ, ಗೌರಿಪುರ, ಚಿಕ್ಕಮಾದಿನಾಳ, ಸುಳೇಕಲ್, ಆಗೋಲಿ, ಕನಕಗಿರಿ, ಮುಸಲಾಪುರ, ಮುಷ್ಟೂರು ಮತ್ತು ಸಿದ್ದಾಪುರ.

ತಾಲೂಕಿನಲ್ಲಿ ಹಲವಾರು ಸಮುದಾಯಗಳು ಕಂಡುಬರುತ್ತವೆ. ಈ ಸಮುದಾಯಗಳು ಗ್ರಾಮೀಣ ಮತ್ತು ನಗರಗಳಲ್ಲಿ ಹಂಚಿಹೋಗಿವೆ. ನಗರ ಪ್ರದೇಶದಲ್ಲಿನ ಸಮುದಾಯಗಳು ವ್ಯಾಪಾರ, ವ್ಯವಹಾರ, ಕೂಲಿ ಇನ್ನುಳಿದಂತೆ ಹಲವಾರು ವೃತ್ತಿಗಳಲ್ಲಿ ತೊಡಗಿಕೊಂಡಿವೆ. ಈ ಸಮುದಾಯಗಳು ನಾಗರೀಕತೆಯ ಪ್ರಭಾವಕ್ಕೆ ಒಳಗಾಗಿವೆ. ಆದರೆ ಗ್ರಾಮೀಣ ಪ್ರದೇಶದಲ್ಲಿನ ಹೆಚ್ಚಿನ ಸಮುದಾಯಗಳು ಕೃಷಿಯನ್ನು ಮಾತ್ರ ಅವಲಂಬಿಸಿ ಜೀವನವನ್ನು ನಿರ್ವಹಿಸುತ್ತಿವೆ.

ಗ್ರಾಮೀಣ ಪ್ರದೇಶದ ಜನರು ಅನಕ್ಷರತೆ ಮತ್ತು ಬಡತನದಿಂದ ಬಳಲುತ್ತಿದ್ದಾರೆ. ನಿರುದ್ಯೋಗ ಸರ್ವೇಸಾಮಾನ್ಯವಾಗಿದೆ. ಈ ಪ್ರಮುಖವಾದ ಸಮಸ್ಯೆಗಳಿಂದ ಹೊರಬರಲು ಅವರಿಗೆ ಇನ್ನೂ ಸಾಧ್ಯವಾಗಿಲ್ಲ. ಕೃಷಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಅನುಸರಿಸುವ ಮಾರ್ಗವೂ ಸಹ ಇವರಿಗೆ ತಿಳಿದಿಲ್ಲ. ಆಧುನಿಕ ಸ್ವತಂತ್ರ್ಯ ಭಾರತದಲ್ಲಿ ಎಲ್ಲರಿಗೂ ಶಿಕ್ಷಣ, ಕಡ್ಡಾಯ ಶಿಕ್ಷಣ, ಸಾಕ್ಷರತಾ ಆಂದೋಲನದಂತಹ ಶಿಕ್ಷಣ ಕಾರ್ಯಕ್ರಮಗಳಿಂದಾಗಿ ಗ್ರಾಮೀಣ ವಾಸಿಗಳೂ ಸಹ ಶಿಕ್ಷಿತರಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಜಾತಿ ವ್ಯವಸ್ಥೆಯಲ್ಲಿ ಮೇಲು-ಕೀಳು ಸಹ ಅಷ್ಟೊಂದು ಕಂಡುಬರುತ್ತಿಲ್ಲವಾದರೂ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಪರಿಸರ ನಿರ್ಮಾಣ ಅಗತ್ಯವಿದೆ.

ಈ ಅಧ್ಯಯನದಲ್ಲಿ ಮೊದಲೇ ತಿಳಿಸಿದಂತೆ ಗ್ರಾಮೀಣ ವಾಸಿಗಳು ಅನಕ್ಷರಸ್ಥರಾಗಿದ್ದಾರೆ. ಪ್ರಜಾಪ್ರಭುತ್ವದ ಅಡಿಯಲ್ಲಿ ಮೀಸಲಾತಿಯ ಮೂಲಕ ಗ್ರಾಮ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗುತ್ತಿರುವ ಹಿಂದುಳಿದ ವರ್ಗದವರು ಅನಕ್ಷರರಾಗಿದ್ದಾರೆ. ಈ ಸದಸ್ಯರಲ್ಲಿ ಅನಕ್ಷರಸ್ಥರೇ ಹೆಚ್ಚಾಗಿದ್ದಾರೆ. ಪತ್ರ ವ್ಯವಹಾರವನ್ನು ಅವರ ಸಂಬಂಧಿಕರು ಇಲ್ಲವೇ ಸಾಮಾನ್ಯವಾಗಿ ಮೇಲ್ಜಾತಿಯ ಅಕ್ಷರಸ್ಥರ ಮೂಲಕ ವ್ಯವಹರಿಸುತ್ತಿರುವುದು ಕಂಡುಬರುತ್ತದೆ. ಹಿಂದುಳಿದ ವರ್ಗದ ವಯಸ್ಕರು ಮೀಸಲಾತಿಯ ಮುಖಾಂತರ ಆಯ್ಕೆಯಾಗಿದ್ದಾರೆ. ಈ ಸದಸ್ಯರಲ್ಲಿ ಅಧಿಕಾರ ಮತ್ತು ಅವರ ಕರ್ತವ್ಯಗಳ ತಿಳುವಳಿಕೆ ಇರುವುದಿಲ್ಲ. ಇವರ ಅಧಿಕಾರ ಮತ್ತು ಜವಾಬ್ದಾರಿಯನ್ನು ಇವರ ಮಕ್ಕಳು, ಸಂಬಂಧಿಕರು ಅಥವಾ ಇತರರು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. "ಹಿರೇಖೇಡ ಗ್ರಾಮ ಪಂಚಾಯತಿಯ ಕಛೇರಿಯ ಮುಂದೆ ಕಳೆದ ೧೦ ತಿಂಗಳಿನಿಂದಲೂ ಅಧ್ಯಕ್ಷೆ ಗಂಗಮ್ಮ ಹರಿಜನ ಸಾಮಾನ್ಯ ಸಭೆ ಕರೆದಿಲ್ಲ. ಸರ್ಕಾರದಿಂದ ಮಂಜೂರಾದ ಆಶ್ರಯ ಮನೆಗೆ ತಲಾ ಒಂದು ಚೆಕ್‌ಗೆ ಫಲಾನುಭವಿಗಳಿಂದ ೫೦೦ ರೂ. ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿ ಗ್ರಾಮ ಪಂಚಾಯತಿ ಸದಸ್ಯರು ಪ್ರತಿಭಟನೆ ಮಾಡುತ್ತಿದ್ದರು ಎನ್ನಲಾಗುತ್ತಿದೆ. ಈ ಸಮಯದಲ್ಲಿ ಅಧ್ಯಕ್ಷೆಯ ಪತಿ ಮರಿಯಪ್ಪ ಮತ್ತು ಮಗ ನಾಗಪ್ಪ ಎಂಬುವವರು ಗ್ರಾಮಕ್ಕೆ ಬಂದು ಪ್ರತಿಭಟನೆ ಮಾಡುವವರು ಗಂಗಾವತಿಯಲ್ಲಿ ಸಿಗಲಿ ಒಬ್ಬೊಬ್ಬರನ್ನು ಗುಂಡಿಕ್ಕಿ ಕೊಲ್ಲುತ್ತೇನೆ."[೬] ಎಂದು ಬೆದರಿಕೆ ಹಾಕುವುದಲ್ಲದೆ ನಾವು ಎಸ್.ಸಿ. ಮಂದಿ ಗಂಗಾವತಿಯಲ್ಲಿ ನಮ್ಮ ತಾಕತ್ತು ಏನೆಂಬುವುದು ತೋರಿಸುತ್ತೇನೆ ಎಂದು ಹೇಳುತ್ತಾ ತಂದಿದ್ದ ದ್ವಿಚಕ್ರ ವಾಹನದ ಸೈಲೆನ್ಸರ್ ತೆಗೆದು ಸುತ್ತಾಡಿದರು ಎಂದು ತಿಳಿದುಬಂದಿದೆ. "ಅಲ್ಲದೆ ೨೦೦೬-೦೭ ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗೆ ಒಟ್ಟು ೧೬೦ ಆಶ್ರಯ ಮನೆಗಳು ಮಂಜೂರಾಗಿವೆ. ಅಧ್ಯಕ್ಷರ ಪತಿ ಮರಿಯಪ್ಪ ೫೦೦ ರೂಪಾಯಿ ಲಂಚ ನೀಡದಿದ್ದರೆ ಚೆಕ್ ಕೊಡುವುದಿಲ್ಲ ಏನು ಮಾಡುತ್ತೀರಿ ಮಾಡಿಕೊಳ್ಳಿ ಎಂದು ಬೆದರಿಕೆ ಹಾಕುತ್ತಿದ್ದಾರೆ."[೭] ಎಂದು

ಗ್ರಾಮ ಪಂಚಾಯತಿಯ ವಿವಿಧ ಸದಸ್ಯರು ಆಪಾದಿಸಿದ್ದಾರೆ. ಹೀಗೆ ಹಲವಾರು ರೀತಿಯ ಪ್ರಕರಣಗಳು ಕಂಡುಬರುತ್ತವೆ.

ಗ್ರಾಮ ಪಂಚಾಯತಿ ಪ್ರಜಾರಾಜ್ಯದ ಮುಖ್ಯ ಸೋಪಾನವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಗ್ರಾಮ ಪಂಚಾಯತಿಗಳು ನಿರ್ವಹಿಸುತ್ತಿರುವ ಕಾರ್ಯಗಳು ಸಫಲತೆಯನ್ನು ಪಡೆಯುತ್ತಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಗ್ರಾಮ ಪಂಚಾಯತಿಯ ಮೂಲಕ ಕಾರ್ಯಗಳನ್ನು ಸಾಧಿಸಲಾಗುತ್ತಿಲ್ಲ. ಹಿಂದಿನ ದಿನದಲ್ಲಿ ರಚಿತವಾಗಿರುವ ಈ ಗ್ರಾಮ ಪಂಚಾಯತಿಗಳು ಹಲವಾರು ದೋಷಗಳಿಂದ ಕೂಡಿವೆ. ಈ ಗ್ರಾಮ ಪಂಚಾಯತಿಯ ಬಲವರ್ಧನಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವು ಗ್ರಾಮ ಪಂಚಾಯತಿಗೆ ಪುಷ್ಟಿಯನ್ನು ಕೊಡುವ ಉದ್ದೇಶದಿಂದ ಸಮಿತಿಯನ್ನು ನೇಮಕ ಮಾಡುವ ವಿಶ್ವಾಸವನ್ನು ವ್ಯಕ್ತಪಡಿಸಿದೆ. ಈ ಸಮಿತಿಯಲ್ಲಿ "ಶಾಲಾ ಮುಖ್ಯಸ್ಥರು, ಗ್ರಾಮದ ಬಗ್ಗೆ ಚಿಂತನೆಯುಳ್ಳ ತಾಂತ್ರಿಕ ಜ್ಞಾನವುಳ್ಳ ನಿವೃತ್ತ ಅಧಿಕಾರಿಗಳು, ಎಲ್ಲಾ ರಾಜಕೀಯ ಪಕ್ಷಗಳ ಸ್ಥಾನೀಯ ಸಮಿತಿಯ ಅಧ್ಯಕ್ಷರು ಹಾಗೂ ಯುವಕ ಯುವತಿ ಸಂಘಗಳ ಪ್ರಮುಖ ಪದಾಧಿಕಾರಿಗಳು ಸೇರಿದಂತೆ ಒಟ್ಟು ೧೦ ರಿಂದ ೧೫ ಜನರನ್ನೊಳಗೊಂಡಂತೆ ಈ ಸಮಿತಿ ರಚಿಸಲಾಗುವುದು ಮತ್ತು ಪ್ರತಿ ತಿಂಗಳಿಗೊಮ್ಮೆ ಈ ಸಮಿತಿ ಸಭೆ ಸೇರಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ಪರಿಶೀಲನೆ ನಡೆಸಲಿದೆ. ಇದರಿಂದ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಸಹಕಾರಿಯಾಗಲಿದೆ. ಅಲ್ಲದೆ ವಿವಿಧ ಯೋಜನೆಗಳಡಿ ಪದೇಪದೆ ಒಂದೇ ಕಾಮಗಾರಿಗೆ ದುಂದುವೆಚ್ಚ ಮಾಡುವುದನ್ನು ತಪ್ಪಿಸಬಹುದಾಗಿದೆ. ಅಲ್ಲದೆ ಬಿಡುಗಡೆಯಾದ ಅನುದಾನದಲ್ಲಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಕೂಲವಾಗಲಿದೆ."[೮] ಎನ್ನುವ ಅಭಿಪ್ರಾಯಗಲನ್ನು ಸರ್ಕಾರ ವ್ಯಕ್ತಪಡಿಸಿದೆ.

ಗ್ರಾಮ ಪಂಚಾಯತಿಗಳಿಗೆ ಸ್ಥಳೀಯ ವ್ಯಕ್ತಿಗಳೇ ಆಯ್ಕೆಯಾಗಿರುತ್ತಾರೆ. ರಾಜಕೀಯ ಪಕ್ಷಗಳು ಪ್ರತಿಷ್ಠೆಗಾಗಿ ಪ್ರತಿಯೊಂದು ಗ್ರಾಮದಲ್ಲೂ ಪಕ್ಷದ ಹಿಂಬಾಲಕರನ್ನು ಹೊಂದಿದೆ. ಇದರಿಂದಾಗಿ ಗ್ರಾಮ ಪಂಚಾಯತಿಯಲ್ಲಿ ರಾಜಕೀಯ ಪಕ್ಷಗಳು ಹಸ್ತಕ್ಷೇಪ ಮಾಡುವುದರಿಂದ, ಪಂಚಾಯತಿ ಸದಸ್ಯರ ಹಾಗೂ ಗ್ರಾಮದ ಜನರಲ್ಲಿ ವೈಮನಸ್ಸುಂಟಾಗಿ, ಸರಿಯಾದ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಇಲ್ಲಿ ಸಾಧ್ಯವಾಗುತ್ತಿಲ್ಲ. ಆದರೆ ಪಕ್ಷಗಳ ಪಾಲ್ಗೊಳ್ಳುವಿಕೆ ಇಲ್ಲದಿದ್ದರೆ ಸ್ಥಳೀಯ ವ್ಯಕ್ತಿಗಳು ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾದ ನಂತರ ಹಳೆಯ ವೈಮನಸ್ಸನ್ನೆಲ್ಲಾ ಮರೆತು ಗ್ರಾಮದ ಅಭಿವೃದ್ಧಿಗೆ ಶ್ರಮಿಸಬಹುದು. ಆದರೆ ಗ್ರಾಮ ಪಂಚಾಯತಿಯಿಂದ ಹಿಡಿದು ವಿವಿಧ ರಂಗಗಳಲ್ಲಿ ಪಕ್ಷದ ಶಾಸಕರು, ವರಿಷ್ಠರು, ಅಧ್ಯಕ್ಷರು ಹಸ್ತಕ್ಷೇಪ ಮಾಡುವುದು ಸರ್ವೇ ಸಾಮಾನ್ಯವಾದ ವಿಷಯವಾಗಿ ಬಿಟ್ಟಿದೆ. "ಗಂಗಾವತಿ ನಗರದ ಅಭಿವೃದ್ಧಿಗೆ ಶ್ರಮಿಸಬೇಕಾದ

ಶಾಸಕರು ವಿನಾಕಾರಣ ನಗರಸಭೆ ಆಡಳಿತದಲ್ಲಿ ಬಿ.ಜೆ.ಪಿ. ಸದಸ್ಯರ ಮೂಲಕ ಹಸ್ತಕ್ಷೇಪ ಮಾಡುತ್ತಿದ್ದಾರೆ."" ಎಂದು ನಗರಸಭೆಯ ಸದಸ್ಯರೊಬ್ಬರು ದೂರುತ್ತಾರೆ.

ಗ್ರಾಮ ಸಮುದಾಯದಲ್ಲಿ ವಂಶ ಪಾರಂಪರ್ಯವಾಗಿ ನಡೆದುಬಂದ ಆಡಳಿತವನ್ನು ಈ ವ್ಯವಸ್ಥೆ ಅಳಿಸಿಹಾಕಿದೆ. ಅನುವಂಶೀಯವಾದ ಆಡಳಿತಕ್ಕೆ ಸಂವಿಧಾನದಿಂದ ತೆರೆ ಬಿದ್ದಿದ್ದರೂ ಸಹ ಪಾಳೆಗರಿಕೆ ನಡೆಸಿಕೊಂಡು ಬಂದ ಕುಟುಂಬಗಳು ಇಂದಿಗೂ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ಗ್ರಾಮ ಪಂಚಾಯತಿಗೆ ಸದಸ್ಯರುಗಳು ನೇಮಕವಾಗುತಿರುವುದು ಕೆಲವೊಂದು ಗ್ರಾಮಗಳಲ್ಲಿ ನಾಮಕಾವಾಸ್ತೆ ಮಾತ್ರ, ಆದರೆ ಅಧಿಕಾರವನ್ನ ಬಳಸುವುದು ಮಾತ್ರ ಪಾಳೇಗಾರ ವರ್ಗದವರು. ಮುಂದುವರೆದ ಸಮುದಾಯದವರು ಕೆಳವರ್ಗದವರ ಏಳಿಗೆಯನ್ನು ಸಹಿಸುವುದಿಲ್ಲ. ಕೆಲವರ್ಗದವರು ರಾಜಕೀಯವಾಗಿ ಅಧಿಕಾರವನ್ನು ಹೊಂದಿದ್ದರೂ ಸಹ ಕೆಲವೊಂದು ಪ್ರದೇಶದಲ್ಲಿ ಮೇಲ್ವರ್ಗದವರ ಅಧೀನಕ್ಕೆ ತಲೆಬಾಗುತ್ತಿರುವುದು ಕಂಡುಬರುತ್ತದೆ. ಮುಂದುವರೆದ ಸಮುದಾಯದವರು ಇವರ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಅವರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಸಹ ಮಾಡುತ್ತಿದ್ದಾರೆ. ಕಾಲಗತಿಸಿದಂತೆ ಈ ವ್ಯವಸ್ಥೆಯಲ್ಲಿ ಗಣನೀಯ ಪರಿವರ್ತನೆಯಾಗಿ ತಮ್ಮ ಅಧಿಕಾರವನ್ನು ತಾವೇ ಬಳಸಿಕೊಳ್ಳುವುದಕ್ಕೆ ಕಾಯಬೇಕಾಗಿದೆ.

ಒಟ್ಟಾರೆಯಾಗಿ ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬ ಪ್ರಜೆಯು ಪ್ರಭುವಾಗಿ ಬಾಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ವ್ಯಕ್ತಿಯು ನಿಜ ಮಾನವನಾಗಿ ಬಾಳುವ ಸದಾವಕಾಶವನ್ನು ಸೃಷ್ಟಿಸಿದೆ. ತನ್ನ ಬೇಕು-ಬೇಡಗಳನ್ನು ತಾನೇ ಆಯ್ಕೆಮಾಡಿಕೊಳ್ಳುವ ಸ್ವಾತಂತ್ರವನ್ನು ನೀಡಲಾಗಿದೆ. ಒಟ್ಟಿನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ದೇಶದ ಆಡಳಿತದಲ್ಲಿ ಭದ್ರ ಬುನಾದಿ ಹಾಕುವುದಕ್ಕೆ ಮಹತ್ವದ ಪಾತ್ರ ವಹಿಸುತ್ತಿರುವುದು ಸತ್ಯ ಸಂಗತಿಯಾಗಿದೆ. ಈ ಪ್ರದೇಶದ ಬುಡಕಟ್ಟು ಪ್ರಜಾಪ್ರತಿನಿಧಿಗಳು ತಮ್ಮ ತನವನ್ನು ರೂಢಿಸಿಕೊಂಡು ತಮ್ಮ ಕರ್ತವ್ಯ, ಹಕ್ಕುಗಳು ಹಾಗೂ ಜವಾಬ್ದಾರಿಗಳನ್ನು ಅರಿತುಕೊಂಡು ಕಾರ್ಯನಿರ್ವಹಿಸಿದರೆ ಇವರು ರಾಜಕೀಯವಾಗಿ ಮುಂದುಬರಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು :

೧. ರಾಜಶೇಖರ ಹೆಚ್.ಎಮ್. **"ಭಾರತ ಸರ್ಕಾರ ಮತ್ತು ರಾಜಕೀಯ",** ೧೯೯೯, ಪುಟ ೧೦೫.

೨. ಶ್ರೀಧರ ಎ. **"ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು"** ೨೦೦೬, ಪುಟ ೨೦.

೩. ರಾಜಶೇಖರ ಹೆಚ್.ಎಮ್. **"ಭಾರತ ಸರ್ಕಾರ ಮತ್ತು ರಾಜಕೀಯ"** ೧೯೯೯, ಪುಟ ೩೨೪ ಮತ್ತು ೩೨೫.

೪. ಅದೆ, ಪುಟ ೩೨೨ ಮತ್ತು ೩೨೩.

೫. ಬಡಿಗೇರ ಜಿ.ಎಲ್. **"ಭಾರತದಲ್ಲಿನ ಗ್ರಾಮೀಣ ಅಭಿವೃದ್ಧಿ"** ೨೦೦೫, ಪುಟ ೨೫೦.

೬. **ಪ್ರಜಾವಾಣಿ,** ಮಂಗಳವಾರ, ಆಗಸ್ಟ್ ೧೯, ೨೦೦೮, ಪುಟ ೩.

೭. **ಪ್ರಜಾವಾಣಿ,** ಶನಿವಾರ, ಜುಲೈ ೫, ೨೦೦೮, ಪುಟ ೨.

೮. **ಪ್ರಜಾವಾಣಿ,** ಸೋಮವಾರ, ಆಗಸ್ಟ್ ೧೮, ೨೦೦೮, ಪುಟ ೪.

೯. **ಪ್ರಜಾವಾಣಿ,** ಶುಕ್ರವಾರ, ಆಗಸ್ಟ್ ೧೫, ೨೦೦೮, ಪುಟ ೨.

ಅಧ್ಯಾಯ ೫

೫. ಗಂಗಾವತಿ ತಾಲೂಕಿನ ಬುಡಕಟ್ಟುಗಳ ರಾಜಕೀಯ ವ್ಯವಸ್ಥೆ

೫.೧ ಬುಡಕಟ್ಟುಗಳ ರಾಜಕಾರಣ

೫.೨ ಬುಡಕಟ್ಟುಗಳು ಮತ್ತು ರಾಜಕೀಯ ಪಕ್ಷಗಳು

೫.೩ ಬುಡಕಟ್ಟು ಜನಪ್ರತಿನಿಧಿಗಳು ಮತ್ತು ಇತರೆ ಸಮುದಾಯಗಳ ಜನಪ್ರತಿನಿಧಿಗಳ ಸಂಬಂಧಗಳು

೫.೪ ಚುನಾವಣೆಯಲ್ಲಿ ಬುಡಕಟ್ಟುಗಳ ಪಾಲ್ಗೊಳ್ಳುವಿಕೆ

೫.೫ ಆಡಳಿತ ವ್ಯವಸ್ಥೆಯಲ್ಲಿ ಬುಡಕಟ್ಟು ಜನಪ್ರತಿನಿಧಿಗಳು

೫.೬ ಮೀಸಲಾತಿ

೫.೭ ಯೋಜನೆಗಳ ಅನುಷ್ಠಾನ ಮತ್ತು ಜನಪ್ರತಿನಿಧಿಗಳು

ಪೀಠಿಕೆ :

ಪ್ರತಿಯೊಂದು ದೇಶವು ತನ್ನದೇ ಆದ ಮೂಲ ನಿವಾಸಿಗಳನ್ನು ಹೊಂದಿರುತ್ತದೆ. ಆಯಾ ದೇಶದ ಆಚಾರ-ವಿಚಾರ, ರಿತಿ-ನೀತಿ, ಸಂಪ್ರದಾಯ, ಸಂಸ್ಕೃತಿ ಮತ್ತು ನಾಗರಿಕತೆಗಳು ಮೂಲ ನಿವಾಸಿಗಳ ಹಿನ್ನೆಲೆಯನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಬುಡಕಟ್ಟು ಸಮುದಾಯಗಳು ತಮ್ಮದೇ ಆದ ವಿಶಿಷ್ಟ ಪರಂಪರೆಯನ್ನು ಹೊಂದಿರುತ್ತವೆ. ಭಾರತೀಯ ಸಮಾಜದಲ್ಲಿ ವಿಶಿಷ್ಟವಾದ ನೂರಾರು ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ನಾಗರಿಕ ಸಮಾಜದಿಂದ ದೂರವಾಗಿ ಸಮಾಜದ ಎಲ್ಲ ಸೌಲತ್ತುಗಳಿಂದ ವಂಚಿತವಾಗಿ, ಅರಣ್ಯದಲ್ಲಿ ತಮ್ಮದೇ ಆದ ಪುಟ್ಟ ಸಾಮ್ರಾಜ್ಯವನ್ನು ನಿರ್ಮಿಸಿಕೊಂಡು ಸ್ವತಂತ್ರವಾಗಿ ಬದುಕುತ್ತಿದ್ದವು. ಬ್ರಿಟೀಷರ ಅವಧಿಯಲ್ಲಿ ಅವರ ದಬ್ಬಾಳಿಕೆಗೆ ಮಣಿಯದೇ ತಪ್ಪಿಸಿಕೊಂಡು ಓಡಿಹೋದ ಬುಡಕಟ್ಟು ಸಮುದಾಯಗಳನ್ನು ಅಪರಾಧಿ ಬುಡಕಟ್ಟುಗಳೆಂದು ಪರಿಗಣಿಸಲಾಯಿತು. ಹೀಗೆ ನಾಗರಿಕ ಸಮಾಜದಿಂದ ದೂರವಿದ್ದರೂ ಆ ಸಮುದಾಯದವರನ್ನು ದುರುಪಯೋಗ ಪಡಿಸಿಕೊಳ್ಳಲು ಯತ್ನಿಸಿದರು. ಗುಲಾಮಗಿರಿಯಿಂದ, ದಾಸ್ಯದಿಂದ ಮುಕ್ತವಾದ ಭಾರತ ದೇಶವು ಪ್ರಜಾಪ್ರಭುತ್ವವನ್ನು ಅಸ್ತಿತ್ವಕ್ಕೆ ತರುವುದರ ಮುಖಾಂತರ ಎಲ್ಲ ವರ್ಗದವರಿಗೆ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟಿತು. ಜಾತಿ, ಲಿಂಗ, ಪಂಥ ಇವುಗಳ ಬೇಧ-ಭಾವವಿಲ್ಲದೆ ಎಲ್ಲರನ್ನೂ ಸಮಾನರೆಂದು ಸಂವಿಧಾನವು ಪರಿಗಣಿಸಿದೆ. ಮೀಸಲಾತಿ ವ್ಯವಸ್ಥೆಯಿಂದಾಗಿ ಬುಡಕಟ್ಟು ಸಮುದಾಯಗಳು ರಾಜಕೀಯಕ್ಕೆ ಪ್ರವೇಶಿಸುವಂತಾಯಿತು. ಪ್ರಮುಖ ರಾಜಕೀಯ ಪಕ್ಷಗಳು ಬುಡಕಟ್ಟು ಸಮುದಾಯದವರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಚುನಾವಣೆ ಪ್ರಕ್ರಿಯೆಯಲ್ಲಿ ಬುಡಕಟ್ಟು ಸಮುದಾಯಗಳು ಪಾಲ್ಗೊಂಡು ಇತರೆ ಸಮುದಾಯದ ಜನಪ್ರತಿನಿಧಿಗಳೊಂದಿಗೆ ಬಾಂಧವ್ಯವನ್ನು ಬೆಸೆದುಕೊಳ್ಳುವಂತೆ ಮಾಡಿತು. ಆಡಳಿತ ವ್ಯವಸ್ಥೆಯಲ್ಲಿ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಬುಡಕಟ್ಟು ಸಮುದಾಯಗಳು ಪಾಲ್ಗೊಳ್ಳುವುದರ ಮೂಲಕ ಹೊಸ ಅಧ್ಯಾಯಕ್ಕೆ ನಾಂದಿಯಾಯಿತು.

೫.೧ ಬುಡಕಟ್ಟು ರಾಜಕಾರಣ :

ಭಾರತೀಯ ಸಂಸ್ಕೃತಿಯು ನೂರಾರು ಭಾಷೆ, ಸಾವಿರಾರು ಜಾತಿ-ಉಪಜಾತಿಗಳು, ಹಲವಾರು ಜನಾಂಗಗಳು, ವಿವಿಧ ಧರ್ಮಗಳು ಮತ್ತು ಬಹುಸಂಸ್ಕೃತಿಯ ನಾಡಾಗಿ ಗುರುತಿಸಿಕೊಂಡಿದೆ. ಭಾರತ ದೇಶವು ವಿಶ್ವದಲ್ಲಿಯೇ ತನ್ನದೇ ಆದ ಸ್ಥಾನ ಮಾನಗಳನ್ನು

ಹೊಂದಿದೆ. ಹಲವಾರು ಸಮುದಾಯಗಳನ್ನು ಒಳಗೊಂಡಿರುವ ಈ ನಾಡಿನಲ್ಲಿ ಪ್ರತಿಯೊಂದು ಸಮುದಾಯಗಳು ತನ್ನದೇ ಆದ ಆಚಾರ–ವಿಚಾರ, ನೀತಿ–ನಿಯಮಗಳನ್ನು ಅನುಸರಿಸುತ್ತಾ ನಡೆಯುತ್ತಿವೆ. ಈ ಸಮುದಾಯಗಳು ತಮ್ಮದೇ ಆದ ನ್ಯಾಯ ವಿಧಾನಗಳನ್ನು ಅಳವಡಿಸಿಕೊಂಡಿರುತ್ತವೆ. ಈ ನ್ಯಾಯ ನಿರ್ಣಯಗಳ ಮೂಲಕ ಸಮುದಾಯದ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುತ್ತವೆ. ಪ್ರತಿಯೊಂದು ಬುಡಕಟ್ಟು ಸಮುದಾಯ ತನ್ನದೇ ಆದ ನ್ಯಾಯಪಂಚಾಯತಿಯನ್ನು ಹೊಂದಿರುತ್ತದೆ. ಸಮುದಾಯದ ನಾಯಕರು, ಮುಖ್ಯಸ್ಥರು ಅಥವಾ ಸಮುದಾಯದ ಹಿರಿಯರು ನ್ಯಾಯ ನಿರ್ಣಯಗಳನ್ನು ಮಾಡುತ್ತಾರೆ. ಈ ಬುಡಕಟ್ಟುಗಳು ತನ್ನದೇ ಆದ ನ್ಯಾಯ ವಿಧಾನವನ್ನು ಅಳವಡಿಸಿಕೊಂಡಿರುತ್ತವೆ. ಈ ಸಮುದಾಯಗಳು ಅನುಸರಿಸುವ ನ್ಯಾಯ ನಿರ್ಣಯಗಳು ಅವರ ತಪ್ಪಿನ ಆಧಾರದ ಮೇಲೆ ಶಿಕ್ಷೆಯನ್ನು ಅವಲಂಬಿಸಿರುತ್ತವೆ. ಈ ಕುಲಪಂಚಾಯತಿಯಲ್ಲಿ ನೀಡುವ ಶಿಕ್ಷೆಗಳು ಕೆಲವು ಸಂದರ್ಭದಲ್ಲಿ ಸಾಮಾನ್ಯವಾಗಿದ್ದರೆ, ಕೆಲವು ಸಂದರ್ಭದಲ್ಲಿ ಅವು ಕ್ರೂರ ರೂಪದಲ್ಲಿರುತ್ತವೆ. ಉದಾಹರಣೆಗೆ "ಇತ್ತೀಚಿನ ದಿನಗಳಲ್ಲೂ 'ಅಪಾತನಿ ನ್ಯಾಯಾಲಯ'ಗಳು ಕೊಲೆ, ವ್ಯಭಿಚಾರ ಹಾಗೂ ಕಳ್ಳತನಗಳಿಗೆ ಮರಣದಂಡನೆಯನ್ನು ವಿಧಿಸಿದರೆ, ದಾಫ್ಲಾ ಜನರು ಅನೀತಿಗೆ ಹೆಸರಾಗಿರುವ ಹುಡುಗಿಯರನ್ನು ಬೆತ್ತಲೆ ಮಾಡಿ ಮರಕ್ಕೆ ಕಟ್ಟಿ ಹೊಡೆಯುತ್ತಿದ್ದರು. ಇವರು ಅಪ್ರಾಮಾಣಿಕರಾದ ತಮ್ಮ ಹೆಂಡತಿಯರನ್ನೇ ಹೊಡೆದು ಮರ್ಮಾಂಗಗಳಿಗೆ ನೋವನ್ನುಂಟುಮಾಡುತ್ತಿದ್ದರು. ಅಪಾತನಿಗಳು ಮತ್ತು ದಾಫ್ಲಾಗಳು ತಮ್ಮ ಸೆರೆಯಾಳುಗಳು ಕಬ್ಬಿಣದ ಗಸಿಯ ಬೇಲಿಯ ಹಿಂದೆ ಒತ್ತೆಯಾಳುಗಳಾಗಿ ಬಂಧನದಲ್ಲಿಡುತ್ತಿದ್ದರು. ಅನೈತಿಕ ಹುಡುಗಿಯರ ಕೂದಲನ್ನು ಕತ್ತರಿಸುತ್ತಿದ್ದರು. ಅನೈತಿಕ ವರ್ತನೆಗೆ ಮೂಗನ್ನು ಕೊಯ್ಯುವ ಶಿಕ್ಷೆ ಭಾರತದಲ್ಲಿ ಅಲ್ಲಲ್ಲಿ ಅಪರೂಪವಾಗಿ ಕಂಡುಬರುತ್ತವೆ. ಕೆಲವು ಸ್ಥಳಗಳಲ್ಲಿ ಅಂತಹ ಹುಡುಗಿಯರನ್ನು ಬೆತ್ತಲೆಯಾಗಿ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಿದ್ದರು. ಬುಡಕಟ್ಟಿನ ಅಪರಾಧದ ವಿಷಯದಲ್ಲಿ ಬಹಿಷ್ಕಾರ ಎಂಬುದು ಎಷ್ಟು ಶಕ್ತವಾದುದೆಂದರೆ ಬುಡಕಟ್ಟಿನ ಯಾವ ವ್ಯಕ್ತಿಯೂ ಮಂಡಳಿಯ ತೀರ್ಮಾನವನ್ನು ಎದುರಿಸುವಂತಿಲ್ಲ."[೧] ಈ ರೀತಿಯ ಅಮಾನುಷವಾದ ಶಿಕ್ಷೆಯ ಪದ್ಧತಿ ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುತ್ತದೆ. ಅಲ್ಲದೆ ದಂಡ ವಿಧಿಸುವುದು, ಬಹಿಷ್ಕಾರ ಹಾಕುವುದು, ದನ–ಕರುಗಳನ್ನು ಪರಿಹಾರವಾಗಿ ಪಡೆಯುವುದು ಹೀಗೆ ವಿಭಿನ್ನ ರೀತಿಯ ಶಿಕ್ಷೆಗಳನ್ನು ನೀಡಲಾಗುತ್ತಿದೆ.

ವಿಶ್ವದ ವಿವಿಧ ಬುಡಕಟ್ಟುಗಳು ತಮ್ಮದೇ ಆದ ನ್ಯಾಯ ನಿರ್ಣಯಗಳನ್ನು ಹೊಂದಿರುತ್ತವೆ. "೧೮೬೧ ರ ಸುಮಾರಿನಲ್ಲಿ ಹೊಟೆಂಟಾಟ್ ಬುಡಕಟ್ಟಿನವನೊಬ್ಬನನ್ನು ಆತ್ಮರಕ್ಷಣೆಗಾಗಿ ಕೊಂದರೂ ಬುಡಕಟ್ಟಿನ ನ್ಯಾಯಾಲಯ ಅವನಿಗೆ ಶಿಕ್ಷೆ ವಿಧಿಸಿತು. ಬುಡಕಟ್ಟಿನ ಕಾನೂನಿನ ಪ್ರಕಾರ ಸತ್ತವನ ನೆಂಟರು ಸೇಡು ತೀರಿಸಿಕೊಳ್ಳಲು ಅಪರಾಧಿಯನ್ನು

ಕೊಲ್ಲಬಹುದೆಂದು ನ್ಯಾಯಾಲಯ ಆತನಿಗೆ ತಿಳಿಸಿ ನಾಡನ್ನು ಬಿಟ್ಟು ಹೋಗುವಂತೆ ಸಲಹೆ ಕೊಡುತ್ತದೆ. ಬಿಡಾರದಲ್ಲಿ ಅಗ್ನಿಯ ಸುತ್ತ ಸಭೆ ಸೇರಿದಾಗ ಬೇಗೋರ್ಲಾಮ ಹಾಗೂ ಬುಷ್‌ಮನ್ ಜನರ ಮುಖಂಡರು ಹಿಂಸಾಕೃತ್ಯಗಳನ್ನು ಅಥವಾ ವ್ಯಭಿಚಾರವನ್ನು ಮಾಡಿದ ಅಪರಾಧಿಗೆ ಅನೌಪಚಾರಿಕವಾಗಿ ಮರಣದಂಡನೆ ವಿಧಿಸುತ್ತದೆ. ಈ ಕೆಲಸ ನೆರವೇರಿಸಲು ಯುವಜನರನ್ನು ನೇಮಿಸುತ್ತಾರೆ."[೨] ಹೀಗೆ ಪ್ರತಿಯೊಂದು ಬುಡಕಟ್ಟುಗಳು ವಿಶಿಷ್ಟವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡಿವೆ.

ಗಂಗಾವತಿ ಪರಿಸರದಲ್ಲಿ 'ನಾಯಕ' ಎಂಬ ಒಂದೇ ಬುಡಕಟ್ಟು ಸಮುದಾಯ ಕಾಣಸಿಗುತ್ತದೆ. ಈ ಸಮುದಾಯವನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. "ವಾಲ್ಮೀಕಿ, ಬ್ಯಾಡರು, ಬೇಡ, ನಾಯಕ, ತಳವಾರ, ಬೆರಡು, ಬೋದರ್, ನಾಯಕ ಮಕ್ಕಳು, ನಾಯಕವಾಡಿ, ರಾಮೋಸಿ, ಬೆಂಡರ, ವಾಲ್ಮೀಕಿ ಮಕ್ಕಳ, ನ್ಯಾಕ ಮತ್ತು ಬೊಯರೆಂದು ಅನೇಕ ಹೆಸರುಗಳಿಂದ ಇವರನ್ನು ಕರೆಯುತ್ತಾರೆ. ಇವರು ತಾವು ವಾಲ್ಮೀಕಿ ಋಷಿಗಳ ವಂಶದವರೆಂದು ಹೇಳಿಕೊಳ್ಳುತ್ತಾರೆ. ಕರ್ನಾಟಕದ ಉತ್ತರ ಭಾಗದಲ್ಲಿರುವ ಎಲ್ಲ ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿ ಕಂಡುಬರುತ್ತಾರೆ."[೩] ಉಳಿದಂತೆ ಗೌಳಿಗರು, ವೇಷಗಾರರು, ಗೊಲ್ಲರು ಮುಂತಾದ ಕೆಲವು ಸಮುದಾಯಗಳು ಗಂಗಾವತಿ ತಾಲೂಕಿನಲ್ಲಿ ಕಂಡುಬರುತ್ತವೆ. ಆದರೆ ಈ ಸಮುದಾಯಗಳು ಪರಿಶಿಷ್ಟ ಪಂಗಡಗಳ ಗುಂಪಿಗೆ ಸೇರಿಲ್ಲದವುಗಳಾಗಿದೆ. ಈ ಪ್ರದೇಶದಲ್ಲಿರುವ ಮೇದ ಎನ್ನುವುದರ ಬದಲಾಗಿ ಮೇದರು ಎಂದು ಬಳಸಲ್ಪಟ್ಟಿರುವುದೇ ಇವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಪರಿಗಣಿಸಲ್ಪಟ್ಟಿಲ್ಲ. ಅದೇ ರೀತಿಯಾಗಿ ಗೌಳಿಗರು ಬದಲಾಗಿ ಗೌಳೇರು, ಕಾಡುಗೊಲ್ಲ ಬದಲಾಗಿ ಗೊಲ್ಲರು ಮತ್ತು ಹಗಲು ವೇಷಗಾರರ ಬದಲಾಗಿ ವೇಷಗಾರರೆಂದು ಹೆಸರನ್ನು ಹೊಂದಿರುವುದರಿಂದ ಈ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳೆಂದು ಪರಿಗಣಿಸಲಾಗಿಲ್ಲ. ಆದ್ದರಿಂದ ಗಂಗಾವತಿ ತಾಲೂಕಿನಲ್ಲಿ ನಾಯಕ ಸಮುದಾಯ ಮಾತ್ರ ಪರಿಶಿಷ್ಟ ಪಂಗಡದ ಸಮುದಾಯವಾಗಿದೆ ಎಂದು ಹೇಳಬಹುದಾಗಿದೆ. ಗೊಲ್ಲ ಸಮುದಾಯದವರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ವೇಷಗಾರರಲ್ಲಿ ಆರ್ಥಿಕವಾಗಿ ಹಿಂದುಳಿದವರು ಮತ್ತು ಮುಂದುವರೆದವರು ಕಂಡುಬರುತ್ತಾರೆ. ಗೌಳೇರು ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ಸುಸ್ಥಿತಿಯನ್ನು ಹೊಂದಿದ್ದಾರೆ. ಪರಿಶಿಷ್ಟ ಪಂಗಡವಾದ ನಾಯಕ ಸಮುದಾಯದಲ್ಲಿ ಹೆಚ್ಚಿನ ಸಂಖ್ಯೆಯ ಬಡವರು ಕಂಡುಬರುತ್ತಾರೆ.

ಪ್ರಾಚೀನ ಕಾಲದಲ್ಲಿ ಪ್ರತಿಯೊಂದು ಸಮುದಾಯಗಳು ಆಣೆ, ಪ್ರಮಾಣ, ಹೊಯಿಲು ಬರೆಯುವುದರ ಮೂಲಕ ನ್ಯಾಯ ನಿರ್ಣಯಗಳನ್ನು ಮಾಡುತ್ತಿದ್ದರು. ಮಧ್ಯಕಾಲೀನ ಅವಧಿಯಲ್ಲಿ ಮುಸ್ಲಿಮರ ಆಳ್ವಿಕೆ ಪ್ರಮುಖವಾಗಿ ಕಂಡುಬರುತ್ತದೆ. ಇವರ ಆಕ್ರಮಣದಿಂದ ಭಾರತೀಯ ಸಮಾಜ ಜರ್ಜರಿತ ಗೊಂಡಿತು. ಕುಲಪಂಚಾಯತಿ ಅಥವಾ ಜಾತಿ

ಪಂಚಾಯತಿಗಳು ತಮ್ಮ ಹಿಡಿತವನ್ನು ಬಿಗಿಗೊಳಿಸಿದವು. "ಆಂಗ್ಲರು ಭಾರತಕ್ಕೆ ಆಗಮಿಸುವುದಕ್ಕಿಂತ ಪೂರ್ವ ನಮ್ಮ ಬುಡಕಟ್ಟುಗಳು ಕಾಡಿನಲ್ಲಿ ಸ್ವಚ್ಛಂದವಾಗಿ ಬದುಕುತ್ತಿದ್ದವು. ಇಡೀ ಕಾಡೇ ನಮ್ಮದು ಎಂಬ ಪರಿಕಲ್ಪನೆ ಅವರಲ್ಲಿತ್ತು. ಈ ಹಂತದಲ್ಲಿ ಅವರಿಗೆ ಸ್ವಂತ ಆಸ್ತಿಯ ಕಲ್ಪನೆ ಇರಲಿಲ್ಲ. ಬೇಟೆ ಮತ್ತು ಆಹಾರ ಸಂಗ್ರಹಣೆಯಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಆದಿವಾಸಿಗಳು ಕೃಷಿಯನ್ನು ರೂಪಿಸಿಕೊಂಡಾಗಲೂ ಒಂದೇ ಸ್ಥಳದಲ್ಲಿ ಹಲವಾರು ವರ್ಷಗಳ ವರೆಗೆ ನೆಲೆನಿಂತು ಕೃಷಿ ಕೈಗೊಳ್ಳುತ್ತಿರಲಿಲ್ಲ. ಕುಮರಿ ಬೇಸಾಯ ಮಾಡುತ್ತಾ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಿದ್ದರು."[9] ಆದಿವಾಸಿಗಳು ಅಲೆಮಾರಿ ಜೀವನಕ್ಕೆ ಮಂಗಳ ಹಾಡಿ ಒಂದೆಡೆ ಸ್ಥಿರವಾಗಿ ನೆಲೆನಿಂತು ಒಂದೆರಡು ಎಕರೆ ಕಾಡಿನ ಜಮೀನನ್ನು ಕೃಷಿಗಾಗಿ ಬಳಸಿಕೊಳ್ಳಲು ಪ್ರಾರಂಭಿಸಿದರು. ಹೀಗೆ ನಿಧಾನವಾಗಿ ಸ್ಥಿರವಾದ ನೆಲೆಯನ್ನು ಕಂಡುಕೊಳ್ಳಲು ಪ್ರಾರಂಭಿಸಿದರು. ಬ್ರಿಟೀಷರ್ ಆಳ್ವಿಕೆಯ ಮೂಲ ಉದ್ದೇಶವಾದ ಕಾಫಿ, ಟೀ, ಏಲಕ್ಕಿ, ಮೆಣಸು ಮುಂತಾದ ಸಾಂಬಾರ ಪದಾರ್ಥಗಳ ಬೆಳೆಗಳನ್ನು ಬೆಳೆಯುವುದಕ್ಕಾಗಿ ಕಾಡುಗಳನ್ನು ತೋಟಗಳಾಗಿ ಪರಿವರ್ತಿಸಿದರು. ಈ ಸಂದರ್ಭದಲ್ಲಿ ಕಾಡಿನಲ್ಲಿ ವಾಸಿಸುತ್ತಿದ್ದ ಬುಡಕಟ್ಟು ಸಮುದಾಯಗಳು ತಮ್ಮ ನೆಲೆಯನ್ನು ಕಳೆದುಕೊಂಡು ಅತಂತ್ರವಾದವು. ಈ ಆದಿವಾಸಿಗಳ ಅತಂತ್ರತೆಯನ್ನು ಬ್ರಿಟೀಷರು ಸದುಪಯೋಗಪಡಿಸಿಕೊಳ್ಳುವ ಮಹದಾಸೆಯನ್ನು ಹೊಂದಿದ್ದರು. ಅಂದರೆ ಈ ಸಮುದಾಯಗಳು ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದರೆ ಮಾತ್ರ ಭೂಮಿಯನ್ನು ನೀಡುವುದಾಗಿ ಘೋಷಣೆ ಮಾಡಿ, ಹಲವಾರು ಸಮುದಾಯದವರನ್ನು ಕ್ರೈಸ್ತ ಮತಕ್ಕೆ ಸೆಳೆದುಕೊಂಡಿತು. ಪ್ರತಿಭಟಿಸಿದವರನ್ನು ಕಳ್ಳರು ಮತ್ತು ಅಪರಾಧಿಗಳೆಂದು ಹಣೆಪಟ್ಟಿ ಕಟ್ಟಿತು. ಇದರ ಮಧ್ಯೆಯೂ ಕಾಡಿನಲ್ಲಿ ದೊರೆಯುವ ಕಾಡಿನುತ್ಪನ್ನಗಳನ್ನು ಹೊರಗಿನ ಸಂತೆಗಳಿಗೆ ಮಾರಾಟ ಮಾಡಿ ಬಂದ ಹಣದಿಂದ ಜೀವನ ನಿರ್ವಹಿಸುತ್ತಿದ್ದವು. ಹೊರಗಿನ ಪ್ರಪಂಚದ ಪರಿವೇ ಇಲ್ಲದೇ ಕಾಡಿನ ಮಧ್ಯೆ ತಮ್ಮದೇ ಆದ ಪುಟ್ಟ ಪ್ರಪಂಚದಲ್ಲಿ ವಾಸಿಸುತ್ತಿದ್ದರು. ಆಧುನಿಕತೆ, ನಗರೀಕರಣ ಪ್ರಕ್ರಿಯೆಯಿಂದಾಗಿ ಮತ್ತು ಸ್ವತಂತ್ರ ಭಾರತದ ಅರಣ್ಯ ನೀತಿ ಕಾಯ್ದೆಯ ಫಲವಾಗಿ ಕಾಡಿನಿಂದ ಹೊರಗೆ ಬರಬೇಕಾದ ಅನಿವಾರ್ಯತೆ ಎದುರಾಯಿತು.

ಬ್ರಿಟೀಷರ ದಾಸ್ಯದಿಂದ ಮುಕ್ತವಾದ ನಂತರ ನಮ್ಮದೇ ಆದ ಸಂವಿಧಾನವನ್ನು ರಚಿಸಲಾಯಿತು. ಈ ಸಂವಿಧಾನವು ಎಲ್ಲರೂ ಸಮಾನರು ಎಂದು ಹೇಳುವ ಮೂಲಕ ಹರಿಜನ-ಗಿರಿಜನರನ್ನು ಒಳಗೊಂಡಂತೆ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟಿತು. ಆದರೆ ಈ ಸ್ವಾತಂತ್ರ್ಯವು ಆದಿವಾಸಿಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡಿತು. ಆದಿವಾಸಿಗಳಿಗೆ ಬಹುಮುಖ್ಯವಾಗಿ ಅರಣ್ಯನೀತಿಯು ಅವರ ಸ್ವಚ್ಛಂದವಾದ ಹಾಗೂ ಸ್ವತಂತ್ರ ಜೀವನದಲ್ಲಿ ಬಿರುಗಾಳಿಯನ್ನೆಬ್ಬಿಸಿತು. ಇದರ ಫಲವಾಗಿ ಅನೇಕ ಆದಿವಾಸಿ ಸಮುದಾಯಗಳು ಆ ಕಾಡಿನಿಂದ ಸ್ಥಳಾಂತರಗೊಳ್ಳುವುದು ಅನಿವಾರ್ಯವಾಯಿತು. ಅರಣ್ಯ ನೀತಿಯ ಫಲವಾಗಿ . ಆದಿವಾಸಿಗಳ ಹೊರಗಿನ

ಪ್ರಪಂಚದೊಂದಿಗೆ ಸಂಪರ್ಕ ಬೆಳೆಯಲು ಸಾಧ್ಯವಾಯಿತೆನ್ನಬಹುದು. ಸ್ವತಂತ್ರ ಭಾರತದಲ್ಲಿ ಹಿಂದುಳಿದ ವರ್ಗಗಳ ಆಯೋಗಳು ಸಮುದಾಯಗಳಿಗೆ ರಾಜಕೀಯ ಮೀಸಲಾತಿಯನ್ನು ಕಲ್ಪಿಸಿತು. ಆದಿವಾಸಿ ಸಮುದಾಯಗಳಿಗೆ ಶೇ.೩ ರಷ್ಟು ಮೀಸಲಾತಿಯನ್ನು ಕಲ್ಪಿಸಿತು. ಇದರಿಂದಾಗಿ ಬುಡಕಟ್ಟು ಸಮುದಾಯಗಳು ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿ ಗುರುತಿಸಿಕೊಳ್ಳಲು ಅವಕಾಶವಾಯಿತು. ಗ್ರಾಮ ಪಂಚಾಯತಿಯಿಂದ ಹಿಡಿದು ಲೋಕಸಭೆಯ ವರೆಗಿನ ಆಡಳಿತದಲ್ಲಿ ಅವಕಾಶವನ್ನು ನೀಡಲಾಗಿದೆ. ಈ ಮೀಸಲಾತಿ ಸೌಲಭ್ಯವು ದೊರೆತಿರುವುದರಿಂದ ಬುಡಕಟ್ಟು ಸಮುದಾಯಗಳು ಮುಂದುವರೆಯುವುದಕ್ಕೆ ಒಂದು ರೀತಿಯ ವೇದಿಕೆ ನಿರ್ಮಾಣವಾಯಿತೆನ್ನಬಹುದು. ಆದರೆ ಈ ಮೀಸಲಾತಿಯ ಸೌಲಭ್ಯವನ್ನು ಎಲ್ಲ ಆದಿವಾಸಿ ಸಮುದಾಯಗಳು ಪಡೆದುಕೊಳ್ಳುತ್ತಿಲ್ಲ. ಕಾರಣವೆಂದರೆ ಇನ್ನೂ ಹಲವಾರು ಬುಡಕಟ್ಟುಗಳು ಕಾಡಿನ ಮಧ್ಯದಲ್ಲಿಯೇ ವಾಸಿಸುತ್ತಿದ್ದಾರೆ. ಕೆಲವೊಂದು ಮುಂದುವರೆದ ಆದಿವಾಸಿ ಸಮುದಾಯಗಳು ಮಾತ್ರ ಈ ಮೀಸಲಾತಿಯನ್ನು ಸದುಪಯೋಗ ಪಡಿಸಿಕೊಳ್ಳುತ್ತಿವೆ.

"ಕರ್ನಾಟಕದಲ್ಲಿ ಪಂಚಾಯತ್ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಪ್ರವೇಶಕ್ಕೆ ಶಾಸನಾತ್ಮಕ ಕ್ರಮವನ್ನು ಮೊಟ್ಟ ಮೊದಲ ಬಾರಿಗೆ ೧೯೮೩ ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿ ಹಸಿರು ನಿಶಾನೆಯನ್ನು ನೀಡುವ ಮೂಲಕ ಜಾರಿಗೆ ತರಲಾಯಿತು. ಜನತಾ ಪಕ್ಷ ಸರ್ಕಾರದ ರುವಾರಿಯಾದ ರಾಮಕೃಷ್ಣ ಹೆಗಡೆ ಮತ್ತು ಪಂಚಾಯತ್ ಹರಿಕಾರರಾದ ಅಬ್ದುಲ್ ನಜೀರ್‌ಸಾಬ್ ಅವರು ಇದಕ್ಕೊಂದು ಉತ್ತಮ ಬುನಾದಿಯನ್ನು ಹಾಕಿದರೆಂದು ಹೇಳಬಹುದು."[೫] ಪಂಚಾಯತ್ ರಾಜ್ ಸಂಸ್ಥೆಯ ನಿರ್ಮಾಣದಿಂದಾಗಿ ಅಧಿಕಾರ ವಿಕೇಂದ್ರೀಕರಣಗೊಂಡು ಬುಡಕಟ್ಟು ಸಮುದಾಯಗಳು ಆಡಳಿತದಲ್ಲಿ ಪಾಲ್ಗೊಳ್ಳುವಂತಾಗಿದೆ. ಗಂಗಾವತಿ ತಾಲೂಕಿನ ಪಂಚಾಯತ್ ರಾಜ್ ಸಂಸ್ಥೆಯನ್ನು ಗಮನಿಸಿ ಹೇಳುವುದಾದರೆ ಇದು ಜಿಲ್ಲಾ ಕೇಂದ್ರಕ್ಕಿಂತ ಹೆಚ್ಚಿನ ಪ್ರಮಾಣದ ಸ್ಥಳೀಯ ಘಟಕಗಳನ್ನು ಹೊಂದಿರುವುದು ತಿಳಿದುಬರುತ್ತದೆ. ಕೊಪ್ಪಳ ತಾಲೂಕು ೩೫ ಗ್ರಾಮ ಪಂಚಾಯತಿಗಳನ್ನು ಒಳಗೊಂಡಿದೆ. ಗಂಗಾವತಿ ತಾಲೂಕು ೩೮, ಯಲಬುರ್ಗ ೩೩ ಮತ್ತು ಕುಷ್ಟಗಿ ೨೮ ಗ್ರಾಮ ಪಂಚಾಯತಿಗಳನ್ನು ಒಳಗೊಂಡಿವೆ. ಅಂದರೆ ಗಂಗಾವತಿ ತಾಲೂಕು ಸ್ಥಳೀಯ ಆಡಳಿತ ಮತ್ತು ಆರ್ಥಿಕತೆಯ ಅಭಿವೃದ್ಧಿಯಲ್ಲಿ ಮುಂಚೂಣಿ ಸ್ಥಾನದಲ್ಲಿದೆ ಎಂದು ತಿಳಿದುಬರುತ್ತದೆ. ಅಲ್ಲದೆ ತಾಲೂಕ ಪಂಚಾಯತ್ ೩೨ ಜನ ಮತ್ತು ೮ ಜನ ಜಿಲ್ಲಾ ಪಂಚಾಯತ್ ಸದಸ್ಯರನ್ನು ಒಳಗೊಂಡಿದೆ. ಗಂಗಾವತಿ ತಾಲೂಕಿನ ೩೮ ಗ್ರಾಮ ಪಂಚಾಯತ್ ಗಳಿಂದ ೮೦೨ ಗ್ರಾಮ ಪಂಚಾಯತಿಯ ಸದಸ್ಯರಿದ್ದಾರೆ. ಈ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಕಾರಟಗಿ ಗ್ರಾಮ ಪಂಚಾಯತಿ ಅತ್ಯಂತ ದೊಡ್ಡ ಗ್ರಾಮ ಪಂಚಾಯತಿ. ಈ ಪಂಚಾಯತಿಯು ಒಟ್ಟು ೬೨ ಸದಸ್ಯರುಗಳನ್ನು ಹೊಂದಿದೆ. ನಂತರದಲ್ಲಿ ಕನಕಗಿರಿ ಗ್ರಾಮ ಪಂಚಾಯತಿಯು ೩೭

ಸದಸ್ಯರನ್ನು ಒಳಗೊಂಡಿರುವುದರ ಮೂಲಕ ಗಂಗಾವತಿ ತಾಲೂಕಿನ ಎರಡನೇ ಅತಿದೊಡ್ಡ ಗ್ರಾಮ ಪಂಚಾಯತಿಯಾಗಿದೆ. ಅದೇ ರೀತಿಯಾಗಿ ಆಗೋಲಿ ಗ್ರಾಮ ಪಂಚಾಯತಿಯು ಕೇವಲ ೧೨ ಜನ ಸದಸ್ಯರನ್ನು ಹೊಂದಿರುವ ತಾಲೂಕಿನ ಅತಿ ಚಿಕ್ಕ ಗ್ರಾಮ ಪಂಚಾಯತಿಯಾಗಿದೆ. ಕಾರಟಗಿ ಗ್ರಾಮ ಪಂಚಾಯತಿಯು ೬೨ ಜನ ಸದಸ್ಯರುಗಳನ್ನೊಳಗೊಂಡಿದ್ದರೂ ಕೇವಲ ೭ ಸ್ಥಾನ ಮಾತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಲಾಗಿದೆ. ಹುಲಿಹೈದರ ಗ್ರಾಮ ಪಂಚಾಯತಿಯು ೨೬ ಸದಸ್ಯರನ್ನು ಒಳಗೊಂಡಿದ್ದು ೯ ಸ್ಥಾನಗಳನ್ನು ಪರಿಶಿಷ್ಟ ಪಂಗಡಗಳ ಸದಸ್ಯರಿಗೆ ಮೀಸಲಿರಿಸಲಾಗಿದೆ. ಹುಲಿಹೈದರ ಗ್ರಾಮ ಪಂಚಾಯತಿಯು ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿಯೇ ಅತೀ ಹೆಚ್ಚಿನ ಪರಿಶಿಷ್ಟ ಪಂಗಡದ ಮೀಸಲು ಸದಸ್ಯರನ್ನು ಒಳಗೊಂಡಿರುವ ಕ್ಷೇತ್ರವಾಗಿದೆ ಎಂದು ಹೇಳಬಹುದು.

೫.೨ ಬುಡಕಟ್ಟುಗಳು ಮತ್ತು ರಾಜಕೀಯ ಪಕ್ಷಗಳು :

ಭಾರತವು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವನ್ನು ಹೊಂದಿದ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತವೆ. ನಮ್ಮ ಭಾರತದಲ್ಲಿ ಅನೇಕ ರಾಜಕೀಯ ಪಕ್ಷಗಳು ಕಂಡುಬರುತ್ತವೆ. ಈ ವ್ಯವಸ್ಥೆಯನ್ನು ಬಹುಪಕ್ಷ ಪದ್ಧತಿ ಎಂದು ಕರೆಯುತ್ತೇವೆ. ಭಾರತದಲ್ಲಿ ಹತ್ತು ಹಲವಾರು ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳು ಕಂಡುಬರುತ್ತವೆ. ಮೊದಲಿಗೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಅಸ್ತಿತ್ವಕ್ಕೆ ಬಂದಿತು. "ಕಾಲಕ್ರಮೇಣ ಕಾಂಗ್ರೆಸ್ ಪಕ್ಷದಿಂದ ಹೊರಬಂದವರು ಇತರ ಪಕ್ಷಗಳನ್ನು ರಚಿಸಿದರು. ೧೯೯೭ ರ ಡಿಸೆಂಬರ್‌ನಲ್ಲಿ ಸುಮಾರು ೬೫೫ ಪಕ್ಷಗಳು ಚುನಾವಣಾ ಆಯೋಗದಲ್ಲಿ ನೊಂದಣಿಯಾಗಿದ್ದವು."[೬] ೧೯೯೭ ರ ಅವಧಿಯಲ್ಲಿ ೭ ಪಕ್ಷಗಳು ರಾಷ್ಟ್ರೀಯ ಮಾನ್ಯತೆಯನ್ನು ಪಡೆದಿದ್ದವು. ಅಲ್ಲದೆ ೫೬ ರಾಜ್ಯ ಪಕ್ಷಗಳು ಅಸ್ತಿತ್ವದಲ್ಲಿದ್ದವು. ಈ ರೀತಿಯ ಬಹುಪಕ್ಷ ಪದ್ಧತಿಯ ಆಡಳಿತ ವ್ಯವಸ್ಥೆ ಇರುವುದರಿಂದ ರಾಜಕೀಯ ಪಕ್ಷಗಳಲ್ಲಿ ಒಡಕುಗಳುಂಟಾಗುವುದು ಸರ್ವೆಸಾಮಾನ್ಯವಾಗಿ ಕಂಡುಬರುತ್ತದೆ. ಅದೇ ರೀತಿಯಾಗಿ ವಿವಿಧ ಪಕ್ಷಗಳು ವಿಲೀನಗೊಂಡು ಅಧಿಕಾರ ನಡೆಸುವುದು ಪ್ರಮುಖವಾಗಿ ಕಂಡುಬರುತ್ತದೆ. ಇಂದಿನ ದಿನದ ಕೇಂದ್ರ ಮತ್ತು ಈ ಹಿಂದೆ ಇದ್ದ ರಾಜ್ಯಸರ್ಕಾರಗಳನ್ನು ನೋಡಿದರೆ. ಅಧಿಕಾರದಲ್ಲಿ ಪಕ್ಷಗಳ ಪಾತ್ರವೇನೆಂಬುದು ತಿಳಿದುಬರುತ್ತದೆ. ರಾಜಕೀಯ ಪಕ್ಷಗಳು ಕೇವಲ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಟ್ಟಕ್ಕಲ್ಲದೆ ಅವು ಗ್ರಾಮ ಪಂಚಾಯತಿವರೆಗೂ ವ್ಯಾಪಿಸಿರುವುದು ಕಂಡುಬರುತ್ತದೆ. ಅಧಿಕಾರ ಚಲಾವಣೆ, ಯೋಜನೆಗಳ ಅನುಷ್ಠಾನ ಮತ್ತು ಆಡಳಿತ ನಿರ್ವಹಣೆ ಪ್ರಮುಖವಾಗಿ ರಾಜಕೀಯ ಪಕ್ಷಗಳನ್ನು ಅವಲಂಬಿಸಿರುತ್ತದೆ.

ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಯ ಪರಿಶಿಷ್ಟ ಪಂಗಡಗಳ ಸದಸ್ಯರ ಪಕ್ಷಗಳ ಹಿನ್ನೆಲೆಯನ್ನು ಗಮನಿಸುವುದಾದರೆ ಜನತಾದಳ (ಜಾತ್ಯಾತೀತ) ಪ್ರಮುಖವಾಗಿ ಪ್ರಭಾವ ಬೀರಿರುವುದು ತಿಳಿದುಬರುತ್ತದೆ. ಗಂಗಾವತಿ ವಿಧಾನಸಭಾ ಕ್ಷೇತ್ರದಿಂದ ಜನತಾದಳ ಜಾತ್ಯಾತೀತ ಅಭ್ಯರ್ಥಿ ಚುನಾಯಿತರಾಗಿದ್ದರು. ಅಲ್ಲದೆ ಸರ್ಕಾರದಲ್ಲಿ ಸಚಿವರಾಗಿ, ಕೊಪ್ಪಳ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಆಡಳಿತ, ಅಭಿವೃದ್ಧಿ ಕಾರ್ಯಗಳು ಮತ್ತು ಮಾಜಿ ಮುಖ್ಯಮಂತ್ರಿಯವರಾದ ಕಾರ್ಯವೈಖರಿಗೆ ಮನಸೋತು ಹೆಚ್ಚಿನ ಅಭ್ಯರ್ಥಿಗಳು ಆ ಪಕ್ಷಕ್ಕೆ ತಮ್ಮ ನಿಷ್ಠೆಯನ್ನು ಹೊಂದಿದ್ದರು. ಹಳೆಯ ಕಾಲದ ಅಥವಾ ಹಿರಿಯ ವಯಸ್ಕರು ಜನತಾದಳ (ಜಾತ್ಯಾತೀತ) ಪಕ್ಷದ ತತ್ವ, ಸಿದ್ಧಾಂತ ಮತ್ತು ಆಡಳಿತ ವೈಖರಿಗೆ ತಮ್ಮ ಬೆಂಬಲವನ್ನು ಸೂಚಿಸುವುದಾಗಿ ತಿಳಿಸುತ್ತಾರೆ. ಈ ಪಕ್ಷವು ಆಯ್ಕೆಯಾದ ಬುಡಕಟ್ಟು ಸದಸ್ಯರಲ್ಲಿ ಮತ್ತಷ್ಟು ಸ್ಫೂರ್ತಿಯನ್ನು ನೀಡಿದೆ. ತಮ್ಮ ಸ್ಥಾನಮಾನ, ಕಾರ್ಯವೈಖರಿ ಎಲ್ಲದರಲ್ಲಿಯೂ ಬದಲಾವಣೆ ತಂದಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಪಕ್ಷದಿಂದ ಆಯ್ಕೆಯಾದ ಹೆಚ್ಚಿನ ಸದಸ್ಯರು ಯಾವುದೇ ಕಾರಣಕ್ಕೂ ಈ ಪಕ್ಷವನ್ನು ತ್ಯಜಿಸುವುದಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜನತಾದಳ (ಜಾತ್ಯಾತೀತ) ಪಕ್ಷದಿಂದ ಒಟ್ಟು ೫೬ ಪರಿಶಿಷ್ಟ ಬುಡಕಟ್ಟಿನ ಸದಸ್ಯರು ಆಯ್ಕೆಯಾಗಿದ್ದಾರೆ. ಇದರಲ್ಲಿ ೩೧ ಜನ ಪುರುಷರು ಮತ್ತು ೨೫ ಜನ ಮಹಿಳೆಯರಿದ್ದಾರೆ.

ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಪ್ರಭಾವ ಬೀರಿರುವ ಮತ್ತೊಂದು ರಾಜಕೀಯ ಪಕ್ಷವೆಂದರೆ ಕಾಂಗ್ರೆಸ್ ಈ ಪಕ್ಷವು ತನ್ನದೇ ಆದ ಐತಿಹಾಸಿಕತೆಯನ್ನು ಹೊಂದಿದೆ. ಗಂಗಾವತಿ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಪ್ರಭಾವಿ ಪಕ್ಷವಾಗಿ ಗುರುತಿಸಿಕೊಂಡಿದೆ. ಈ ಪಕ್ಷದಿಂದ ವಿಧಾನಸಭೆಗೆ ಹಲವು ನಾಯಕರು ಆಯ್ಕೆಯಾಗಿರುವುದು ಕಂಡುಬರುತ್ತದೆ. ಈ ವ್ಯಕ್ತಿಗಳ ಪ್ರಭಾವವು ಮತ್ತು ಪಕ್ಷದ ಸಿದ್ಧಾಂತ, ತತ್ವಗಳು ಪ್ರಭಾವ ಬೀರಿರುವುದು ಕಂಡುಬರುತ್ತದೆ. ತಾಲೂಕಿನ ಗ್ರಾಮ ಪಂಚಾಯತಿಗಳಿಗೆ ಪರಿಶಿಷ್ಟ ಪಂಗಡದಿಂದ ಆಯ್ಕೆಯಾಗಿರುವ ಒಟ್ಟು ೪೧ ಜನ ಸದಸ್ಯರಲ್ಲಿ ೧೮ ಮಹಿಳೆಯರು, ೨೩ ಪುರುಷರು ಆಯ್ಕೆಯಾಗಿರುವುದು ಕಂಡುಬರುತ್ತದೆ. ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಕಾಂಗ್ರೆಸ್ ಪಕ್ಷವು ಎರಡನೇ ದೊಡ್ಡ ಪಕ್ಷವಾಗಿ ಕಂಡುಬಂದಿದೆ.

ಇತ್ತೀಚಿನ ದಿನಗಳಲ್ಲಿ ಪ್ರಭಾವವನ್ನು ಬೀರುತ್ತಿರುವ ಪಕ್ಷವೆಂದರೆ ಭಾರತೀಯ ಜನತಾ ಪಕ್ಷ. ಈ ಪಕ್ಷವು ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಮೂರನೇ ಸ್ಥಾನವನ್ನು ಪಡೆದಿದೆ. ಈ ಪಕ್ಷದಿಂದ ೧೦ ಜನ ಪರಿಶಿಷ್ಟ ಪಂಗಡದ ಮಹಿಳೆಯರು, ೧೫ ಜನ ಪರಿಶಿಷ್ಟ ಪಂಗಡದ

ಪುರುಷರು ಒಟ್ಟು ೨೫ ಜನ ಸದಸ್ಯರು ಗ್ರಾಮ ಪಂಚಾಯತಿಗಳಿಗೆ ಗೆದ್ದು ಬಂದಿರುವುದಾಗಿ ತಿಳಿಸುತ್ತಾರೆ.

ಈ ಮೂರೂ ಪಕ್ಷಗಳಲ್ಲದೆ ಇತರ ಪಕ್ಷಗಳಿಂದ ೧ ಮಹಿಳಾ ಸದಸ್ಯರು ಹಗೂ ೮ ಪುರುಷ ಸದಸ್ಯರು ಒಟ್ಟು ೯ ಜನ ಆಯ್ಕೆಯಾಗಿರುವುದು ಕಂಡುಬರುತ್ತದೆ. ಈ ರೀತಿಯಾಗಿ ಪರಿಶಿಷ್ಟ ಪಂಗಡದ ಸದಸ್ಯರು ವಿವಿಧ ಪಕ್ಷಗಳ ಪ್ರಭಾವದ ಮೂಲಕ ಗ್ರಾಮ ಪಂಚಾಯತಿಗಳಿಗೆ ಆಯ್ಕೆಯಾಗಿರುವುದು ಕಂಡುಬಂದಿದೆ. ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಯಾವುದೇ ರಾಜಕೀಯ ಪಕ್ಷಗಳು ಇಲ್ಲದಿದ್ದರೂ ಪ್ರಜಾ ಪ್ರತಿನಿಧಿಗಳು ತಮ್ಮನ್ನು ಇಂತಹ ಪಕ್ಷದಿಂದ ಗುರ್ತಿಸಿಕೊಳ್ಳುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಪಕ್ಷಗಳ ನಾಯಕರ ಪ್ರಭಾವ ಮತ್ತು ಪಕ್ಷಗಳ ತತ್ವ, ಸಿದ್ಧಾಂತಗಳು ಕಾರಣವಿರಬಹುದು.

೫.೩ ಬುಡಕಟ್ಟು ಜನಪ್ರತಿನಿಧಿಗಳು ಮತ್ತು ಇತರ ಸಮುದಾಯಗಳ ಜನಪ್ರತಿನಿಧಿಗಳ ಸಂಬಂಧ :

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಮೂಲಕ ಆಡಳಿತವನ್ನು ನಡೆಸಲಾಗುತ್ತದೆ. ಈ ಆಡಳಿತ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಮೀಸಲಾತಿಯ ಮೂಲಕ ಎಲ್ಲ ಸಮುದಾಯಗಳಿಗೆ ಆದ್ಯತೆ ನೀಡಲಾಗುತ್ತದೆ. ಸದಸ್ಯರಿಂದ ಹಿಡಿದು ಅಧ್ಯಕ್ಷರ ಸ್ಥಾನದ ವರೆಗೆ ಮೀಸಲಾತಿ ಮೂಲಕವೇ ಎಲ್ಲ ಪ್ರಕ್ರಿಯೆಯು ನಡೆಯುತ್ತದೆ.

ರಾಜಕೀಯ ಆಡಳಿತ ವ್ಯವಸ್ಥೆಯಲ್ಲಿಯೂ ಆಧುನಿಕತೆ ಪ್ರಭಾವ ಬೀರುತ್ತಿರುವ ಪರಿಣಾಮವಾಗಿ ಈಗ ಜನಸಾಮಾನ್ಯರಲ್ಲಿಯೂ ಪ್ರಜ್ಞೆ ಮುಡುತ್ತಿದೆ. ಅನಕ್ಷರಸ್ಥ ಸದಸ್ಯರೂ ಸಹ ತಮ್ಮ ಪಾಲಿನ ಕರ್ತವ್ಯವನ್ನು ಚಲಾಯಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಮೀಸಲಾತಿಯ ಕ್ರಮದಿಂದ ಆಯ್ಕೆಯಾಗಿ ಬರುತ್ತಿರುವ ಸರ್ವ ಸದಸ್ಯರನ್ನು ಒಂದೇ ಸೂರಿನಡಿಯಲ್ಲಿ ಸೇರಿಸುವ ವ್ಯವಸ್ಥೆ ನಿರ್ಮಾಣವಾಗಿದೆ. ಜಾತಿ ಅಸಮಾನತೆ, ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎಂಬ ಭಾವನೆಯನ್ನು ಗಣನೀಯ ಪ್ರಮಾಣದಲ್ಲಿ ತೊಡೆದುಹಾಕಲು ಇಲ್ಲಿ ಪ್ರಯತ್ನಿಸಲಾಗುತ್ತದೆ. ವಂಶ ಪಾರಂಪರ್ಯವಾದ ಆಡಳಿತಕ್ಕೆ ತಿಲಾಂಜಲಿ ಹಚ್ಚಿ ಇಂದಿನ ಗ್ರಾಮ ಪಂಚಾಯತಿ ಮೂಲಕ ಅಧಿಕಾರವನ್ನು ಜಾರಿಗೆ ತಂದಿರುವುದರ ಪರಿಣಾಮವಾಗಿ ಜನಸಾಮಾನ್ಯರು ತಮಗೆ ಸೂಕ್ತವೆನಿಸಿದ ದಕ್ಷ ವ್ಯಕ್ತಿಗಳನ್ನು ತಮ್ಮ ನಾಯಕನನ್ನಾಗಿ ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆ. ನಗರೀಕರಣ ಮತ್ತು ಆಧುನಿಕತೆಯ ಪ್ರಭಾವ ಭಾರತೀಯ ಗ್ರಾಮಗಳ ಮೇಲಾಗಿದ್ದರೂ ಅದರಿಂದ ಸಂಪೂರ್ಣವಾದ ಪರಿವರ್ತನೆ ಸಾಧ್ಯವಾಗಿಲ್ಲ. ಭಾರತದಲ್ಲಿಯ ಗ್ರಾಮಗಳು ಏಕಾಏಕಿ ಬದಲಾವಣೆಯನ್ನು ಬಯಸುವುದಿಲ್ಲ. ದೇಶಕ್ಕೆ ಸ್ವತಂತ್ರ್ಯ ದೊರೆತು ಆರು ದಶಕಗಳಾದರೂ ಗ್ರಾಮೀಣ ಪ್ರದೇಶದಲ್ಲಿ ಜಾತೀಯ ತಾರತಮ್ಯ ಇನ್ನೂ ಕಂಡುಬರುತ್ತಿದೆ. ಪಂಚಾಯತ್ ವ್ಯವಸ್ಥೆ

ಅಸ್ತಿತ್ವಕ್ಕೆ ಬಂದುದರ ಪರಿಣಾಮವಾಗಿ ತಲತಲಾಂತರದಿಂದಲೂ ಮುಂದುವರೆಸಿಕೊಂಡು ಬಂದ ಆಡಳಿತ ವ್ಯವಸ್ಥೆ ಮೂಲೆಗುಂಪಾಯಿತು. ಇದರ ಮೂಲಕ ಹಿಂದುಳಿದ ಸಮುದಾಯಗಳು ಆಡಳಿತವನ್ನು ನಡೆಸುವುದಕ್ಕೆ ವೇದಿಕೆ ನಿರ್ಮಾಣವಾಯಿತು. ಆದರೂ ಈ ಆಡಳಿತ ವ್ಯವಸ್ಥೆಯು ಮುಂದುವರೆದ ವರ್ಗದವರಿಗೆ ಇರಿಸು-ಮುರಿಸು ತಂದಿದೆ. ಕಾರಣವೆಂದರೆ ತಮ್ಮ ಅಡಿಯಾಳಾಗಿ ದುಡಿದ ಕೆಳವರ್ಗದ ವ್ಯಕ್ತಿಗಳು ಇಂದು ಸಮಾನ ಅಂತಸ್ತನ್ನು ಪಡೆಯುವುದನ್ನು ಮೇಲ್ಜಾತಿಗಳು ಸಹಿಸುವುದಿಲ್ಲ. ಗ್ರಾಮೀಣ ಅಭಿವೃದ್ಧಿಗಾಗಿ ಹಮ್ಮಿಕೊಂಡ ಹಲವಾರು ಯೋಜನೆಗಳು ವಿಫಲತೆ ಹೊಂದುವುದಕ್ಕೆ ಇದು ಸಹ ಪ್ರಮುಖ ಅಂಶವಾಗಿದೆ. ಸಮಾಜದಲ್ಲಿ ಜಾತಿ ಸಂಘರ್ಷ ಪ್ರಮುಖವಾಗಿ ಕಂಡುಬರುತ್ತದೆ. ಈ ಸಂಘರ್ಷದಲ್ಲಿ ಜಾತಿ-ಜಾತಿಗಳ ಮಧ್ಯೆ ವೈಮನಸ್ಸು ಸೃಷ್ಠಿಯಾಗಿ ಒಬ್ಬರ ಮೇಲೊಬ್ಬರು ಹಗೆ ಸಾಧಿಸುವುದಕ್ಕೆ ಕಾರಣವಾಗುತ್ತಿದೆ. ಆಡಳಿತ ವ್ಯವಸ್ಥೆಯಲ್ಲಿ ಹಲವಾರು ಕಡೆ ತಾರತಮ್ಯಗಳು ಕಂಡುಬರುತ್ತವೆ.

ಆಡಳಿತ ವಿಕೇಂದ್ರೀಕರಣದಿಂದ ಎಲ್ಲ ವರ್ಗದವರು ಅಧಿಕಾರ ಲಾಭವನ್ನು ಪಡೆದುಕೊಳ್ಳುತ್ತಿದ್ದರೂ ಸಂಪ್ರದಾಯಸ್ಥ ಗ್ರಾಮಗಳಲ್ಲಿ ಕೆಳವರ್ಗದವರು ಅಧಿಕಾರ ಚುಕ್ಕಾಣಿಯನ್ನು ಹಿಡಿದಿದ್ದರೂ ಮೇಲ್ಜಾತಿಯವರ ಆಜ್ಞೆಯಂತೆ ಅಧಿಕಾರವನ್ನು ನಡೆಸುತ್ತಾರೆ. ಕೆಲವರು ಸ್ವಪ್ರಜ್ಞೆಯಿಂದಾಗಿ ತಮ್ಮ ಅಧಿಕಾರವನ್ನು ತಾವೇ ಬಳಸಿಕೊಳ್ಳುತ್ತಿರುವುದು ಸಂತಸದ ವಿಷಯವಾಗಿದೆ. ಶತಶತಮಾನಗಳಿಂದ ಜಾತಿಯಲ್ಲಿ ಮೇಲು-ಕೀಳು ಎಂಬ ಭಾವನೆ ಬೆಳೆದಿತ್ತು. ಈ ವ್ಯವಸ್ಥೆಯಿಂದ ಜಾತಿ-ಜಾತಿಗಳ ನಡುವಿನ ಅಂತರ ಕಡಿಮೆಯಾಗಿ ಮೇಲು-ಕೀಳು ಎನ್ನುವ ಪ್ರಮಾಣ ಮೊದಲಿನಷ್ಟು ಕಂಡುಬರುವುದಿಲ್ಲ. ಹಿಂದುಳಿದ ಮತ್ತು ಮುಂದುವರೆದ ವರ್ಗಗಳ ನಡುವೆ ಸಹಬಾಳ್ವೆಗೆ ಅವಕಾಶವನ್ನು ಕಲ್ಪಿಸಿದೆ. ಆಡಳಿತದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಸುಗಮ ಆಡಳಿತಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಿಂದಾಗ ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಪಂಚಾಯತ್ ರಾಜ್ ವ್ಯವಸ್ಥೆಯ ಆಗಮನದಿಂದಾಗಿ ಜಾತಿ ಪಂಚಾಯತಿಗಳು ಹಿಂದೆ ಸರಿದವು. ಒಂದು ರೀತಿಯಲ್ಲಿ ಹೇಳುವುದಾದರೆ ಜಾತಿ ಪಂಚಾಯತಿ ಹಿಂದೆ ಸರಿದುದರ ಪರಿಣಾಮವಾಗಿ ಸಮಾನತೆಗೂ ಅವಕಾಶವಾಯಿತೆಂದು ಹೇಳಬಹುದು. ಏಕೆಂದರೆ ಈ ಕುಲಪಂಚಾಯತಿಗಳಲ್ಲಿ ಪಂಚರಾಗಿ ಕಾರ್ಯನಿರ್ವಹಿಸುವವರೆಲ್ಲಾ ಆ ಜಾತಿಯ ಹಿರಿಯರೇ ಆಗಿದ್ದರು. ಈ ಹಿರಿಯರು ಹೊಸತನಕ್ಕೆ ಪ್ರಾಮುಖ್ಯತೆ ಕೊಡುತ್ತಿರಲಿಲ್ಲ.

ನಾಗರಿಕ ಸಮಾಜದಿಂದ ದೂರವಿದ್ದ ಬೆಟ್ಟ, ಗುಡ್ಡ, ಆಳವಾದ ಕಣಿವೆ, ದಟ್ಟವಾದ ಅರಣ್ಯ ಪ್ರದೇಶದಲ್ಲಿ ವಾಸವಾಗಿದ್ದ ಬುಡಕಟ್ಟು ಸಮುದಾಯಗಳು ಕಾರಣಾಂತರದಿಂದ ನಾಗರಿಕ ಸಮಾಜದ ಸಂಪರ್ಕಹೊಂದಬೇಕಾಯಿತು. ಈ ಸಂಪರ್ಕದ ಜೊತೆಗೆ ಅವರು ತಮ್ಮ

ಜೀವನವನ್ನು ನಾಗರಿಕ ಸಮುದಾಯಗಳ ಮಧ್ಯೆಯೇ ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಯಿತು. ತಮಗೆ ಇಷ್ಟವಿಲ್ಲದಿದ್ದರೂ ಒತ್ತಾಯಪೂರ್ವಕವಾಗಿ ಬುಡಕಟ್ಟು ಸಮುದಾಯಗಳು ನಾಗರಿಕ ಸಮಾಜದಲ್ಲಿ ನೆಲೆಗೊಳ್ಳುವಂತಾಯಿತು. ನಾಗರಿಕ ಸಮಾಜದಲ್ಲಿ ಇವರು ತೀರಾ ಹಿಂದುಳಿದ ಸಮುದಾಯದವರಾಗಿರಲು ಕಾರಣವೇನೆಂದರೆ ಕಾಡಿನಲ್ಲಿ ವಾಸಿಸುತ್ತಿದ್ದರಿಂದ ಯಾವುದೇ ರೀತಿಯ ಆಸ್ತಿ ಐಶ್ವರ್ಯ, ಸಂಪತ್ತು ಹೊಂದಿದವರಲ್ಲ. ದಿನನಿತ್ಯದ ಹೊಟ್ಟೆಪಾಡಿಗಾಗಿ ಕೂಲಿ ನಾಲಿ ಮಾಡಿ ಜೀವನ ನಿರ್ವಹಿಸುವರು. ಮೀಸಲಾತಿ ವ್ಯವಸ್ಥೆಯಿಂದಾಗಿ ಬುಡಕಟ್ಟು ಸಮುದಾಯಗಳು ರಾಜಕೀಯದಲ್ಲಿ ಪಾಲ್ಗೊಳ್ಳಲು ಅವಕಾಶವಾಯಿತು. ಈ ರಾಜಕೀಯ ಆಡಳಿತದಲ್ಲಿ ಪಾಲ್ಗೊಂಡಾಗ ನಾಮಮಾತ್ರ ಸದಸ್ಯರಾಗಿದ್ದರು. ಇವರ ಅಧಿಕಾರವನ್ನು ಊರಿನ ಪ್ರಮುಖ ವ್ಯಕ್ತಿಗಳು ಅಥವಾ ಪ್ರಭಲ ಸಮುದಾಯದವರು ಬಳಸಿಕೊಳ್ಳುತ್ತಿದ್ದರು. ಸರ್ಕಾರ ಬುಡಕಟ್ಟುಗಳಿಗೆ ಶೈಕ್ಷಣಿಕ, ಆರ್ಥಿಕ, ರಾಜಕೀಯ ಮುಂತಾದ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅವರ ಏಳಿಗೆಗೆ ಶ್ರಮಿಸಿತು. ಈ ಸಮುದಾಯಗಳನ್ನು ಕುರಿತು ಹೆಚ್ಚಿನ ಪ್ರಮಾಣದ ಅಧ್ಯಯನಗಳು ನಡೆಯುತ್ತಿವೆ. "ಇನ್ನು ಆಧುನಿಕ ಜಗತ್ತಿನ ಎಲ್ಲ ಆಕ್ರಮಣಗಳಿಗೆ ನಮ್ಮ ಸಮುದಾಯಗಳ ಪರಂಪರೆಯ ಹತ್ಯಾರಗಳು ರೂಪಗೊಳ್ಳುತ್ತಿವೆ ಎಂಬ ನಂಬಿಕೆ ನಮ್ಮ ಅಧ್ಯಯನಗಳ ಹಿಂದೆ ಕೆಲಸ ಮಾಡುತ್ತಿದೆ. ಹೀಗಾಗಿ ಕೆಳ ಜಾತಿಗಳ ಆದಿವಾಸಿಗಳ ಸಾಂಸ್ಕೃತಿಕ ಜಗತ್ತು ಸಂಪದ್ಭರಿತವಾದದ್ದು. ಅದೊಂದು ಸಂತೃಪ್ತ ಲೋಕ ಸಂಘರ್ಷಗಳೇ ಇಲ್ಲದ ನಿರುಮ್ಮಳ ಜಗತ್ತು ಎಂದು ಪರಿಣಿತವಾಗಿದೆ. 'ಉಪಸಂಸ್ಕೃತಿ ಮಾಲೆ'ಯ ಮತ್ತು ಇತ್ತೀಚಿನ ಬಹುಪಾಲು ಅಧ್ಯಯನಗಳು ಇದೇ ಮಾದರಿಯವು. ಈ ಎಲ್ಲ ಅಧ್ಯಯನಕಾರರು ಭಾರೀ ಶ್ರದ್ಧೆಯಿಂದ ಸಮುದಾಯಗಳನ್ನು ಅಧ್ಯಯನ ಮಾಡಿದ್ದಾರೆ ಎಂಬುವುದರಲ್ಲಿ ಎರಡು ಮಾತಿಲ್ಲ."[2] ಈ ರೀತಿಯ ಅಧ್ಯಯನದಿಂದಾಗಿ ಸಮುದಾಯಗಳ ಬೇಕು ಬೇಡಗಳನ್ನು ಈಡೇರಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತಿದೆ. ಹೀಗಾಗಿ ಬುಡಕಟ್ಟು ಸಮುದಾಯಗಳು ಅಲ್ಪ ಮಟ್ಟಿಗೆ ಮುಂದುವರೆಯಲು ಸಾಧ್ಯವಾಗುತ್ತಿದೆ. ಇವರ ಆಡಳಿತವನ್ನು ಬುಡಕಟ್ಟು ರಾಜಕೀಯದಲ್ಲಿ ಸಮರ್ಪಕವಾಗಿ ಭಾಗವಹಿಸುವುದರ ಸಲುವಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಡಾ॥ ಗಂಗಾಧರ ದೈವಜ್ಞರವರ ಮಾರ್ಗದರ್ಶನದಲ್ಲಿ ರಾಜ್ಯದ ವಿವಿಧ ಬುಡಕಟ್ಟು ಪ್ರಜಾಪ್ರತಿನಿಧಿಗಳ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳುವುದರ ಮೂಲಕ ಅವರಲ್ಲಿ ರಾಜಕೀಯದಲ್ಲಿ ಬುಡಕಟ್ಟುಗಳ ಭಾಗವಹಿಸುವಿಕೆ ಮತ್ತು ನಾಯಕತ್ವವನ್ನು ಬೆಳೆಸಲು ಪ್ರಯತ್ನಿಸಲಾಗುತ್ತಿದೆ. ಇಂತಹ ಅತ್ಯುತ್ತಮ ಕಾರ್ಯಕ್ರಮಗಳಿಂದ ಬುಡಕಟ್ಟು ಸಮುದಾಯಗಳು ರಾಜಕೀಯದಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸಲು ಸಾಧ್ಯವಾಗುತ್ತಿದೆ ಎಂದು ಕಲ್ಪಿಸಲಾಗುತ್ತಿದೆ.

ಗಂಗಾವತಿ ತಾಲೂಕಿನ ೩೮ ಗ್ರಾಮ ಪಂಚಾಯತಿಗಳಲ್ಲಿ ಮೀಸಲಾತಿಯ ಮೂಲಕ ೧೩೧ ಜನ ಸದಸ್ಯರು ಪರಿಶಿಷ್ಟ ಪಂಗಡದಿಂದ ಆಯ್ಕೆಯಾಗಿದ್ದಾರೆ. ಅಧ್ಯಯನಕ್ಕಾಗಿ ೧೦೦ ಜನರನ್ನು ಸಂದರ್ಶಿಸಲಾಗಿದೆ. ಸಂದರ್ಶನಕ್ಕೆ ಒಳಪಟ್ಟ ೧೦೦ ಜನ ಬುಡಕಟ್ಟು ಜನಪ್ರತಿನಿಧಿಗಳಲ್ಲಿ ೭೩ ಸದಸ್ಯರು ಇತರೆ ಸಮುದಾಯ ಸದಸ್ಯರು ತಮ್ಮನ್ನು ಸರಿಯಾಗಿ ಕಾಣುತ್ತಾರೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅಲ್ಲದೆ ತಮ್ಮ ಅಧಿಕಾರವನ್ನು ತಾವೇ ಚಲಾಯಿಸುವುದಾಗಿ ತಿಳಿಸುತ್ತಾರೆ. ಇತರೆ ೧೪ ಜನ ಬುಡಕಟ್ಟು ಪ್ರತಿನಿಧಿಗಳು ತಮ್ಮನ್ನು ಅನ್ಯ ಜಾತಿಯರನ್ನಾಗಿ ಪರಿಗಣಿಸಿ ನಿರ್ಲಕ್ಷಿಸುತ್ತಾರೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೂ ತಮ್ಮ ಅಧಿಕಾರವನ್ನು ತಾವೇ ಚಲಾಯಿಸುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇತರ ೧೦ ಜನ ಪರಿಶಿಷ್ಟ ಪಂಗಡದ ಸದಸ್ಯರು ತಮ್ಮನ್ನು ಅನ್ಯರಾಗಿ ಪರಿಗಣಿಸಿ ಜೊತೆಗೆ ತಮ್ಮ ಅಧಿಕಾರವನ್ನು ಇತರ ಸಮುದಾಯದ ಸದಸ್ಯರೇ ನಡೆಸುತ್ತಾರೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇತರ ೩ ಜನ ಸದಸ್ಯರು ತಟಸ್ಥವಾಗಿದ್ದರು. ಇದರ ಸ್ಪಷ್ಟ ಅಂಕಿಸಂಖ್ಯೆಯನ್ನು ಈ ಕೋಷ್ಟಕದ ಮೂಲಕ ನೋಡಬಹುದಾಗಿದೆ.

ಕ್ರ.ಸಂ.	ಬುಡಕಟ್ಟು ಮತ್ತು ಬುಡಕಟ್ಟೇತರ ಸಮುದಾಯಗಳ ಸಂಬಂಧಗಳು	ಬುಡಕಟ್ಟು ಪ್ರಜಾಪ್ರತಿನಿಧಿಗಳ ಅಭಿಪ್ರಾಯಗಳು
೧.	ಅನ್ಯ ಸಮುದಾಯದವರು ಸರಿಯಾಗಿ ಕಾಣುತ್ತಾರೆ.	೭೩
೨.	ಅನ್ಯ ಜಾತಿಯರನ್ನಾಗಿ ಪರಿಗಣಿಸುತ್ತಾರೆ.	೧೪
೩.	ಅನ್ಯರಾಗಿ ಪರಿಗಣಿಸಿ ತಮ್ಮ ಅಧಿಕಾರವನ್ನು ಇತರ ಸಮುದಾಯದವರು ಚಲಾಯಿಸುತ್ತಾರೆ.	೧೦
೪.	ತಟಸ್ಥವಾಗಿದ್ದವರು	೦೩

ಮೀಸಲಾತಿಯ ಪ್ರಕ್ರಿಯೆಯಿಂದಾಗಿ ವಿವಿಧ ಸಮುದಾಯಗಳು ಅಧಿಕಾರ ವಿಕೇಂದ್ರೀಕರಣವನ್ನು ಅನುಸರಿಸುತ್ತಿವೆ. ಈ ಮೀಸಲಾತಿ ಪ್ರಕ್ರಿಯೆಯಿಂದಾಗಿ ಎಲ್ಲ ಸಮುದಾಯಗಳು ಕೂಡಿಕೊಂಡು ಅಧಿಕಾರ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಜಾತಿಯ ತಾರತಮ್ಯ ಮಾಯವಾಗಿ ಅವರವರ ಅಧಿಕಾರವನ್ನು ಅವರೇ ನಿರ್ವಹಿಸುತ್ತಿರುವುದು ಪ್ರಮುಖವಾಗಿ ಕಂಡುಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಅನ್ಯ ಸಮುದಾಯಗಳು ಮಧ್ಯ ಇನ್ನು ಹೆಚ್ಚಿನ ಪ್ರಮಾಣದ ಸಾಮರಸ್ಯ ಮೂಡಿ ಐಕ್ಯತೆಯ ಭಾವನೆ ಬೆಳೆಯಬೇಕಾಗಿರುವುದು ಅವಶ್ಯವಾಗಿದೆ.

೫.೪ ಚುನಾವಣೆಯಲ್ಲಿ ಬುಡಕಟ್ಟುಗಳ ಪಾಲ್ಗೊಳ್ಳುವಿಕೆ :

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಅಮೇರಿಕಾದ ಮಾಜಿ ಅಧ್ಯಕ್ಷರಾದ ಅಬ್ರಾಹಂ ಲಿಂಕನ್ ಅಭಿಪ್ರಾಯದಂತೆ "ಪ್ರಜೆಗಳಿಂದ, ಪ್ರಜೆಗಳಿಗೋಸ್ಕರ ನಡೆಯುವ ಆಡಳಿತ ವ್ಯವಸ್ಥೆಯೇ ಪ್ರಜಾಪ್ರಭುತ್ವ" ಸಂವಿಧಾನದಲ್ಲಿ ಮತದಾನವನ್ನು ರಾಜಕೀಯ ಹಕ್ಕಾಗಿ ಪರಿಗಣಿಸಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯು ಪ್ರಾಚೀನ ಕಾಲದಲ್ಲೂ ಗ್ರೀಕ್ ದೇಶದಲ್ಲಿ ಅಸ್ತಿತ್ವದಲ್ಲಿತ್ತು ಎಂಬುದು ತಿಳಿದುಬರುತ್ತದೆ. ಈ ಮತದಾನದ ಹಕ್ಕನ್ನು ವಯಸ್ಕರಾದ ೧೮ ವರ್ಷ ವಯೋಮಿತಿಯನ್ನು ಹೊಂದಿದ ಎಲ್ಲ ಭಾರತೀಯ ನಾಗರಿಕರು ಅರ್ಹರಾಗಿದ್ದಾರೆ. ಗ್ರಾಮ ಪಂಚಾಯತಿಯ ಚುನಾವಣೆಯಿಂದ ಹಿಡಿದು ಲೋಕಸಭೆಯ ಚುನಾವಣೆಯವರೆಗೂ ರಾಜಕೀಯ ಪಕ್ಷಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಚುನಾವಣೆ ಎಂದರೆ ಪ್ರತಿನಿಧಿಗಳನ್ನು ಆರಿಸುವುದು ಎನ್ನುವ ಅರ್ಥವನ್ನು ನೀಡುತ್ತದೆ. "ಚುನಾವಣೆ ಎಂಬ ಪದವು 'ಚುನಾವ್' ಎಂಬ ಪದದಿಂದ ಉದ್ಭವವಾಗಿದೆ. ಚುನಾವ್ ಎಂದರೆ ತಮಗೆ ಬೇಕಾದವರನ್ನು ಆಯ್ಕೆ ಮಾಡುವುದು. ಇಂಗ್ಲೀಷ್‌ನಲ್ಲಿ ಇದನ್ನು ಎಲೆಕ್ಷನ್ ಎನ್ನುತ್ತಾರೆ. 'ಚುನಾವ್' ಎಂಬ ಪದಕ್ಕೆ ಎಲೆಕ್ಟ್ (Elect) ಎಂಬುದು ಸಮಾನ ಪದ. ಓಟುಗಳ ಮೂಲಕ ಪ್ರತಿನಿಧಿಗಳನ್ನು ಅಥವಾ ಸ್ಪರ್ಧಿಗಳನ್ನು ಆರಿಸುವ ಕ್ರಮವನ್ನು ಎಲೆಕ್ಷನ್ ಎಂದು ಕರೆಯಬಹುದು."[೮] ಪ್ರಜಾಪ್ರಭುತ್ವದಲ್ಲಿ ಚುನಾವಣೆ ನಡೆಯದೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವ ಮತ್ತು ಚುನಾವಣೆಗಳು ಒಂದಕ್ಕೊಂದು ನಿಕಟ ಸಂಬಂಧವನ್ನು ಹೊಂದಿವೆ.

ಭಾರತದ ಸಂವಿಧಾನದ ರಚನೆಯ ಸಂದರ್ಭದಲ್ಲಿ ಎಲ್ಲ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡು ಮೀಸಲಾತಿಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಸೌಲಭ್ಯದಿಂದಾಗಿ ಎಲ್ಲ ಸಮುದಾಯಗಳ ಜನರು ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಗೊಳ್ಳುತ್ತಿದ್ದಾರೆ. ಈ ಸೌಲಭ್ಯವಿಲ್ಲದಿದ್ದರೆ ಹಲವಾರು ಹಿಂದುಳಿದ ಸಮುದಾಯಗಳು ರಾಜಕೀಯವಾಗಿ ಮೂಲೆಗುಂಪಾಗುತ್ತಿದ್ದವು ಎನ್ನುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ "ತಕ್ಕಮಟ್ಟಿಗೆ ಮೀಸಲಾತಿಯು ಉಪಯೋಗಕ್ಕೆ ಬರುತ್ತದೆ. ಜಾತಿಯೊಳಗಿನ ಅಂತರದ ಬಿರುಕು ಕಡಿಮೆ ಇದೆ. ಪರಿಶಿಷ್ಟರು ಮತ್ತು ಮಹಿಳೆಯರ ಸಂದರ್ಭದಲ್ಲಿ ಬಹುಪಾಲು ಉತ್ತರವೇ ಮೀಸಲಾತಿಯಲ್ಲದೆ ಬೇರೇನು ಎಂಬುದು ವಾಸ್ತವ. ಊರ ಯಜಮಾನರ ಗಂಡಂದಿರ ಇಲ್ಲವೇ ಸಮುದಾಯದ ಮೇಲ್ನೋಟಕ್ಕೆ ಕಾಣಸಿಗುವ ಉತ್ತರವೇ ಮೀಸಲಾತಿಯಾಗಿದೆ. ಯಾಕೆಂದರೆ ಮಹಿಳೆಯರ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಗ್ರಾಮ ಪಂಚಾಯತ್ ಚುನಾವಣೆ ಸಂದರ್ಭದಲ್ಲಿ ಮಹಿಳೆಗೆ ಹಣಕಾಸು ಒದಗಿಸಿದ ಇಲ್ಲವೆ ಪಕ್ಷ ಪ್ರೇರಿತ ಅಭ್ಯರ್ಥಿಗಳನ್ನು ನಿಲ್ಲಿಸಿರುವುದು ತೀರಾ ವಿರಳ.

ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳಿಗೆ ಅಧಿಕೃತವಾದ ೧೯೯೩ ರ ಕಾಯ್ದೆ ಮತ್ತು ನಂತರದ ಚುನಾವಣೆಗಳಲ್ಲಿ ಮಾನ್ಯ ಮಾಡಿಲ್ಲ. ಇದರರ್ಥ ರಾಜಕೀಯ ಪಕ್ಷಗಳ ಪ್ರವೇಶವಿಲ್ಲವೆಂದಲ್ಲ."[೯] ಹೆಚ್ಚಿನ ಪ್ರಮಾಣದ ಅಭ್ಯರ್ಥಿಗಳು ರಾಜಕೀಯ ಪಕ್ಷಗಳ ಮೂಲಕ ಆಯ್ಕೆಯನ್ನು ಬಯಸಿ ಸ್ಪರ್ಧಿಸುತ್ತಿದ್ದಾರೆ. ಗ್ರಾಮ ಪಂಚಾಯತಿ ಚುನಾವಣೆಯೂ ಸಹ ರಾಜಕೀಯ ಪಕ್ಷಗಳಿಗೆ ಪ್ರತಿಷ್ಠಿತ ವಿಷಯವಾಗಿದೆ. "೧೯೯೨ ರ ಸಂವಿಧಾನದ ತಿದ್ದುಪಡಿ ಕಾಯ್ದೆಯು ಪಂಚಾಯತ್ ರಾಜ್ ಸಂಸ್ಥೆಗಳಲ್ಲೊಂದು ಅಪರೂಪದ ಮೈಲುಗಲ್ಲಾಗಿ ಪರಿಣಮಿಸಿತು. ಇದರಿಂದಾಗಿ ಪಂಚಾಯತ್‌ಗಳು ಸಂವಿಧಾನಿಕ ಮನ್ನಣೆ ಪಡೆದವೆಲ್ಲ ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ೧೯೯೩ ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ಜಾರಿಗೆ ತಂದಿತು. ಇದರಂತೆ ೧೯೯೩ ರ ಡಿಸೆಂಬರ್‌ನಲ್ಲಿ ಗ್ರಾಮ ಪಂಚಾಯತಿಗಳಿಗೆ ಚುನಾವಣೆಗಳು ನಡೆದವು."[೧೦] ಈ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ತಮ್ಮದೇ ಆದ ಅಭ್ಯರ್ಥಿಗಳನ್ನು ನಿಲ್ಲಿಸುವುದರ ಮೂಲಕ ಆಡಳಿತ ಚುಕ್ಕಾಣಿ ಹಿಡಿಯಲು ಪ್ರಯತ್ನಿಸಿರುವುದು ಕಂಡುಬರುತ್ತಿದೆ.

ಮೀಸಲಾತಿಗೆ ಅನುಗುಣವಾಗಿ ಆಯಾ ಜಾತಿಯ ಅಭ್ಯರ್ಥಿಗಳೇ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆ. ಹೀಗೆ ಮೀಸಲಾತಿಯಲ್ಲಿ ಒಂದೇ ಜಾತಿಯ ಹಲವಾರು ಅಭ್ಯರ್ಥಿಗಳು ಸ್ಪರ್ಧಿಸಿದ್ದರೂ ಅದೇ ಜಾತಿಯ ಒಬ್ಬ ವ್ಯಕ್ತಿ ಆಯ್ಕೆಯಾಗುವುದು ಖಚಿತ. ಸಾಮಾನ್ಯ ವರ್ಗದ ಅಭ್ಯರ್ಥಿಗಳ ಕ್ಷೇತ್ರದಲ್ಲಿಯೂ ಪರಿಶಿಷ್ಟ ಪಂಗಡ ಅಥವಾ ಇತರೆ ಅಭ್ಯರ್ಥಿಗಳು ಸ್ಪರ್ಧಿಸಬಹುದಾಗಿದೆ. ಮೀಸಲು ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿ ಯಾವ ಸಮುದಾಯದವರು ಬೇಕಾದರೂ ಸ್ಪರ್ಧಿಸಬಹುದು. "ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಬುಡಕಟ್ಟುಗಳ ಅಭಿವೃದ್ಧಿಯ ಕುರಿತು ಎರಡು ಮಹತ್ವದ ದೃಷ್ಟಿಕೋನಗಳು ಹೊರಹೊಮ್ಮಿವೆ. ಮೊದಲನೆಯ ದೃಷ್ಟಿಕೋನವು ಪ್ರಜಾಪ್ರಭುತ್ವದಲ್ಲಿ ಅಭಿವೃದ್ಧಿಯ ಸರ್ಕಾರದ ಕರ್ತವ್ಯ ಹಾಗೂ ನಿರೀಕ್ಷೆಯೆಂದು ವಾದಿಸುತ್ತದೆ. ಈ ಮಾದರಿಯ ಬುಡಕಟ್ಟಿನ ಅಭಿವೃದ್ಧಿಯ ಎಲ್ಲ ಜವಾಬ್ದಾರಿಗಳನ್ನು ಸರ್ಕಾರದ ನಿರ್ವಹಣೆಗೆ ಬಿಡುತ್ತದೆ. ಎರಡನೆಯ ದೃಷ್ಟಿಕೋನವು "ಜನಪರ ಅಭಿವೃದ್ಧಿಯಲ್ಲಿ ಜನಸಾಮಾನ್ಯರ ಭಾಗವಹಿಸುವಿಕೆ ಅತ್ಯಂತ ಮಹತ್ವದ್ದು." ಎಂಬ ಪ್ರಮೇಯವನ್ನು ಮುಂದಿಡುತ್ತದೆ. ಈ ದೃಷ್ಟಿಕೋನವನ್ನು ಆಧರಿಸಿ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವುದನ್ನು ನಿರ್ಲಕ್ಷಿಸಲಾಗುತ್ತಿದೆ. ಬುಡಕಟ್ಟುಗಳ ಸದಸ್ಯರು ಸಾಮಾನ್ಯವಾಗಿ ಹೊರ ಜಗತ್ತಿನ ಸಂಪರ್ಕವು ಅಷ್ಟಾಗಿ ಇರದವರಾಗಿರುವುದರಿಂದ ಸ್ಥಳೀಯ ಸೇವಾ ಸಂಸ್ಥೆಗಳನ್ನು ಅಭಿವೃದ್ಧಿ ಕಾರ್ಯದಲ್ಲಿ ಸೇರಿಸಿಕೊಳ್ಳುವ ವಿಚಾರ ಸ್ವಾಗತಾರ್ಹ. ಆದರೆ ಇಂತಹ ಸಂಸ್ಥೆಗಳ ಪೂರ್ವಾಪರಗಳ ಮಾಹಿತಿ, ಅವರಿಗಿರುವ ಸೇವಾ ನಿಷ್ಠೆ ಮೊದಲಾದ ಅಂಶಗಳನ್ನು ಕೂಲಂಕುಶವಾಗಿ ಪರಿವೀಕ್ಷಿಸಿಯೇ

ಬಡುಕಟ್ಟು ಸಮಗ್ರ ಅಭಿವೃದ್ಧಿಯ ಕೆಲಸವನ್ನು ಅವರೊಂದಿಗೆ ಸೇರಿ ಮಾಡುವುದು ಸೂಕ್ತ."[೧೧] ಈ ರೀತಿಯಾದ ಪ್ರಯತ್ನಗಳ ಬುಡಕಟ್ಟುಗಳ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.

ಚುನಾವಣೆ ಎಂದರೆ ರಾಜಕೀಯ ಪಕ್ಷಗಳಿಗೆ, ಪ್ರತಿಷ್ಠಿತ ವ್ಯಕ್ತಿಗಳಿಗೆ ಮತ್ತು ಸ್ಪರ್ಧಿಗಳಿಗೆ ಜಿದ್ದಾಜಿದ್ದಿನ ವಿಷಯವಾಗಿದೆ. ಚುನಾವಣೆ ಪೂರ್ವದಿಂದಲೇ ಎಲ್ಲ ರೀತಿಯ ತಯಾರಿಗಳನ್ನು ಪಕ್ಷಗಳು ಮತ್ತು ಅಭ್ಯರ್ಥಿಗಳು ಮಾಡಿಕೊಂಡಿರುತ್ತಾರೆ. ಚುನಾವಣೆಯ ಸಂದರ್ಭದಲ್ಲಿ ವಿವಿಧ ಪಕ್ಷಗಳು, ವಿವಿಧ ಸ್ಪರ್ಧಿಗಳು ತಮ್ಮದೇ ಆದ ಪ್ರಭಾವದ ಮೂಲಕ ಗುರುತಿಸಿಕೊಳ್ಳುತ್ತಿರುತ್ತಾರೆ. ಚುನಾವಣೆಯಲ್ಲಿ ಎಲ್ಲ ಸಮುದಾಯದ ವ್ಯಕ್ತಿಗಳು ತಮ್ಮತಮ್ಮ ಪರವಾದ ವ್ಯಕ್ತಿ ಮತ್ತು ಪಕ್ಷಗಳ ಗೆಲುವಿಗಾಗಿ ಪ್ರಯತ್ನಿಸುತ್ತಿರುತ್ತಾರೆ. ನಾಗರಿಕ ಸಮಾಜದಿಂದ ದೂರವಿದ್ದಂತಹ ಬುಡಕಟ್ಟು ಸಮುದಾಯಗಳು ಇಂದು ನಾಗರಿಕ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡು ಆಡಳಿತದಲ್ಲಿ ಪಾಲ್ಗೊಳ್ಳುತ್ತಿವೆ. ಈ ಪಾಲ್ಗೊಳ್ಳುವಿಕೆಯಿಂದ ಬುಡಕಟ್ಟು ಸಮುದಾಯಗಳು ರಾಜಕೀಯ ಪ್ರಾತಿನಿಧ್ಯ ಪಡೆಯುತ್ತಿರುವುದಕ್ಕೆ ನಿದರ್ಶನವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಗಿಂತ ಮುಂಚೆ ಆದಿವಾಸಿಗಳು ತಮ್ಮದೇ ಆದ ನ್ಯಾಯ ವ್ಯವಸ್ಥೆಯನ್ನು ಒಳಗೊಂಡಿದ್ದವು. ಅಲ್ಲದೆ ತಮ್ಮದೇ ಆದ ಕಾನೂನುಗಳನ್ನು ಸಹ ರೂಢಿಸಿಕೊಂಡು ಆಳ್ವಿಕೆಯನ್ನು ನಡೆಸುತ್ತಿದ್ದವು. ಉದಾಹರಣೆಗೆ "ಪಶ್ಚಿಮ ಬಂಗಾಳದ ಹಿಮಾಲಯ, ಜಲ್‌ಬಯ್‌ಗುಡಿ ಜಿಲ್ಲೆಯಲ್ಲಿ ನೆಲೆಸಿರುವ ಸುಮಾರು ೫೦೦ ಜನರಿರುವ ಟೋಟೋಗಳೆಂಬ ಸಣ್ಣ ಬುಡಕಟ್ಟು ಶಾಂತಿಯನ್ನು ಕಾಪಾಡಲು ತನ್ನದೇ ಆದ ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳನ್ನೊಳಗೊಂಡಿದೆ."[೧೨] ಆದರೆ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವಕ್ಕೆ ಬರುವುದರ ಮೂಲಕ ಸಾರ್ವತ್ರಿಕ ನ್ಯಾಯ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. ಇದರ ಪರಿಣಾಮವಾಗಿ ಬುಡಕಟ್ಟು ಸಮುದಾಯಗಳು ಸಹ ಮುಂದುವರೆದ ಸಮುದಾಯಗಳಂತೆ ಗುರುತಿಸಿಕೊಳ್ಳಲು ಪ್ರಯತ್ನ ಮಾಡುತ್ತಿವೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಗಂಗಾವತಿ ತಾಲೂಕಿನಲ್ಲಿರುವ ವಿಶಿಷ್ಟ ಸಮುದಾಯಗಳೆಂದರೆ, ಮೇದಾರ, ಊರ ಗೌಳಿಗರು, ವೇಷಗಾರರು, ಗೊಲ್ಲರು ಮತ್ತು ನಾಯಕರು. ಈ ಸಮುದಾಯಗಳಲ್ಲಿ ನಾಯಕರು ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ. ಮೇದಾರರನ್ನು ಭಾರತ ಸರ್ಕಾರ ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದರೂ ಸಹ ತಾಲೂಕಿನಲ್ಲಿ ಅವರನ್ನು ಪರಿಶಿಷ್ಟ ಪಂಗಡದವರೆಂದು ಪರಿಗಣಿಸಿಲ್ಲ ಎಂಬುದು ಕಂಡುಬರುತ್ತದೆ. ಗೌಳಿಗರ ಸಮುದಾಯವು ಗಂಗಾವತಿ ತಾಲೂಕಿನ ವಿಶಿಷ್ಟ ಸಮುದಾಯಗಳಲ್ಲಿ ಒಂದಾಗಿದೆ. ಇವರ ಆಚರಣೆಯು ಸಹ ವೈಶಿಷ್ಟ್ಯತೆಯಿಂದ ಕೂಡಿದೆ. ಆಷಾಡ ಮಾಸದಲ್ಲಿ ಗೌಳಿಗರು ಜಾತ್ರೆಯನ್ನು ಆಚರಿಸುತ್ತಾರೆ. "ಈ ಸಂದರ್ಭದಲ್ಲಿ ಯಾವ ಗುಡಿ–ಗುಂಡಾರಗಳಲ್ಲಿ ಜಾತ್ರೆ, ಉತ್ಸವ ಆಚರಣೆ ಅಲಂಕಾರವನ್ನು ಮಾಡುವುದಿಲ್ಲ. ಕಛೇರಿ, ನೂತನ ವ್ಯಾಪಾರ ವಹಿವಾಟು ಆರಂಭ ಮತ್ತು ಶುಭ ಕಾರ್ಯಗಳಿಗೆ ಮುಹೂರ್ತ ನಿಗದಿ ಮೊದಲಾದವು

ಮುಂದೂಡಲಾಗುತ್ತದೆ."[೧೩] ಇವರು "ಬಿಜಾಪುರದ ಆದಿಲ್‌ಷಾಹಿ ಸುಲ್ತಾನರ ಕಾಲದಲ್ಲಿ ಅವರ ದನಕರುಗಳನ್ನು ಸಾಕುವ ಮತ್ತು ಹೈನೋತ್ಪಾದಕ ವಸ್ತುಗಳನ್ನು ಮಾರಿ ಜೀವನ ನಡೆಸುತ್ತಿದ್ದ ಜನಾಂಗವಿತ್ತು."[೧೪] ಈ ಸಮುದಾಯದವರು ಗಂಗಾವತಿ ತಾಲೂಕಿನ ತಮ್ಮದೇ ಆದ ರಾಜಕೀಯ ಪ್ರಭಾವವನ್ನು ಹೊಂದಿದ್ದಾರೆ. ಈ ಸಮುದಾಯದ ಮಹಾದೇವಪ್ಪ ಅವರು ಗಂಗಾವತಿ ವಿಧಾನಸಭ ಕ್ಷೇತ್ರಕ್ಕೆ ಆಯ್ಕೆಯಾಗಿದ್ದರು. ಇವರು ತಮ್ಮ ಸಮುದಾಯದ ಹೆಸರಿನಿಂದಲೇ ಪ್ರಖ್ಯಾತರಾಗಿದ್ದವರು. ಇವರನ್ನು 'ಗೌಳಿ ಮಹಾದೇವಪ್ಪ' ಎಂದು ಗುರುತಿಸಿದ್ದಾರೆ. ಗಂಗಾವತಿ ನಗರದಲ್ಲಿಯೇ ಸುಮಾರು ೭೦ ಕ್ಕೂ ಅಧಿಕ ಮೇದಾರ ಕುಟುಂಬಗಳಿವೆ. ಆದರೆ ಬುಡಕಟ್ಟುಗಳ ಎಲ್ಲ ಲಕ್ಷಣಗಳನ್ನು ಉಳಿಸಿಕೊಂಡಿವೆ. ಇವರು ತಮ್ಮದೇ ಆದ ಜಾತಿ ಪಂಚಾಯತಿ ವ್ಯವಸ್ಥೆಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ತಮ್ಮ ಜಾತಿಯ ನ್ಯಾಯ ನಿರ್ಣಯಗಳನ್ನು ಈ ಜಾತಿ ಪಂಚಾಯತಿಯಲ್ಲಿಯೇ ಬಗೆಹರಿಸಿಕೊಳ್ಳುವುದು ಕಂಡುಬರುತ್ತದೆ. ಈ ಸಮುದಾಯದಿಂದ ಒಬ್ಬ ವ್ಯಕ್ತಿಯು ನಗರಸಭೆಗೆ ಆಯ್ಕೆಯಾಗುವುದರ ಮೂಲಕ ತಮ್ಮದೇ ಆದ ರಾಜಕೀಯ ಪ್ರಾತಿನಿಧ್ಯವನ್ನು ಬೆಳಸಿಕೊಂಡಿದ್ದಾರೆ. ವೇಷಗಾರರ ಸಮುದಾಯವು ಹುಲಿಹೈದರ, ಸಿದ್ದಾಪುರ ಮುಂತಾದ ಪ್ರದೇಶಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಈ ಸಮುದಾಯವು ಆರ್ಥಿಕವಾಗಿ ತನ್ನದೇ ಆದ ಪ್ರಾಬಲ್ಯತೆಯನ್ನು ಹೊಂದಿದೆ ಮತ್ತು ರಾಜಕೀಯವಾಗಿಯೂ ಪ್ರಾತಿನಿಧ್ಯವನ್ನು ಪಡೆದುಕೊಂಡಿದೆ. ೨೦೦೮ ರಲ್ಲಿ ಕನಕಗಿರಿ ವಿಧಾನಸಭಾ ಕ್ಷೇತ್ರದಿಂದ ವೇಷಗಾರ ಸಮುದಾಯದ ಅಭ್ಯರ್ಥಿಯೊಬ್ಬ ಸ್ಪರ್ಧಿಸಿದ್ದು ತಿಳಿದುಬರುತ್ತದೆ. ಗೊಲ್ಲರ ಸಮುದಾಯವು ಗಂಗಾವತಿ ತಾಲೂಕಿನ ಕನಕಗಿರಿ, ಗೌರಿಪುರ ಮುಂತಾದ ಕೆಲವು ಸ್ಥಳಗಳಲ್ಲಿ ದಟ್ಟವಾಗಿ ಕಂಡುಬರುತ್ತಾರೆ. ಈ ಸಮುದಾಯವು ಆರ್ಥಿಕವಾಗಿ, ರಾಜಕೀಯವಾಗಿ ಅಷ್ಟೇನೂ ಮುಂದುವರೆದ ಸಮುದಾಯವಾಗಿಲ್ಲ. ಈ ತಾಲೂಕಿನಲ್ಲಿ ನಾಯಕ ಸಮುದಾಯವನ್ನು ಮಾತ್ರ ಪರಿಶಿಷ್ಟ ಪಂಗಡ ಎಂದು ಗುರುತಿಸುವುದರಿಂದ ಏಕೈಕ ಸಮುದಾಯವಾಗಿದೆ. ನಾಯಕ ಸಮುದಾಯವು ರಾಜಕೀಯವಾಗಿ ತನ್ನದೇ ಆದ ಪ್ರಭಾವವನ್ನು ಹೊಂದಿದೆ. ಗಂಗಾವತಿ ತಾಲೂಕಿನ ೧೩೧ ಪರಿಶಿಷ್ಟ ಪಂಗಡ ಸದಸ್ಯರಲ್ಲಿ ಎಲ್ಲರೂ ನಾಯಕ ಸಮುದಾಯದವರೇ ಆಗಿದ್ದಾರೆ. ಈ ಸಮುದಾಯಗಳು ಹಲವಾರು ರಾಜಕೀಯ ಪಕ್ಷಗಳಿಂದ ಆರಿಸಿ ಬಂದವರು ಎಂಬುದನ್ನು ಈಗಾಗಲೇ ತಿಳಿಸಲಾಗಿದೆ. ಚುನಾವಣೆಯ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಅಭ್ಯರ್ಥಿಗಳನ್ನು ಆಯಾ ಕ್ಷೇತ್ರಕ್ಕೆ ನಿಲ್ಲಿಸಿ ಬ್ಯಾನರ್ ಹಾಗೂ ಪೋಸ್ಟರ್ ಕಟ್ಟುವುದು, ಹಂಚುವುದು ತಮ್ಮ ಪಕ್ಷದ ಪ್ರಭಾವಿ ನಾಯಕರನ್ನು ಕರೆಯಿಸಿ ಪ್ರಚಾರ ಮಾಡಿಸುವುದು. ತಾವೇ ಪ್ರಚಾರಕ್ಕಿಳಿಯುವುದು. ಮನೆಮನೆಗೆ ಹೋಗಿ ಭೇಟಿಯಾಗಿ ಪ್ರಚಾರ ಮಾಡುವುದು. ಹೀಗೆ ಹಲವಾರು ವಿಧಾನಗಳ ಮೂಲಕ ರಾಜಕೀಯವನ್ನು ಪ್ರವೇಶಿಸುತ್ತಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಹಣ, ವಸ್ತ್ರ, ಹೆಂಡ ಮುಂತಾದವುಗಳನ್ನು ಪರೋಕ್ಷವಾಗಿ ಹಂಚುವುದು

ಕಂಡುಬರುತ್ತವೆ. ಈ ರೀತಿಯ ಹಲವಾರು ಕ್ರಮಗಳ ಮೂಲಕ ಚುನಾವಣೆಯಲ್ಲಿ ಪ್ರಚಾರ ಮಾಡುತ್ತಿರುವುದು ಕಂಡುಬರುತ್ತವೆ. ಈ ಅಧ್ಯಯನಕ್ಕೆ ಸಂದರ್ಶಿಸಲ್ಪಟ್ಟ ೧೦೦ ಜನ ಪರಿಶಿಷ್ಟ ಪಂಗಡದ ಪ್ರಜಾಪ್ರತಿನಿಧಿಗಳಲ್ಲಿ ೮೨ ಜನರು ನ್ಯಾಯಯುತವಾಗಿ ಯಾವುದೇ ಆಮಿಷಗಳನ್ನು ಮತದಾರರಿಗೆ ಒಡ್ಡದೇ ಆಯ್ಕೆಯಾಗಿರುವುದಾಗಿ ತಿಳಿಸಿದ್ದಾರೆ. ಇತರ ೧೩ ಜನ ಸಂದರ್ಶಿತ ಜನ ಪ್ರತಿನಿಧಿಗಳು ಮತದಾರರಿಗೆ ಆಮಿಷ ಒಡ್ಡದೆ ಗೆಲ್ಲಲು ಸಾಧ್ಯವೇ? ಎಂದು ನಮ್ಮನ್ನೇ ಪ್ರಶ್ನೆ ಮಾಡುತ್ತಾರೆ. ೫ ಜನ ಅಭ್ಯರ್ಥಿಗಳು ಚುನಾವಣೆಯಲ್ಲಿ ನಾವೇನು ಮತದಾರರಿಗೆ ಯಾವುದೇ ವಸ್ತುಗಳನ್ನು ನೀಡಿಲ್ಲ. ಆದರೆ ಹಿಂಬಾಲಕರು ಅನೇಕ ಆಸೆ, ಆಮಿಷಗಳನ್ನು ನೀಡಿ ನಮ್ಮನ್ನು ಆಯ್ಕೆ ಮಾಡಿಸಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕ್ರ.ಸಂ.	ಚುನಾವಣೆಯಲ್ಲಿ ಆಯ್ಕೆಯಾದ ಜನಪ್ರತಿನಿಧಿಗಳ ಅಭಿಪ್ರಾಯ	ಅಭಿಪ್ರಾಯ ವ್ಯಕ್ತಪಡಿಸಿರುವ ಸದಸ್ಯರು
೧.	ನ್ಯಾಯಯುತವಾಗಿ ಚುನಾಯಿತರಾಗಿದ್ದೇವೆ.	೮೨
೨.	ಆಮಿಷಗಳನ್ನು ನೀಡದ ಹೊರತು ಗೆಲ್ಲಲು ಸಾಧ್ಯವೇ	೧೩
೩.	ಹಿಂಬಾಲಕರ ಪ್ರೋತ್ಸಾಹ ಆಮಿಷಗಳನ್ನು ಒಡ್ಡಿ ಗೆಲ್ಲಿಸಿದ್ದಾರೆ.	೦೫

೧೦ ಜನ ಪ್ರತಿನಿಧಿಗಳು ತಮ್ಮ ಧಾರ್ಮಿಕ ನಾಯಕರ ಪ್ರಭಾವದಿಂದ ಚುನಾವಣೆಗೆ ಸ್ಪರ್ಧಿಸಿರುವುದಾಗಿ ತಿಳಿಸಿರುತ್ತಾರೆ. ಪರಿಶಿಷ್ಟ ಪಂಗಡದ ಜನಪ್ರತಿನಿಧಿಗಳು ತಮ್ಮ ಧಾರ್ಮಿಕ ಸಂಘಟನೆಗಳಿಂದ ಚುನಾವಣೆಯಲ್ಲಿ ಜಯಿಸಲು ಹೆಚ್ಚಿನ ಅನುಕೂಲವಾಗಿದೆ ಎಂದು ತಿಳಿಸುತ್ತಾರೆ. ಈ ಆಯ್ಕೆಯಲ್ಲಿ ಕೇವಲ ನಮ್ಮ ಸಮುದಾಯದವರಲ್ಲದೇ ಇತರೆ ಸಮುದಾಯದವರ ಕೊಡುಗೆಯೂ ಪ್ರಮುಖವಾಗಿದೆ ಎಂದು ತಿಳಿಸುತ್ತಾರೆ. ಒಟ್ಟಾರೆಯಾಗಿ ಚುನಾವಣೆಯ ಚಟುವಟಿಕೆಗಳಲ್ಲಿ ಬುಡಕಟ್ಟುಗಳು ಪಾಲ್ಗೊಳ್ಳುತ್ತಿರುವುದು ಪ್ರಮುಖವಾಗಿ ಕಂಡುಬರುತ್ತದೆ. ಚುನಾವಣೆಯ ಸಂದರ್ಭದಲ್ಲಿ ಎಲ್ಲ ಸಮುದಾಯದವರು ಜಾತಿ ಭೇದವನ್ನು ಮರೆತು ಪಾಲ್ಗೊಳ್ಳುತ್ತಿರುವುದರಿಂದ ಸಮಾಜದಲ್ಲಿ ಐಕ್ಯತೆ ಸಾಧ್ಯವಾಗಿದೆ. ನಾಯಕ ಸಮುದಾಯದವರು ಮೇಲ್ವರ್ಗದ ಸಮುದಾಯಗಳೊಂದಿಗೆ ಬೆರೆತುಕೊಂಡು ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡಿದ್ದಾರೆ. ಚುನಾವಣೆಯ ಸಮಯದಲ್ಲಿ ಸ್ಪರ್ಧಿಗಳನ್ನು ಆಯ್ಕೆ ಮಾಡುವುದು, ಪಕ್ಷಗಳನ್ನು ಆಯ್ಕೆ ಮಾಡಿಕೊಳ್ಳುವುದು. ಚುನಾವಣೆಯ ಖರ್ಚಿಗಾಗಿ ಪ್ರಮುಖ ವ್ಯಕ್ತಿಗಳಿಂದ ದೇಣಿಗೆ ಸಂಗ್ರಹಿಸುವುದು ಮುಂತಾದ ಪ್ರಕ್ರಿಯೆಯಲ್ಲಿ ತೊಡಗುವುದರ ಮೂಲಕ ತಮ್ಮದೇ ಆದ

ರಾಜಕೀಯ ಪ್ರಾಮುಖ್ಯತೆಯನ್ನು ಬೆಳೆಸಿಕೊಳ್ಳುತ್ತಿರುವುದನ್ನು ಗಂಗಾವತಿ ತಾಲೂಕಿನ ಪರಿಶಿಷ್ಟ ಪಂಗಡದಲ್ಲಿ ಕಾಣುತ್ತೇವೆ.

೫.೫ ಆಡಳಿತ ವ್ಯವಸ್ಥೆಯಲ್ಲಿ ಬುಡಕಟ್ಟು ಜನಪ್ರತಿನಿಧಿಗಳು :

ಈ ಭೂಮಿಯಲ್ಲಿ ಮಾನವ ಒಂದಲ್ಲಾ ಒಂದು ರೀತಿಯ ಆಡಳಿತವನ್ನು ನಿರ್ವಹಿಸುತ್ತಾ ಬಂದಿದ್ದಾನೆ. ತನ್ನ ಅಲೆಮಾರಿ ಜೀವನಕ್ಕೆ ಮಂಗಳ ಹಾಡಿ ಒಂದೆಡೆ ಸ್ಥಿರವಾಗಿ ನೆಲೆನಿಂತು ತನೂ ನೆಲೆ ಕಂಡು ಕೊಂಡ ಸ್ಥಳಗಳಲ್ಲೆಲ್ಲ ಕುಟುಂಬ, ಬಣ, ಸಮುದಾಯಗಳಾಗಿ ರೂಪಗೊಳ್ಳುತ್ತ ಹೋದವು. ಕುಟುಂಬದಲ್ಲಿ ಯಜಮಾನ, ಸಮುದಾಯಗಳಲ್ಲಿ ನಾಯಕ ಅಧಿಕಾರವನ್ನು ನಿರ್ವಹಿಸುತ್ತಿದ್ದ. ಕಾಲಾಂತರದಲ್ಲಿ ಜಾತಿಗಳಾಗಿ ಪ್ರತಿಯೊಂದು ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಮುದಾಯದಲ್ಲಿ ನಾಯಕನನ್ನು ಆರಿಸಿ, ನ್ಯಾಯ ನಿರ್ಣಯಗಳನ್ನು ಮಾಡುವುದರ ಮೂಲಕ ಸಮುದಾಯದ ಸ್ವಾಸ್ಥ್ಯ ಕಾಪಾಡಿಕೊಳ್ಳುವ ಪದ್ಧತಿಗಳನ್ನು ಅಳವಡಿಸಿಕೊಂಡವು. ಈ ಪದ್ಧತಿಯನ್ನು ಇಂದಿಗೂ ಬುಡಕಟ್ಟು ಸಮುದಾಯಗಳಲ್ಲಿ ಕಾಣಬಹುದಾಗಿದೆ. ಈ ನ್ಯಾಯ ವ್ಯವಸ್ಥೆಯಲ್ಲಿ ನಾಯಕನ ತೀರ್ಮಾನವೇ ಅಂತಿಮವಾಗಿರುತ್ತದೆ. ಅವನ ತೀರ್ಪಿಗೆ ಎಲ್ಲರೂ ತಲೆಬಾಗಬೇಕು. ವಿಶ್ವದ ಎಲ್ಲ ಸಮುದಾಯಗಳು ಪ್ರಾಚೀನ ಕಾಲದಲ್ಲಿಯೇ ತಮ್ಮದೇ ಆದ ಕಾನೂನುಗಳನ್ನು ರಚಿಸಿಕೊಂಡಿರುವುದು ತಿಳಿದುಬರುತ್ತದೆ ಮತ್ತು ತಮ್ಮ ಪ್ರಾಚೀನ ಕಾನೂನುಗಳ ಮೂಲಕವೇ ಇತ್ತೀಚಿನ ವರೆಗೂ ತಮ್ಮದೇ ಆದ ಆಡಳಿತವನ್ನು ನಡೆಸುತ್ತಿರುವುದು ತಿಳಿದುಬರುತ್ತದೆ. "೧೮೬೧ ರ ಸುಮಾರಿನಲ್ಲಿ ಹೊಟೆಂಟಾಟ್ ಬುಡಕಟ್ಟಿನವನೊಬ್ಬನನ್ನು ಆತ್ಮರಕ್ಷಣೆಗಾಗಿ ಕೊಂದರೂ ಬುಡಕಟ್ಟಿನ ನ್ಯಾಯಾಲಯ ಅವನಿಗೆ ಶಿಕ್ಷೆ ವಿಧಿಸಿತು. ಬುಡಕಟ್ಟಿನ ಕಾನೂನಿನ ಪ್ರಕಾರ ಸತ್ತವನ ನೆಂಟರು ಸೇಡು ತೀರಿಸಿಕೊಳ್ಳಲು ಅಪರಾಧಿಯನ್ನು ಕೊಲ್ಲಬಹುದೆಂದು ನ್ಯಾಯಾಲಯ ಆತನಿಗೆ ತಿಳಿಸಿ ನಾಡನ್ನು ಬಿಟು ಹೋಗುವಂತೆ ಸಲಹೆ ಕೊಡುತ್ತದೆ. ಬಿಡಾರದಲ್ಲಿ ಅಗ್ನಿಯ ಸುತ್ತ ಸಭೆ ಸೇರಿದಾಗ ಬೆರ್ಗೂಲಾಮಾ ಹಾಗೂ ಬುಷ್‌ಮನ್ ಜನರು ಮುಖಂಡರು ಹಿಂಸಾ ಕೃತ್ಯಗಳನ್ನು ಅಥವಾ ವ್ಯಭಿಚಾರವನ್ನು ಮಾಡಿದ ಆಪಾದಿತರಿಗೆ ಅನೌಪಚಾರಿಕವಾಗಿ ಮರಣದಂಡನೆ ವಿಧಿಸುತ್ತಾರೆ. ಈ ಕೆಲಸ ನೆರವೇರಿಸಲು ಯುವಜನರನ್ನು ನೇಮಿಸುತ್ತಾರೆ."[೧೫]

ಬುಡಕಟ್ಟುಗಳು ತಮ್ಮದೇ ಆದ ಆಡಳಿತ ಪದ್ಧತಿಯ ಮೂಲಕ ಸಮುದಾಯವನ್ನು ನಿಯಂತ್ರಣದಲ್ಲಿಟ್ಟುಕೊಂಡು ನ್ಯಾಯ ಅನ್ಯಾಯ ಕುರಿತು ನಿರ್ಣಯ ನೀಡುತ್ತ ಬಂದಿವೆ. ಬುಡಕಟ್ಟು ಸಮುದಾಯಗಳಲ್ಲಿ ಬರುವ ಎಲ್ಲ ವ್ಯಾಜ್ಯಗಳನ್ನು ಸಮುದಾಯದ ಒಳಗೆ ಬಗೆಹರಿಸಿಕೊಳ್ಳಲಾಗುತ್ತದೆ. ಬುಡಕಟ್ಟು ಸಮುದಾಯಗಳಲ್ಲಿ ಬರುವ ಪ್ರಮುಖ ವಿಚಾರಣೆಗಳೆಂದರೆ

ಕೊಲೆ, ಕಳ್ಳತನ, ಅಕ್ರಮ ಸಂಬಂಧ, ಪ್ರಾಣಿಗಳೊಡನೆ ಲೈಂಗಿಕ ಕ್ರಿಯೆ ಮುಂತಾದವುಗಳು. ಬುಡಕಟ್ಟು ಸಮುದಾಯಗಳು ನೀಡುವ ಶಿಕ್ಷೆಗಳು ಕೆಲವೊಮ್ಮೆ ಸರಳ ರೂಪದಲ್ಲಿದ್ದರೆ ಮತ್ತು ಕೆಲವೊಮ್ಮೆ ಉಗ್ರ ರೂಪದಲ್ಲಿರುತ್ತಿದ್ದವು ಮತ್ತು ಅವು ನ್ಯಾಯಸಮ್ಮತವಾಗಿರುತ್ತಿದ್ದವು. ಉದಾಹರಣೆಗೆ "ಪುಲ್ಲಯರ ಇವರು ವ್ಯಭಿಚಾರದ ಮೊಕದ್ದಮೆಗಳಿಗೆ ಒಂದು ರೀತಿಯ ಕಲ್ಲಿನ ಮನೆಯಲ್ಲಿ ಅಪರಾಧಿಗಳನ್ನಿಟ್ಟು ಶಿಕ್ಷಿಸುತ್ತಿದ್ದರು. ವಿರಾಳಿಗಳು : ಗಂಡನೊಡನೆ ಬಾಳಲು ತಿರಸ್ಕರಿಸಿದವಳನ್ನು ಒಂದು ಮರಕ್ಕೆ ಕಟ್ಟಿ ಆಕೆಯ ಕಾಲಿನ ಬಳಿ ಕಣಜ ಅಥವಾ ಜೇನು ನೊಣದ ಗೂಡನ್ನು ಕೊಲ್‌ಕಾರನ್ ಎಂಬ ಹೆಸರಿನ ಮುಖ್ಯಸ್ಥನು ಬಿಡುತ್ತಾನೆ. ಈ ಶಿಕ್ಷೆಯನ್ನು ಕೊಡುತ್ತಿರುವಾಗ ಅವಳು ತನ್ನ ಗಂಡನನ್ನು ಮತ್ತೆ ಸೇರಲು ಇಚ್ಚಿಸಿದರೆ ಗಂಡನ ಬೆನ್ನಿನ ಮೇಲೆ ಕೋಳಿ ಮಲದಿಂದ ಒಂದು ಗುರುತನ್ನು ಮಾಡಿ ಅದನ್ನು ನೆಕ್ಕುವಂತೆ ಮಾಡುತ್ತಾರೆ. ಆಗ ಅವಳು 'ನೀನೇ ನನ್ನ ಗಂಡ, ನಿನ್ನ ಜೊತೆ ಜಗಳವಾಡುವುದಿಲ್ಲ' ಎನ್ನಬೇಕು ಹೊರಗ ಈ ಜನದಲ್ಲಿ ಅಕ್ರಮ ಪ್ರಣಯ ವ್ಯವಹಾರ ನಡೆದರೆ ಪ್ರಿಯನು ಅವಳನ್ನು ಮದುವೆ ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡಲಾಗುತ್ತದೆ. ಅವಳಂತೆ ಅವನೂ ಕೀಳು ಜಾತಿಯವನಾದರೆ ಈ ರೀತಿ ನಡೆಯುತ್ತದೆ."[೧೬] ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ನ್ಯಾಯ ಪದ್ಧತಿಯಲ್ಲಿ ಗಣನೀಯ ಪರಿವರ್ತನೆಯಾಗಿದೆ.

ಸ್ವಾತಂತ್ರ್ಯದ ನಂತರದ ಭಾರತದಲ್ಲಿ ಸರ್ವರೂ ಆಡಳಿತದಲ್ಲಿ ಭಾಗಿಯಾಗಬೇಕೆನ್ನುವುದರ ಮಹದಾಸೆಯೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ಥಿತ್ವಕ್ಕೆ ಬಂದ ನಂತರ ಹಿಂದುಳಿದ ವರ್ಗದ ಸಮುದಾಯಗಳನ್ನು ಗುರುತಿಸಿ ಅವರ ಅಭಿವೃದ್ಧಿಗಾಗಿ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಬಂದಿದೆ. ಭಾರತ ಸರ್ಕಾರ ಹಮ್ಮಿಕೊಳ್ಳುವ ೧೦ ಅಭಿವೃದ್ಧಿ ಯೋಜನೆಗಳಲ್ಲಿ ೯ ಯೋಜನೆಗಳು ಬಡತನ ನಿರ್ಮೂಲನೆ ಕಾರ್ಯಕ್ರಮಗಳಾಗಿವೆ.

ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಡವರ್ಗದವರಲ್ಲಿಯೂ ಮುಖ್ಯವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದವುಗಳಾಗಿವೆ. "ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಮುಖ್ಯ ಉದ್ದೇಶವು ಗ್ರಾಮೀಣ ಕ್ಷೇತ್ರದ ಜನರಿಗೆ ಆಯ್ಕೆ ಕ್ಷೇತ್ರಗಳಲ್ಲಿ ಉದ್ಯೋಗ ಅವಕಾಶವನ್ನು ಒದಗಿಸಿ ಅವರ ಜೀವನವನ್ನು ಸುಧಾರಿಸುವುದಾಗಿದೆ. ಸಣ್ಣ ಮತ್ತು ಅತೀ ಸಣ್ಣ ರೈತರು, ಕೃಷಿ ಕಾರ್ಮಿಕರು ಈ ಯೋಜನೆಗಳಿಂದ ಪ್ರಯೋಜನ ಪಡೆಯುವರು. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಈ ಕೆಳಗಿನ ಸೌಲಭ್ಯಗಳನ್ನು ಕಲ್ಪಿಸುತ್ತಿರುವುದು ಕಂಡುಬರುತ್ತದೆ. ೧) ಎಸ್.ಜಿ.ಎಸ್.ವೈ., ೨) ಎಸ್.ಜಿ.ಆರ್.ವೈ., ೩) ಇಂದಿರಾ ಆವಾಸ ಯೋಜನೆ, ೪) ಡಿ.ಪಿ.ಎ.ಪಿ., ೫) ಗ್ರಾಮ

ಪಂಚಾಯತಿಗಳಿಗೆ ಅನುದಾನ, ೬) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ, ೭) ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ, ೮) ಪಿ.ಎಂ.ಜಿ.ಎಸ್.ವೈ., ೯) ಸಣ್ಣ ನೀರಾವರಿ, ೧೦) ರಸ್ತೆ ಮತ್ತು ಸೇತುವೆಗಳು, ೧೧) ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ ಈ ಯೋಜನೆಗಳಲಿ ಬುಡಕಟ್ಟಿನವರಿಗೆ ಉದ್ಯೋಗಗಳನ್ನು ಒದಗಿಸಿ ಅವರ ಜೀವನಕ್ಕೆ ನಿರಂತರ ಆದಾಯ ದೊರೆಯುವಂತೆ ಮಾಡಲಾಗಿದೆ."[೧೭]

ಗಂಗಾವತಿ ತಾಲೂಕಿನ ೩೮ ಗ್ರಾಮ ಪಂಚಾಯತಿಗಳ ಸಂದರ್ಶಿಸಲ್ಪಟ್ಟ ೧೦೦ ಜನ ಪರಿಶಿಷ್ಟ ಪಂಗಡದ ಜನಪ್ರತಿನಿಧಿಗಳಲ್ಲಿ ೬೧ ಜನ ಅನಕ್ಷರಸ್ಥರಾಗಿದ್ದಾರೆ. ಇವರು ತಮಗೆ ಬರುವ ಪತ್ರ ವ್ಯವಹಾರಗಳನ್ನು ತಮ್ಮ ಮನೆಯ ಇತರೆ ಸದಸ್ಯರುಗಳಿಂದ ತಿಳಿದುಕೊಂಡು ಮುಂದಿನ ಕ್ರಮ ಅನುಸರಿಸುತ್ತಿರುವುದು ಕಂಡುಬರುತ್ತದೆ. ಶಾಸನಸಭೆಗೆ ಭಾಗವಹಿಸಬೇಕಾದಾಗ ಪತ್ರ ವ್ಯವಹಾರಗಳು ಮತ್ತು ಚರ್ಚಾ ವಿಷಯಗಳನ್ನು ತಮ್ಮ ಅಭಿಪ್ರಾಯದಂತೆ ಕುಟುಂಬದ ಇತರ ಸದಸ್ಯರಿಂದ ದಾಖಲಿಸಿಕೊಂಡು ಹೋಗುತ್ತಾರೆ. ಗ್ರಾಮ ಪಂಚಾಯತಿಗಳಲ್ಲಿ ನಡೆಯುವ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅಧಿಕಾರವನ್ನು ಚಲಾಯಿಸುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ತಮ್ಮ ಬೇಕು ಬೇಡಗಳನ್ನು ಸಭೆಯಲ್ಲಿ ಚರ್ಚಿಸುತ್ತಾರೆ. ಈ ಸಭೆಗಳಲ್ಲಿ ತಮಗೆ ಮತ್ತು ಸಾರ್ವಜನಿಕರಿಗೆ ಅನ್ಯಾಯವಾಗುವ ಸಂದರ್ಭಗಳಲ್ಲಿ ಪ್ರತಿಭಟಿಸಿ ಸೂಕ್ತ ನಿರ್ಣಯಕ್ಕೆ ಬರುವಂತೆ ಒತ್ತಾಯಿಸುತ್ತಾರೆ. ಈ ತಾಲೂಕಿನ ನಾಯಕ ಸಮುದಾಯವು ಒಂದು ಕಾಲಕ್ಕೆ ಪಾಳೆಗಾರಿಕೆಗೆ ಹೆಸರುವಾಸಿಯಾದದ್ದು. ಕನಕಗಿರಿ ಮತ್ತು ಹುಲಿಹೈದರ ಪ್ರದೇಶಗಳು ಪಾಳೇಗಾರಿಕೆಯ ಆಡಳಿತಕ್ಕೆ ಒಳಪಟ್ಟಿದ್ದನ್ನು ನೋಡಬಹುದಾಗಿದೆ. ಈ ಪಾಳೇಗಾ ರಿಕೆಯ ಕುರುಹುಗಳು ಇಂದಿಗೂ ಅಲ್ಲಿ ಕಂಡುಬರುತ್ತವೆ. ಪಾಳೇಗಾರರು ಭಯ ಅರಿಯದ ಕಲಿಪುರುಷರಾಗಿದ್ದು, ಅರಣ್ಯಗಳಲ್ಲಿ ಸಂಚರಿಸುತ್ತಾ ಬೇಟೆಗೆ ಯಾವ ಪ್ರಾಣಿಯೂ ಸಿಗದಾಗ ಬಯಲುನಾಡಿನ ನಿವಾಸಿಗಳನ್ನು ಸುಲಿಗೆ ಮಾಡಿಕೊಂಡು ಜೀವಿಸುತ್ತಿದ್ದರು.

"ಪಾಳೇಗಾರರು ಗಗನಸ್ಪರ್ಷಿಯಾದ ಶಿಲಾಗ್ರಹಗಳಲ್ಲಿ ದುರ್ಗಗಳನ್ನು ಕಟ್ಟಿಕೊಂಡು ಒಂದೇ ಪ್ರವೇಶದ್ವಾರ ಮಾಡಿಕೊಳ್ಳುತ್ತಿದ್ದರು. ಬೇರೆಯವರು ಒಳಗೆ ಪ್ರವೇಶಿಸಲು ಸಾಧ್ಯವಾಗದ ರೀತಿಯಲ್ಲಿ ಬಾಗಿಲುಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಪೋಲ್ಲಂ ಎಂಬ ಭೂಪ್ರದೇಶಕ್ಕೆ ಸಾಮಾನ್ಯವಾಗಿ ಒಬ್ಬ ನಾಯಕನಿದ್ದು ಒಂದೊಂದು ಬಣದಲ್ಲಿ ಸಮರ್ಥನಾದವನೊಬ್ಬ ನಾಯಕ ಪದವಿಗೇರುತ್ತಿದ್ದ. ಒಂದು ಸಲ ನಾಯಕನೆಂದು ಅಂಗೀಕೃತನಾದ ಮೇಲೆ ಅವನಿಗೆ ಜನಸಮುದಾಯ ವಿಧೇಯವಾಗಿ ನಿಷ್ಠೆಯಿಂದ ಇದ್ದು ಅವನ ಆಜ್ಞೆಯನ್ನು ಪಾಲಿಸಬೇಕಾಗಿತ್ತು. ಅನೇಕ ಪಾಳೇಗಾರರು ತಮ್ಮಲ್ಲಿ ಬಲಿಷ್ಠ ಸೇನೆಯನ್ನು ಇಟ್ಟುಕೊಂಡಿದ್ದರಿಂದ ಅಂತಹವರಿಗೆ ಬ್ರಿಟೀಷ್ ಸರ್ಕಾರವು ಸ್ವತಂತ್ರ ಅಧಿಕಾರವನ್ನು ಕೊಟ್ಟಿತು."[೧೮] ಈ ರೀತಿಯಾಗಿ ನಾಯಕ ಸಮುದಾಯವು

ಸ್ವಾತಂತ್ರ್ಯಕಿಂತ ಪೂರ್ವದಲ್ಲಿಯೇ ಅಧಿಕಾರ ನಿರ್ವಹಿಸುತ್ತಿದ್ದುದನ್ನು ತಿಳಿಯಬಹುದಾಗಿದೆ. ಪಂಚಾಯತ್ ರಾಜ್ ಹಾಗೂ ವಿಧಾನಸಭೆಗಳ ಸ್ಥಾನಗಳಲ್ಲಿ ಪರಿಶಿಷ್ಟ ಪಂಗಡದವರು ಆಡಳಿತದಲ್ಲಿ ವಿಶಿಷ್ಟವಾದ ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ. ಅಧಿಕಾರದಲ್ಲಿ ಏಳು-ಬೀಳು, ಹೊಂದಾಣಿಕೆ-ವಿರೋಧ ಮತ್ತು ಆಡಳಿತ ಮತ್ತು ಭ್ರಷ್ಟತೆ ಇರುವುದು ಸರ್ವಸಾಮಾನ್ಯ. ವಡ್ಡರಹಟ್ಟಿ ಗ್ರಾಮದ ೪ ಮತ್ತು ೫ ನೇ ವಾರ್ಡ್‌ಗಳಲ್ಲಿ ಕುಡಿಯುವ ನೀರಿಗೆ ವಿಪರೀತ ಸಮಸ್ಯೆ ಉಂಟಾಗಿ ಮಹಿಳೆಯರು ಗ್ರಾಮ ಪಂಚಾಯತಿಗಳಿಗೆ ಮುತ್ತಿಗೆ ಹಾಕಿದ್ದು ತಿಳಿದುಬರುತ್ತದೆ. ಕಾರಟಗಿ ಗ್ರಾಮದ "ಜೆ.ಪಿ.ನಗರ ಸುಧಾರಿಸಿದ ಭಾಗ ಎಂದು ಹೇಳಲಾಗುತ್ತಿದೆ. ಆದರೆ ಯಾವುದೇ ವ್ಯವಸ್ಥಿತ ರೀತಿಯಲ್ಲಿ ಈ ಭಾಗ ಬೆಳೆದಿಲ್ಲ. ಅತಿಕ್ರಮಣದ ಹಾವಳಿಯಿಂದ ಇಕ್ಕಟ್ಟಾದ ರಸ್ತೆಗಳಾಗಿವೆ. ಸ್ವಚ್ಛತೆ, ಬೆಳಕಿನ ವ್ಯವಸ್ಥೆಯು ಸರಿಯಿಲ್ಲ. ಇದರ ಜೊತೆಗೆ ತಿಂಗಳಿಂದಲೂ ನಲ್ಲಿಯಲ್ಲಿಯೂ ಕುಡಿಯುವ ನೀರು ಬಾರದೆ ಜನರು ಬೋರ್‌ವೆಲ್‌ಗಳಿರುವ ಇತರೆಡೆಗೆ ತೆರಳಿ ನೀರು ತರುವ ಪರಿಸ್ಥಿತಿ ನಿರ್ಮಾಣವಾಗಿದೆ."[೧೯] ಎಂದು ನಾಗರಿಕರು ಗ್ರಾಮ ಪಂಚಾಯತಿಯವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಗಂಗಾವತಿ ತಾಲೂಕಿನ ಪ್ರಮುಖ ಗ್ರಾಮ ಪಂಚಾಯತಿಯಾದ ಕನಕಗಿರಿಯಲ್ಲಿ ಉಪಾಧ್ಯಕ್ಷ ಸ್ಥಾನವು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದೆ. ಉದ್ಯೋಗ ಖಾತ್ರಿ ಯೋಜನೆಯನ್ನು ಕುರಿತು ಚರ್ಚಿಸಲು ಪಂಚಾಯತಿಯ ಸದಸ್ಯರೆಲ್ಲರೂ ಪಂಚಾಯತಿಗೆ ಬಂದಾಗ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಗೈರುಹಾಜರಾಗಿದ್ದರಿಂದ ಇತರೆ ಸದಸ್ಯರು ಕಾರ್ಯದರ್ಶಿಯನ್ನು ತರಾಟೆಗೆ ತೆಗೆದುಕೊಂಡಿರುವುದು ಜೂನ್ ೨೦, ೨೦೦೮ ಶುಕ್ರವಾರ ಪ್ರಜಾವಾಣಿಯ ೨ ನೇ ಪುಟದಲ್ಲಿ ನೋಡಬಹುದಾಗಿದೆ. ಅಧಿಕಾರದಲ್ಲಿ ಎಷ್ಟೇ ವಿರೋಧಗಳಿದ್ದರೂ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳು ಸಹ ಸುಲಲಿತವಾಗಿ ನಡೆಯುತ್ತಿರುತ್ತವೆ. ಬುಡಕಟ್ಟು ಸಮುದಾಯಗಳು ಸ್ವತಂತ್ರವಾಗಿ ಆಡಳಿತದಲ್ಲಿ ಭಾಗಿಯಾಗುವುದರ ಮುಖಾಂತರ ತಮ್ಮ ಅಧಿಕಾರವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿವೆ. ಪಂಚಾಯತಿಗಳಲ್ಲಿ ವಿವಿಧ ಸಮಿತಿ ಸದಸ್ಯರನ್ನು ಆಯ್ಕೆ ಮಾಡುವುದರಿಂದ ಹಿಡಿದು ಅಧ್ಯಕ್ಷನ ಸ್ಥಾನದ ವರೆಗೂ ಪ್ರಮುಖ ಪಾತ್ರವನ್ನು ವಹಿಸುವುದು ಕಂಡುಬರುತ್ತದೆ. ಅಲ್ಲದೆ ಯೋಜನೆಗಳನ್ನು ಜಾರಿಗೆ ತರುವಾಗ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವಾಗ ಆದಿವಾಸಿ ಜನಪ್ರತಿನಿಧಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸ್ಥಳೀಯ ಆಡಳಿತದಲ್ಲಿ ಬುಡಕಟ್ಟು ಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಸಾಂಪ್ರದಾಯಿಕವಾಗಿ ಜಾತಿಯ ಏಣಿ-ಶ್ರೇಣಿಗಳು ಇಂದು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಮೇಲ್ಜಾತಿ ಎನ್ನುವ ಬೇಧ-ಭಾವವಿಲ್ಲದೆ ಆಡಳಿತ ಯಂತ್ರವು ಸುಗಮವಾಗಿ ಸಾಗುವುದಕ್ಕೆ ಅವಕಾಶವಾಗಿದೆ. ಆದರೆ ಸರ್ಕಾರ

ಮತ್ತು ಸಂವಿಧಾನಗಳು ಎಷ್ಟೇ ಮೀಸಲಾತಿಯನ್ನು ಕಲ್ಪಿಸಿದ್ದರೂ ಸಹ ಅವರ ಒಟ್ಟಾರೇ ಜೀವನ ಸುಧಾರಣೆಯಾಗದೇ ಇರುವುದೇ ದುರಾದೃಷ್ಟವೇ ಸರಿ.

ಅನೇಕ ಬುಡಕಟ್ಟು ಸಮುದಾಯಗಳು ಇಂದಿಗೂ ನಾಗರಿಕ ಪ್ರಪಂಚದೊಂದಿಗೆ ಒಗ್ಗಿಕೊಳ್ಳುವುದಕ್ಕೆ ಹೆಣಗಾಡುತ್ತಿವೆ. ಆದರೆ ಕೆಲವೊಂದು ಬುಡಕಟ್ಟು ಸಮುದಾಯಗಳು ಮಾತ್ರ ನಾಗರಿಕ ಸಮಾಜದಲ್ಲಿ ನಾಗರಿಕರಾಗಿ ಗುರುತಿಸಿಕೊಂಡಿದ್ದಾರೆ. ನಾಯಕ ಸಮುದಾಯವು ಇದಕ್ಕೊಂದು ಉತ್ತಮ ನಿದರ್ಶನವಾಗಿದೆ. ನಾಯಕ ಸಮುದಾಯವು ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರೆಯುತ್ತಿದೆ. ಈ ಸಮುದಾಯ ತಮ್ಮ ಆಡಳಿತವನ್ನು ತಾವೇ ನಿರ್ವಹಿಸುವುದರ ಮೂಲಕ ರಾಜಕೀಯವಾದ ಬಲವನ್ನು ಎತ್ತಿತೋರಿಸಿದ್ದಾರೆ. ಕೆಲ ಪ್ರದೇಶಗಳಲ್ಲಿ ಬಹುಸಂಖ್ಯಾತರಾಗಿರುವ ನಾಯಕ ಸಮುದಾಯದವರು ಇತರೆ ಸಮುದಾಯದವರನ್ನು ಪರಿಗಣನೆಗೆ ತೆಗೆದುಕೊಂಡು ಆಡಳಿತ ನಡೆಸುತ್ತಿರುವುದು ಕಂಡುಬರುತ್ತದೆ.

ತಾಲೂಕಿನ ಒಟ್ಟು ೧೩೧ ಗ್ರಾಮ ಪಂಚಾಯತಿ ಸದಸ್ಯರಲ್ಲಿ ೫೪ ಬುಡಕಟ್ಟು ಮಹಿಳಾ ಜನಪ್ರತಿನಿಧಿಗಳಿದ್ದಾರೆ. ಹೆಚ್ಚಿನ ಪ್ರಮಾಣದ ಮಹಿಳೆಯರು ವಿಶೇಷ ಸಂದರ್ಭದಲ್ಲಿ ಮಾತ್ರ ಪಂಚಾಯತಿಗೆ ಬಂದು ಹೋಗುತ್ತಾರೆ. ಉಳಿದಂತೆ ಪುರುಷ ಪ್ರಧಾನ ಸಮಾಜದಲ್ಲಿ ಗೃಹಬಂಧಿಯಾಗಿರುವುದು ಮುಖ್ಯವಾಗಿ ಕಂಡುಬರುತ್ತದೆ. ಮಹಿಳಾ ಸದಸ್ಯರು ಆಡಳಿತದಲ್ಲಿ ಪಾಲ್ಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ. ಆದರೆ ಮಹಿಳೆಯರು ಸಶಸ್ತ್ರೀಕರಣವಾಗುವುದು ಅವಶ್ಯವಾಗಿದೆ. "ಅದಕ್ಕಾಗಿ ಈ ಕೆಳಗಿನ ಅಂಶಗಳು ಅತ್ಯಗತ್ಯ.

೧) ಸಂಪೂರ್ಣ ಮಹಿಳಾ ಸಾಕ್ಷರತೆಯನ್ನು ತುರ್ತಾಗಿ ಸಾಧಿಸಬೇಕು. ೨) ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಬೇಕು. ೩) ಉತ್ತಮ ತರಬೇತಿ ಮತ್ತು ಮಾರ್ಗದರ್ಶನ ನೀಡುವಂತರಾಗಬೇಕು. ೪) ಗ್ರಾಮಸಭೆಗಳಲ್ಲಿ ಭಾಗವಹಿಸಲು ಸರಿಯಾದ ನೀತಿ ಸಂಹಿತೆಗಳನ್ನು ಮಹಿಳೆಯರಿಗಾಗಿಯೇ ರೂಪಿಸಬೇಕು. ೫) ಸ್ವಯಂಸೇವಾ ಸಂಘಗಳಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳಬೇಕು. ೬) ಸರ್ಕಾರ ರೂಪಿಸಿರುವ ಮಹಿಳೆಯರ ಯೋಜನೆಗಳ ಸ್ತ್ರೀಶಕ್ತಿ–ಶಕ್ತಿ ಯೋಜನೆಗಳಿಂದ ಆರ್ಥಿಕ ಸ್ವಾವಲಂಬನೆ ಸಾಧಿಸಬೇಕಾಗಿದೆ. ೭) ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಹೆಚ್ಚು ಉತ್ತೇಜನ ನೀಡಬೇಕು. ೮) ಸ್ತ್ರೀಪುರುಷರೆಲ್ಲರೂ ಭೇದಭಾವವಿಲ್ಲದೆ ಆಡಳಿತದಲ್ಲಿ ಪಾಲ್ಗೊಳ್ಳುವಂತವರಾಗಬೇಕು."[೨೦] ಸರ್ಕಾರವು ಇನ್ನೂ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ನೀಡುವುದರ ಮೂಲಕ ಆಡಳಿತ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ಜನಪ್ರತಿನಿಧಿಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕಾಗಿದೆ.

೫.೬ ಮೀಸಲಾತಿ :

ಗಂಗಾವತಿ ತಾಲೂಕಿನಲ್ಲಿ ಮೀಸಲಾತಿಯ ಮೂಲಕ ಆಯ್ಕೆಯಾದ ಪರಿಶಿಷ್ಟ ಪಂಗಡದ ಸದಸ್ಯರ ವಿವರಗಳನ್ನು ಗಮನಿಸಬಹುದು. ಗಂಗಾವತಿ ತಾಲೂಕಿನಲ್ಲಿ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನೀಡಿರುವ ಮೀಸಲಾತಿ ಸೌಲಭ್ಯವನ್ನು ಪರಿಶಿಷ್ಟ ಪಂಗಡದವರು ಸಮರ್ಪಕವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ.

ಗಂಗಾವತಿ ತಾಲೂಕಿನ ೩೮ ಗ್ರಾಮ ಪಂಚಾಯತಿಗಳಿಗೆ ಆಯ್ಕೆಯಾದ ಪರಿಶಿಷ್ಟ ಪಂಗಡದ ಸದಸ್ಯರ ಮಾಹಿತಿ ವಿವರ.

ಕ್ರ. ಸಂ.	ಗ್ರಾಮ ಪಂಚಾಯತ್	ಚುನಾವಣಾ ಕ್ಷೇತ್ರದ ಸಂಖ್ಯೆ, ಹೆಸರು	ಆಯ್ಕೆಯಾದ ಸದಸ್ಯರು	ಪ್ರವರ್ಗ ಎಸ್.ಟಿ.
೧	ಆನೆಗೊಂದಿ ಗ್ರಾಮ ಪಂಚಾಯತಿ	ಆನೆಗೊಂದಿ-೧ ಸಣಾಪುರ-೨	೧. ಶ್ರೀಮತಿ ಲಕ್ಷ್ಮೀದೇವಿ ದಾನೇಶ ೨. ಶ್ರೀ ದುರಣಗೇಣಿ ವೆಂಕಟೇಶ ಈರಣ್ಣ ೩. ಹನುಮಂತ ಅಂಜನಪ್ಪ	ಮಹಿಳೆ ಪುರುಷ ಪುರುಷ
೨	ಸಂಗಾಪುರ ಗ್ರಾಮ ಪಂಚಾಯತಿ	ಸಂಗಾಪುರ ೧	ಹುಲಿಗೆಮ್ಮ ಗಂ. ಮಹಾದೇವಪ್ಪ	ಮಹಿಳೆ
೩	ಡಣಾಪುರ ಗ್ರಾಮ ಪಂಚಾಯತಿ	ಹೆಬ್ಬಾಳ-೨ ಜಂಗಮರ ಕಲ್ಗುಡಿ-೧	೧. ಅಂಜನಮ್ಮ ಗಂ. ಗೋವಿಂದಪ್ಪ ೨. ಶರಣಬಸಪ್ಪ ಶಿವನಾಯಕಪ್ಪ	ಮಹಿಳೆ ಪುರುಷ
೪	ಉಳೇನೂರು ಗ್ರಾಮ ಪಂಚಾಯತಿ	ಉಳೇನೂರು-೧ ಉಳೇನೂರು-೨ ಉಳೇನೂರು-೨ ಈಳಿಗನೂರು-೩	೧. ಲಕ್ಷ್ಮಣ ತಂ. ಫಕೀರಪ್ಪ ೨. ಕನಕಮ್ಮ ಫಕೀರಪ್ಪ ೩. ರಾಮಪ್ಪ ಹಿರೇಮಾರೆಪ್ಪ ೪. ಹನುಮಂತಪ್ಪ ಮರಿಸ್ವಾಮಿ	ಪುರುಷ ಮಹಿಳೆ ಪುರುಷ ಮಹಿಳೆ
೫	ಬೆನ್ನೂರು ಗ್ರಾಮ ಪಂಚಾಯತಿ	ಕಕ್ಕರೋಳ-೩ ನಂದಿಹಳ್ಳಿ	೧. ದ್ಯಾಮಣ್ಣ ಈರಪ್ಪ ೨. ನಾಗಮ್ಮ ಬಾಳಪ್ಪ	ಮಹಿಳೆ ಮಹಿಳೆ
೬	ಬೂದಗುಂಪಾ ಗ್ರಾಮ ಪಂಚಾಯತಿ	ಬೂದಗುಂಪ-೨ ಹಾಲಸಮುದ್ರ ಹಾಲಸಮುದ್ರ	೧. ಫಕೀರಪ್ಪ ತಂ. ಹನುಮಂತಪ್ಪ ೨. ಈರಮ್ಮ ಗಂ. ತಮ್ಮಣ್ಣ ಹೆಬ್ಬಡದ ೩. ಬೀಮಪ್ಪ ಫಕೀರಪ್ಪ ಹಂದ್ಯಾಳ	ಪುರುಷ ಮಹಿಳೆ ಪುರುಷ
೭	ಯರಡೋಣಾ ಗ್ರಾಮ ಪಂಚಾಯತಿ	ಯರಡೋಣಾ-೧ ಯರಡೋಣಾ-೨	೧. ಶ್ರೀಮತಿ ಲಕ್ಷ್ಮೀ ಗಂ. ಶರಣಪ್ಪ ಅಚ್ಚಳ್ಳಿ ೨. ಶ್ರೀ ಗಂಗಪ್ಪ ಗಂ. ಹುಲಗಪ್ಪ	ಮಹಿಳೆ ಪುರುಷ
೮	ಶ್ರೀರಾಮನಗರ ಗ್ರಾಮ ಪಂಚಾಯತಿ	ಶ್ರೀರಾಮನಗರ-೨ ಶ್ರೀರಾಮನಗರ-೬	೧. ಜಿ.ನೆಟ್ಟಿಕಲ್ಲಪ್ಪ ಹನುಮಪ್ಪ ೨. ಮಾರೆಮ್ಮ ಹನುಮಂತಪ್ಪ	ಪುರುಷ ಮಹಿಳೆ
೯	ಮರಳಿ ಗ್ರಾಮ ಪಂಚಾಯತಿ	ಮರಳಿ-೩ ಆಚಾರನರಸಾಪುರ-೧ ಆಚಾರನರಸಾಪುರ-೨	೧. ಹನುಮಂತಯ್ಯ ಭೀಮಪ್ಪ ೨. ಮಹಾಲಕ್ಷ್ಮಮ್ಮ ಫಕೀರಪ್ಪ ೩. ತಿಮ್ಮಣ್ಣ ಪಂಪಣ್ಣ	ಪುರುಷ ಮಹಿಳೆ ಪುರುಷ
೧೦	ವಡ್ಡರಹಟ್ಟಿ ಗ್ರಾಮ ಪಂಚಾಯತಿ	ವಡ್ಡರಹಟ್ಟಿ-೩ ವಡ್ಡರಹಟ್ಟಿ-೫ ಆರ್ಹಾಳ-೧ ಆರ್ಹಾಳ-೨	೧. ಎನ್.ವೀರೇಶ ನಾಯಕ ಸಿದ್ದಪ್ಪ ನಾಯಕ ೨. ಹುಲಿಗೆಮ್ಮ ಹೆಚ್.ನಾಗೇಶ ೩. ಹುಲಿಗೆಮ್ಮ ಹನುಮಂತಪ್ಪ ೪. ಕೆ.ಬಸವರಾಜ ಸಿದ್ದಪ್ಪ	ಪುರುಷ ಮಹಿಳೆ ಮಹಿಳೆ ಪುರುಷ
೧೧	ಬಸಾಪಟ್ಟಣ ಗ್ರಾಮ ಪಂಚಾಯತಿ	ಬಸಾಪಟ್ಟಣ-೨ ಬಸಾಪಟ್ಟಣ-೪ ಕವಳಕಲ್ಲ ಕ್ಯಾಂಪ್-೬	೧. ಹನುಮಂತಪ್ಪ ಹನುಮಂತಪ್ಪ ೨. ಕಣವೆಮ್ಮ ರಾಮಣ್ಣ ೩. ರಾಮಣ್ಣ ಮಾರೆಪ್ಪ	ಪುರುಷ ಮಹಿಳೆ ಪುರುಷ
೧೨	ವೆಂಕಟಗಿರಿ ಗ್ರಾಮ ಪಂಚಾಯತಿ	ವೆಂಕಟಗಿರಿ-೨ ಉಡುಮಕಲ್ ದಾಸನಾಳ	೧. ಶ್ರೀಮತಿ ಹನುಮಮ್ಮ ರಾಜಪ್ಪ ೨. ಹನುಮಮ್ಮ ಗಂ. ಪಸಪ್ಪ ೩. ಶ್ರೀ ನಿಂಗಪ್ಪ ಭೋಜಪ್ಪ ೪. ರಾಮಲಿಂಗಪ್ಪ ತಂ. ಹನುಮಯ್ಯ ಗಟಾಲಿ	ಮಹಿಳೆ ಮಹಿಳೆ ಪುರುಷ ಪುರುಷ

೧೩	ಆಗೋಲಿ	ಆಗೋಲಿ-೨ ಹಂಪಸದುರ್ಗ ವಿಠಲಾಪುರ	೧. ಹನುಮನಗೌಡ ತಂ. ಬಸನಗೌಡ ೨. ನೀಲಮ್ಮ ಗಂ. ಹನುಮಂತಪ್ಪ ೩. ರಾಮಲಿಂಗಪ್ಪ ತಂ. ಹನುಮಯ್ಯ ಗಟಾಲಿ	ಪುರುಷ ಮಹಿಳೆ ಪುರುಷ
೧೪	ಚಿಕ್ಕ ಬೆಣಕಲ್	ಚಿಕ್ಕಜಂತಕಲ್ ಮುಕ್ಕುಂಪಿ-೧ ಮುಕ್ಕುಂಪಿ-೨ ಹಿರೇಬೆಣಕಲ್	೧. ತಿಮ್ಮನಗೌಡ ತಂ. ಕನಕನಗೌಡ ೨. ಮುದ್ದಾನಮ್ಮ ತಂ. ನಿಂಗಪ್ಪ ೩. ಹನುಮಂತಪ್ಪ ತಂ. ಭೀಮಪ್ಪ ೪. ಶರಣಮ್ಮ ಗಂ. ದ್ಯಾವಣ್ಣ	ಪುರುಷ ಮಹಿಳೆ ಪುರುಷ ಮಹಿಳೆ
೧೫	ಚಿಕ್ಕಮಾದಿನಾಳ	ಚಿಕ್ಕಮಾದಿನಾಳ-೨ ಚಿಕ್ಕಮಾದಿನಾಳ ರಾಮದುರ್ಗ ಹಿರೇಮಾದಿನಾಳ	೧. ದೇವಮ್ಮ ಬಸಪ್ಪ ತಳವಾರ ೨. ರಾಮಣ್ಣ ಯಮನಪ್ಪ ೩. ಶಾರದಮ್ಮ ಯಂಕಪ್ಪ ೪. ಮಾದಿನಾಳಪ್ಪ ಹನುಮಂತಪ್ಪ	ಮಹಿಳೆ ಪುರುಷ ಮಹಿಳೆ ಪುರುಷ
೧೬	ಸುಳೇಕಲ್	ಸುಳೇಕಲ್	೧. ಹನುಮವ್ವ ಸಂಕ್ರಪ್ಪ	ಮಹಿಳೆ
೧೭	ಹಿರೇಖೇಡ	ಹಿರೇಖೇಡ ಹಿರೇಖೇಡ ಶಿರವಾರ ಮಲ್ಲಿಗೆವಾಡ ಮಲ್ಲಿಗೆವಾಡ ಗೋಡಿನಾಳ	೧. ಹನುಮವ್ವ ಸಿದ್ದಪ್ಪ ೨. ಸಣ್ಣ ಸಿದ್ದೇಶ ಮುದುಕಪ್ಪ ೩. ವೀರೇಶಪ್ಪ ಭೀಮಪ್ಪ ನಾಯಕ ೪. ವೀರಮ್ಮ ಬಸವರಾಜ ಪೂಜಾರಿ ೫. ಯಮುನಪ್ಪ ಹಿರೇಹನುಮಂತಪ್ಪ ೬. ಪಾಮಪ್ಪ ಭೀಮಪ್ಪ	ಮಹಿಳೆ ಪುರುಷ ಪುರುಷ ಮಹಿಳೆ ಪುರುಷ ಪುರುಷ
೧೮	ಕೇಸರಹಟ್ಟಿ	ಕೇಸರಹಟ್ಟಿ-೨ ಕೇಸಕ್ಕಿ ಹಂಚಿನಾಳ ಕೇಸಕ್ಕಿ ಹಂಚಿನಾಳ ಮಲಕನಮರಡಿ	೧. ಪಾರ್ವತಮ್ಮ ಪಂಪಾಪತಿ ೨. ಹನುಮಂತಿ ಶರಣಪ್ಪ ೩. ಯಂಕನಗೌಡ ಹನುಮನಗೌಡ ೪. ಪಂಪನಗೌಡ ಕನಕನಗೌಡ	ಮಹಿಳೆ ಮಹಿಳೆ ಪುರುಷ ಪುರುಷ
೧೯	ಹೇರೂರು	ಹೇರೂರು-೪ ಭಟ್ಟರಹಂಚಿನಾಳ	೧. ಈರಣ್ಣ ಪಕೀರಪ್ಪ ೨. ಹುಲಿಗೆಮ್ಮ ಮಾರೆಪ್ಪ	ಪುರುಷ ಮಹಿಳೆ
೨೦	ಹೊಸಕೇರಾ	ಹೊಸಕೇರಾ ಹೊಸಕೇರಾ ಕ್ಯಾಂಪ್ ಕೋಟಯ್ಯ ಕ್ಯಾಂಪ್	೧. ಹೆಚ್.ಉಮೇಶ ಸೋಮಪ್ಪ ೨. ಶರಣಮ್ಮ ಶಿವಬಸಪ್ಪ ೩. ಜಂಬಲಯ್ಯ ಅಯ್ಯಪ್ಪ	ಪುರುಷ ಮಹಿಳೆ ಪುರುಷ
೨೧	ಹಣವಾಳ	ಹಣವಾಳ-೧ ಹಣವಾಳ-೩	೧. ಉಡಚನಗೌಡ ತಂ. ಲಿಂಗರಾಜ ೨. ಸುಲೋಚನಮ್ಮ ತಾ. ಲಕ್ಷ್ಮಮ್ಮ	ಪುರುಷ ಮಹಿಳೆ
೨೨	ಗುಂಡೂರು	ಗುಂಡೂರು-೨ ಲಕ್ಷ್ಮೀಕ್ಯಾಂಪ್ ಸಿಂಗನಾಳ-೨	೧. ಹನುಮಂತಪ್ಪ ನರಸಪ್ಪ ೨. ನರಸಿಂಹ ಸಂಜೀವಪ್ಪ ೩. ಗೌರಮ್ಮ ಶಂಕ್ರಪ್ಪ	ಪುರುಷ ಪುರುಷ ಮಹಿಳೆ
೨೩	ಮರ್ಲಾನಹಳ್ಳಿ	ಮರ್ಲಾನಹಳ್ಳಿ-೧ ಮರ್ಲಾನಹಳ್ಳಿ-೨ ಮರ್ಲಾನಹಳ್ಳಿ-೩ ಮರ್ಲಾನಹಳ್ಳಿ-೪ ಜೂರಟಗಿ	೧. ಈರೇಶಪ್ಪ ದುರುಗಪ್ಪ ೨. ಗಂಗಮ್ಮ ಜೆ.ಶರಣಪ್ಪ ೩. ಯಮನೂರಪ್ಪ ಹನುಮಂತಪ್ಪ ೪. ಹುಲಿಗೆಮ್ಮ ವೀರೇಶ ೫. ಯಂಕಪ್ಪ ಪರಸಪ್ಪ	ಪುರುಷ ಮಹಿಳೆ ಪುರುಷ ಮಹಿಳೆ ಪುರುಷ
೨೪	ಉಳ್ಕಿಹಾಳ	ಉಳ್ಕಿಹಾಳ-೧ ಉಳ್ಕಿಹಾಳ-೨ ಹಗೇದಾಳ ತೊಂಡಿಹಾಳ-೧ ತೊಂಡಿಹಾಳ ತೊಂಡಿಹಾಳ-೨	೧. ವಿರುಪಣ್ಣ ತಂ. ರಾಯಪ್ಪ ೨. ಟಾಕಪ್ಪ ತಂ. ತಿರುಪತಿ ೩. ಅಡಿವೆಪ್ಪ ತಂ. ಗಿದ್ದಿಈಶಪ್ಪ ೪. ಶರಣಪ್ಪ ತಂ. ಬಾಲದಂಡಪ್ಪ ೫. ಶ್ರೀಮತಿ ಜಂಬಮ್ಮ ಗಂ. ಸಣ್ಣ ಹನುಮನಗೌಡ ೬. ಶ್ರೀಮತಿ ಶಿವಕುಮಾರಿ ಗಂ. ಯಮುನಪ್ಪ	ಪುರುಷ ಪುರುಷ ಪುರುಷ ಪುರುಷ ಮಹಿಳೆ ಮಹಿಳೆ

೨೫	ಕಾರಟಗಿ	ಕಾರಟಗಿ-೨ ಕಾರಟಗಿ-೫ ಕಾರಟಗಿ-೬ ಕಾರಟಗಿ-೭ ಕಾರಟಗಿ-೮ ಕಾರಟಗಿ-೧೨ ಕಾರಟಗಿ-೧೪	೧. ಲಕ್ಕಮ್ಮ ಹನುಮಂತಪ್ಪ ೨. ಗಂಗಮ್ಮ ತಿಮ್ಮಣ್ಣ ೩. ರಂಗಪ್ಪ ಸಿದ್ದಪ್ಪ ಬಂಡಿ ೪. ಲಕ್ಷ್ಮಿ ರಂಗಪ್ಪ ೫. ಡಿ.ಕಂಪ್ಲಪ್ಪ ಬಸಣ್ಣನಾಯಕ ೬. ಈರಣ್ಣ ದುರುಗೇಶ ೭. ಪ್ರಭುರಾಜ ರೆಡ್ಡೆಪ್ಪ ನಾಯಕ	ಮಹಿಳೆ ಮಹಿಳೆ ಪುರುಷ ಮಹಿಳೆ ಪುರುಷ ಪುರುಷ ಪುರುಷ
೨೬	ಚಳ್ಳೂರು	ಚಳ್ಳೂರು-೧ ಚಳ್ಳೂರು-೨ ಚಳ್ಳೂರು ಕ್ಯಾಂಪ್-೩ ಗುಂಡೂರು ಸೋಮನಾಳ	೧. ಶರಣಪ್ಪ ಶಿವಣ್ಣ ೨. ದುರುಗಮ್ಮ ಬಸವರಾಜ ೩. ನಿಂಗಪ್ಪ ರಾಮಣ್ಣ ೪. ಲಕ್ಕಪ್ಪ ಹನುಮಂತಪ್ಪ ಬಗಡಿಮ್ಯಾಳ್ ೫. ಚನ್ನಮ್ಮ ಹನುಮಂತಪ್ಪ ಗುಡಿಸಲಿ	ಪುರುಷ ಮಹಿಳೆ ಪುರುಷ ಪುರುಷ ಮಹಿಳೆ
೨೭	ಚಿಕ್ಕಡಂಕನಕಲ್	ಚಿಕ್ಕಡಂಕನಕಲ್-೧ ಚಿಕ್ಕಡಂಕನಕಲ್-೧ ಹಿರೇಡಂಕನಕಲ್-೨ ಜೀರ್‍ಹಾಳ ಚಿರ್ಚನಗುಡ್ಡ	೧. ಕಮಲಾಕ್ಷಿ ಗಂ. ಕರಿಯಪ್ಪ ೨. ಹನುಮಂತಪ್ಪ ಬಸಪ್ಪ ೩. ಮಹಾದೇವಮ್ಮ ಗಂ. ಅಯ್ಯಪ್ಪ ೪. ಬೆಟ್ಟಪ್ಪ ತಂ. ಬಸಪ್ಪ ೬. ನಾಗಪ್ಪ ತಂ. ಲಚಮಪ್ಪ	ಮಹಿಳೆ ಪುರುಷ ಮಹಿಳೆ ಪುರುಷ ಪುರುಷ
೨೮	ಕನಕಗಿರಿ	ಕನಕಗಿರಿ-೨ ಕನಕಗಿರಿ-೩	೧. ಹೊನ್ನಮ್ಮ ಕನಕರಾಯ ೨. ನಾಗಪ್ಪ ಹನುಮಂತಪ್ಪ ಹಂಚಿನಾಳ	ಮಹಿಳೆ ಪುರುಷ
೨೯	ನವಲಿ	ನವಲಿ-೧ ನವಲಿ-೩ ಆದಾಪುರ	೧. ವಿಶಾಲಾಕ್ಷಮ್ಮ ಗಂ. ಹೊಳೆಯಪ್ಪ ೨. ವಾಟೆಪ್ಪ ದುರುಗಪ್ಪ ೩. ಶಿವಪ್ಪ ತಿಪ್ಪಯ್ಯ	ಮಹಿಳೆ ಪುರುಷ ಪುರುಷ
೩೦	ಗೌರಿಪುರ	ಗೌರಿಪುರ ಅಡವಿಬಾವಿ ಸೋಮಸಾಗರ ಉಲುಸನಹಟ್ಟಿ	೧. ಹೊಳೆಯಮ್ಮ ಹನುಮಂತಪ್ಪ ನಾಯಕ ೨. ದುರುಗಪ್ಪ ದೇವಪ್ಪ ೩. ಮಹಾಂತಪ್ಪ ಹಿರೇನಾಗಪ್ಪ ೪. ಕುಂಟೆಪ್ಪ ಗಿಡ್ಡಪ್ಪ ಕುರಿ	ಮಹಿಳೆ ಪುರುಷ ಪುರುಷ ಪುರುಷ
೩೧	ಹುಲಿಹೈದರ	ಹುಲಿಹೈದರ-೧ ಹುಲಿಹೈದರ-೧ ಹುಲಿಹೈದರ-೨ ಹುಲಿಹೈದರ-೩ ಲಾಯದುಣಸಿ ಹನುಮನಾಳ ಬೈಲಕ್ಕಂಪುರ ಬಸರಿಹಾಳ ಬಸರಿಹಾಳ	೧. ಸಂತ್ಯಪ್ಪ ಕನಕಪ್ಪ ನಾಮಸೇವೆ ೨. ರಾಮಣ್ಣ ಹನುಮಂತಪ್ಪ ೩. ವೆಂಕಟಮ್ಮ ಹನುಮೇಶಪ್ಪ ನಾಯಕ ೪. ಹುಲಿಗೆಮ್ಮ ಕನಕಪ್ಪ ೫. ವೆಂಕೋಬ ಸಗರಪ್ಪ ೬. ರಾಮನಗೌಡ ಬಾಲನಗೌಡ ೭. ಭೀಮಪ್ಪ ಹನುಮಪ್ಪ ೮. ಬಸಮ್ಮ ದೇವಪ್ಪ ೯. ನಾಗಪ್ಪ ಗಿರಿಯಪ್ಪ	ಪುರುಷ ಪುರುಷ ಮಹಿಳೆ ಮಹಿಳೆ ಪುರುಷ ಪುರುಷ ಪುರುಷ ಮಹಿಳೆ ಪುರುಷ
೩೨	ಕರಡೋಣ	ಕರಡೋಣ ಕರಡೋಣ ಕರಡೋಣ ಬುನ್ನಟ್ಟಿ ವಡಕಿ ವಡಕಿ ವಡಕಿ ಗುಡದೂರು	೧. ಶ್ರೀಮತಿ ಹುಲಿಗೆಮ್ಮ ಕರೀಗೌಡ ೨. ಅಡಿವೆಪ್ಪ ಬಾಲಪ್ಪ ೩. ಶರಣಪ್ಪ ಮಹಾಂತಪ್ಪ ೪. ಮಲ್ಲಮ್ಮ ಯಂಕನಗೌಡ ೫. ಲಕ್ಷ್ಮಮ್ಮ ಸಣ್ಣ ಲಕ್ಷ್ಮನಗೌಡ ೬. ಲಕ್ಷ್ಮಪ್ಪ ದೇವಪ್ಪ ೭. ಯಂಕಪ್ಪ ಕನಕಪ್ಪ ೮. ಪಕೀರಪ್ಪ ಈರಪ್ಪ ಗಣದಾಳರ್	ಮಹಿಳೆ ಪುರುಷ ಪುರುಷ ಮಹಿಳೆ ಮಹಿಳೆ ಪುರುಷ ಪುರುಷ ಪುರುಷ
೩೩	ಬೇವಿನಾಳ	ಬೇವಿನಾಳ-೧ ಮೈಲಾಪುರ-೨ ಮೈಲಾಪುರ-೨	೧. ನಾಗಪ್ಪ ಶರಣಪ್ಪ ೨. ನಾಗಪ್ಪ ಶಂಕ್ರಪ್ಪ ೩. ಸಾವಿತ್ರಮ್ಮ ಲಚಮಪ್ಪ	ಪುರುಷ ಪುರುಷ ಮಹಿಳೆ

೩೪	ಮುಸಲಾಪುರ	ಮುಸಲಾಪುರ ರಾಂಪುರ	೧. ಹನುಮೇಶಪ್ಪ ತಂ. ಲಚಮಪ್ಪ ೨. ಸುಲೋಚನ ಗಂ. ಕನಕಪ್ಪ	ಪುರುಷ ಮಹಿಳೆ
೩೫	ಮುಸ್ಟೂರು	ಮುಸ್ಟೂರು	೧. ಯಮುನಮ್ಮ ಗಂ. ದುರುಗಪ್ಪ	ಮಹಿಳೆ
೩೬	ಸಿದ್ದಾಪುರ	ಸಿದ್ದಾಪುರ	೧. ಲಲಿತಮ್ಮ ಹನುಮಂತಪ್ಪ	ಮಹಿಳೆ
೩೭	ಸುಳೇಕಲ್	ಸುಳೇಕಲ್-೧	೧. ಹನುಮವ್ವ ಶಂಕ್ರಪ್ಪ	ಮಹಿಳೆ
೩೮	ಚಿಕ್ಕಜಂತಕಲ್	ಚಿಕ್ಕಜಂತಕಲ್	೧. ಶಾರದಮ್ಮ ದುರುಗಪ್ಪ ೨. ಫಕೀರಪ್ಪ ಉಡಚಪ್ಪ	ಮಹಿಳೆ ಪುರುಷ

ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಪಂಗಡದ ಅಧ್ಯಕ್ಷ / ಉಪಾಧ್ಯಕ್ಷರ ಮೀಸಲಾತಿ ವಿವರ

ಕ್ರ ಸಂ.	ಗ್ರಾಮ ಪಂಚಾಯತ್	ಅಧ್ಯಕ್ಷರ ಹೆಸರು	ಉಪಾಧ್ಯಕ್ಷರ ಹೆಸರು	ಎಸ್.ಟಿ. ಮೀಸಲಾತಿ
೧	ಆನೆಗೊಂದು	ಶ್ರೀ ದುರುಣಿಗೇಣಿ ವೆಂಕಟೇಶ್ವರ ಈರಣ್ಣ		ಪುರುಷ
೨	ಮಲ್ಲಾಪುರ		ಹುಲಗೆಮ್ಮ ಜಿ.ಹನುಮಯ್ಯ	ಮಹಿಳೆ
೩	ಡಣಾಪುರ		ಅಂಜನಮ್ಮ ಗಂ. ಗೋವಿಂದಪ್ಪ	ಮಹಿಳೆ
೪	ಮರಳಿ	ಹನುಮಂತಯ್ಯ ಭೀಮಪ್ಪ		ಪುರಷ
೫	ಗುಂಡೂರು		ಗೌರಮ್ಮ ಶಂಕ್ರಪ್ಪ	ಸಾಮಾನ್ಯ
೬	ಕೇಸರಹಟ್ಟಿ	ಯಂಕನಗೌಡ ಹನುಮನಗೌಡ		ಸಾಮಾನ್ಯ
೭	ಚಿಕ್ಕಬೆಣಕಲ್	ಮುದ್ದಾನಮ್ಮ ತಂ. ನಿಂಗಪ್ಪ		ಮಹಿಳೆ
೮	ಬೂದಗುಂಪ	ಭೀಮಪ್ಪ ಪಕೀರಪ್ಪ ಹಂದ್ಯಾಳ		ಸಾಮಾನ್ಯ
೯	ಮರ್ಲಾನಹಳ್ಳಿ	ಯಮನೂರಪ್ಪ ಹನುಮಂತಪ್ಪ		ಸಾಮಾನ್ಯ
೧೦	ಕಾರಟಗಿ	ಲಕ್ಕಮ್ಮ ಹನುಮಂತಪ್ಪ		ಮಹಿಳೆ
೧೧	ಬೇವಿನಾಳ		ನಾಗಪ್ಪ ಶರಣಪ್ಪ	ಸಾಮಾನ್ಯ
೧೨	ನವಲಿ		ವ್ಯಾಟೆಪ್ಪ ದುರುಗಪ್ಪ	ಸಾಮಾನ್ಯ
೧೩	ಗೌರಿಪುರ		ಕುಂಟೆಪ್ಪ ಗಿಡ್ಡಪ್ಪ ಕುರಿ	ಸಾಮಾನ್ಯ
೧೪	ಮುಸಲಾಪುರ		ಶಿವಮ್ಮ ಗಂ. ಬಸನಗೌಡ	ಮಹಿಳೆ

ಗಂಗಾವತಿ ತಾಲೂಕಿನ ೩೮ ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಮೀಸಲಿರಿಸಿದ ಅಧ್ಯಕ್ಷ / ಉಪಾಧ್ಯಕ್ಷರ ಹುದ್ದೆ

ಕ್ರ ಸಂ.	ವರ್ಗ	ಸಾಮಾನ್ಯ	ಮಹಿಳೆ	ಒಟ್ಟು
೧	ಪ.ಜಾತಿ	೬	೩	೯
೨	ಪ.ಪಂಗಡ	೫	೩	೮
೩	ಹಿ.ವರ್ಗ-೬	೭	೩	೧೦
೪	ಹಿಂ.ವರ್ಗ ಬ	೨	೧	೩
೫	ಸಾಮಾನ್ಯ	೫	೩	೮
	ಒಟ್ಟು	೨೫	೧೩	೩೮

ಗಂಗಾವತಿ ತಾಲೂಕಿನ ತಾಲೂಕ ಪಂಚಾಯತಿಗಳಿಗೆ ಪರಿಶಿಷ್ಟ ಪಂಗಡದ ವಿವರ

ಕ್ರ.ಸಂ.	ಕ್ಷೇತ್ರದ ಹೆಸರು	ಸದಸ್ಯರ ಹೆಸರು	ವಿಳಾಸ	ಪೋಸ್ಟ್
೧	ಕರಡೋಣಾ ಪರಿಶಿಷ್ಟ ಪಂಗಡದ ಮಹಿಳೆ	ಶ್ರೀಮತಿ ಸಾವಿತ್ರಮ್ಮ ನಾಗಪ್ಪ	ಆಕಳಕುಂಪಿ	ಕರಡೋಣಾ
೨	ವೆಂಕಟಗಿರಿ ಪರಿಶಿಷ್ಟ ಪಂಗಡದ ಮಹಿಳೆ	ಶ್ರೀಮತಿ ಕಾರಟಗಿ ಶಾಂತಮ್ಮ ಭೀಮಪ್ಪ	ಉಡುಮಕಲ್	ಉಡುಮಕಲ್
೩	ಸುಳೇಕಲ್ ಪರಿಶಿಷ್ಟ ಪಂಗಡದ ಪುರುಷ	ಶ್ರೀ ವೆಂಕನಗೌಡ ಬಸನಗೌಡ ಗೌಡರ್	ಕೆ.ಕಾಟಾಪುರ	ಕನಕಗಿರಿ
೪	ಚಳ್ಳುರು ಪರಿಶಿಷ್ಟ ಪಂಗಡದ ಪುರುಷ	ಶ್ರೀ ನಿಂಗಪ್ಪ ಹನುಮಂತಪ್ಪ ಪನ್ನಾಪುರ	ತೊಂಡಿಹಾಳ	ತೊಂಡಿಹಾಳ
೫	ಹುಲಿಹೈದರ	ಶ್ರೀ ನಾಗಪ್ಪ ಗಿರಯಪ್ಪ ಬಸರಿಹಾಳ	ನವಲಿ	ನವಲಿ

ಗಂಗಾವತಿ ತಾಲೂಕಿನ ಜಿಲ್ಲಾ ಪಂಚಾಯತ್ ಸ್ಥಾನಗಳಲ್ಲಿ ಪರಿಶಿಷ್ಟ ಪಂಗಡದ ಮೀಸಲಾತಿ

ಕ್ರ.ಸಂ.	ಕ್ಷೇತ್ರ	ಸದಸ್ಯರ ಹೆಸರು	ವಿಳಾಸ
೧	ಹುಲಿಹೈದರ ಪರಿಶಿಷ್ಟ ಪಂಗಡದ ಮಹಿಳೆ	ಸುಜಾತ/ಹನುಮೇಶ ನಾಯಕ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

ಗಂಗಾವತಿ ತಾಲೂಕಿನ ವಿವಿಧ ಪಂಚಾಯತ್‌ಗಳಲ್ಲಿ ಪರಿಶಿಷ್ಟ ಪಂಗಡದ ಹಲವಾರು ಪುರುಷ ಮತ್ತು ಮಹಿಳಾ ಪ್ರತಿನಿಧಿಗಳ ಆಯ್ಕೆಯಾಗಿರುವುದು ತಿಳಿದುಬರುತ್ತದೆ. ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳು ತಿಳಿದುಬರುತ್ತವೆ.

೫.೭ ಯೋಜನೆಗಳ ಅನುಷ್ಠಾನ ಮತ್ತು ಜನಪ್ರತಿನಿಧಿಗಳು :

ಭಾರತ ರಾಷ್ಟ್ರವು ಹಲವಾರು ಬುಡಕಟ್ಟು ಸಮುದಾಯಗಳಿಂದ ಕೂಡಿದೆ. ಈ ಬುಡಕಟ್ಟು ಸಮುದಾಯಗಳು ಅನಾದಿಕಾಲದಿಂದಲೂ ಮೇಲ್ವರ್ಗದವರ ತುಳಿತಕ್ಕೆ ಒಳಗಾಗಿವೆ. ಈ ವರ್ಗದ ಜನರನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಸಂವಿಧಾನವು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಹಲವಾರು ಪಂಚಾಯತ್ ಯೋಜನೆಗಳು ಇಡೀ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಕಾರ್ಯರೂಪಕ್ಕೆ ತಂದಿವೆ. ಈ ಯೋಜನೆಗಳು ವಿಶ್ವದಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳುವಂತೆ ಮಾಡಿವೆ. ಬುಡಕಟ್ಟು ಸಮುದಾಯಗಳು ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿವೆ. ಅವುಗಳೆಂದರೆ ಅನಕ್ಷರತೆ, ಬಡತನ, ನಿರುದ್ಯೋಗ ಮುಂತಾದವುಗಳು. ಬುಡಕಟ್ಟು ಸಮುದಾಯಗಳು ಇಂದಿಗೂ ತಮ್ಮದೇ ಆದ ಭಾಷೆ, ಸಂಸ್ಕೃತಿ, ಮೂಢನಂಬಿಕೆ, ಆಚರಣೆಗಳು ವಿಭಿನ್ನವಾಗಿವೆ. ಇದರಿಂದ ನಾಗರಿಕ ಸಮಾಜದ ಜೊತೆಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುವಲ್ಲಿಯೂ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆ

ಮನಗಂಡ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿದೆ. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ೧೯೭೪-೭೫ ರಲ್ಲಿ ಗಿರಿಜನ ಉಪಯೋಜನೆಯನ್ನು ಪ್ರಾರಂಭಿಸಿತು. "ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೮ ಅಭಿವೃದ್ಧಿ ಇಲಾಖೆ, ನಿಗಮ ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ಶೇ. ೩ ನ್ನು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮೀಸಲಾಗಿಟ್ಟು ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಹಲವಾರು ಆರ್ಥಿಕ ಸೌಲಭ್ಯಗಳ ಜೊತೆಗೆ ಶೈಕ್ಷಣಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಒದಗಿಸುತ್ತದೆ. ಅಲ್ಲದೆ ಕುಡಿಯುವ ನೀರಿನ ಪೂರೈಕೆ, ವಿದ್ಯುದ್ಧೀಕರಣ, ವೈದ್ಯಕೀಯ ಸೌಲಭ್ಯ, ವಸತಿ, ಸಂಪರ್ಕ, ರಸ್ತೆ ಮುಂತಾದ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಲಾಗುತ್ತದೆ. ಬುಡಕಟ್ಟುಪರ ಯೋಜನೆಗಳನ್ನು ನೇರವಾಗಿ ಫಲಾನುಭವಿಗಳಿಗೆ ಮುಟ್ಟಲು ಹಾಗು ಅನವಶ್ಯಕ ವಿಳಂಬವನ್ನು ತಪ್ಪಿಸಲು ಮತ್ತು ಪರಿಣಾಮಕಾರಿಯಾಗಿ ಯೋಜನೆಗಳನ್ನು ಪರಿವೀಕ್ಷಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯತ್, ತಾಲೂಕ ಪಂಚಾಯತ್ ಮೂಲಕ ಕೇಂದ್ರ ಪುರಸ್ಕೃತ ಯೋಜನೆಗಳೆಂದು ವಿಭಜಿಸಿ ಅನುಷ್ಠಾನಗೊಳಿಸಲಾಗುತ್ತಿವೆ."[೧೧] ಈ ರೀತಿಯಾಗಿ ಬುಡಕಟ್ಟು ಸಮುದಾಯಗಳು ಅಭಿವೃದ್ಧಿ ಹೊಂದುವುದಕ್ಕೆ ಯೋಜನೆಗಳು ಸಹಕಾರಿಯಾಗಿವೆ. ಈ ಯೋಜನೆಗಳ ಸಂಪೂರ್ಣ ಸದುಪಯೋಗವನ್ನು ಬುಡಕಟ್ಟು ಸಮುದಾಯಗಳು ಪಡೆದುಕೊಂಡಿಲ್ಲ. ಇದಕ್ಕೆ ಹಲವಾರು ಕಾರಣಗಳು. ಮೇಲ್ವರ್ಗದವರ ಅಧಿಕಾರದ ಹಿಡಿತ, ಅನಕ್ಷರತೆ, ಯೋಜನೆಗಳ ಬಗ್ಗೆ ಮಾಹಿತಿಯ ಕೊರತೆ, ಅನುಷ್ಠಾನಗೊಳಿಸುವಲ್ಲಿಯ ಸಮಸ್ಯೆಗಳು ಇನ್ನು ಮುಂತಾದವುಗಳು. ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಪ್ರಜಾಪ್ರತಿನಿಧಿಗಳು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಈ ಅಭಿವೃದ್ಧಿ ಕಾರ್ಯಕ್ರಮಗಳು ತಮ್ಮ ಪಂಗಡದವರಿಗಲ್ಲದೆ ಆ ಗ್ರಮದ ಅಭಿವೃದ್ಧಿಗಾಗಿ ಶ್ರಮಿಸಿರುವುದು ಕಂಡುಬರುತ್ತದೆ. ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗಾಗಿ ಶಿಕ್ಷಣಕ್ಕೆ ಮತ್ತು ವೈದ್ಯಕೀಯ ಸೌಲಭ್ಯಗಳಿಗೆ ಧನಸಹಾಯ ಮಾಡುವುದು ಕಂಡುಬಂದಿದೆ. ಶ್ರೀರಾಮನಗರ ಗ್ರಾಮ ಪಂಚಾಯತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ೨೦೦೭-೦೮ ನೇ ಸಾಲಿನಲ್ಲಿ ೬೫ ಸಾವಿರ ರೂಪಾಯಿಗಳನ್ನು ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳಿಗೆ ಹಣವನ್ನು ನಿಗದಿಗೊಳಿಸಿತ್ತು.

ಗಂಗಾವತಿ ತಾಲೂಕಿನ ಹಲವಾರು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಆಶ್ರಯ ಮನೆಗಳು, ರಸ್ತೆ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ರಸ್ತೆ ದೀಪಗಳು, ಕುಡಿಯುವ ನೀರಿನ ವ್ಯವಸ್ಥೆ, ಆರೋಗ್ಯ, ನೈರ್ಮಲ್ಯ,

ಶೌಚಾಲಯಗಳ ನಿರ್ಮಾಣವು ಜನಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿ ನಿರ್ಮಿಸಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಇತ್ತೀಚಿನ ದಿನಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಹಾಗೂ ಆರ್ಥಿಕತೆಯನ್ನು ಹೆಚ್ಚಿಸಲು ಎಲ್ಲ ವರ್ಗದವರಿಗೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಗ್ರಾಮ ಪಂಚಾಯತಿಗಳ ಜಾರಿಗೆ ತಂದಿವೆ. ಕನಕಗಿರಿ ಗ್ರಾಮ ಪಂಚಾಯತಿಯು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ೨.೫ ಕೋಟಿ ರೂಪಾಯಿಗಳನ್ನು ಸರ್ಕಾರವು ಮಂಜೂರು ಮಾಡಿದೆ. ಈ ಯೋಜನೆಯನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದು ಕಂಡುಬರುತ್ತದೆ. ಅದೇ ರಿತಿ ಕಾರಟಗಿ, ಹುಲಿಹೈದರ, ಸಿದ್ದಾಪುರ ಇನ್ನು ಮುಂತಾದ ಗ್ರಾಮ ಪಂಚಾಯತಿಗಳಲ್ಲಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಿರುವುದು ಕಂಡುಬರುತ್ತದೆ.

ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುವುದು ಕಂಡುಬಂದಿದೆ. ಈ ಯೋಜನೆಗಳ ಅನುಷ್ಠಾನದಲ್ಲಿ ಕೆಲವು ಗ್ರಾಮ ಪಂಚಾಯತಿಗಳಲ್ಲಿ ಅವ್ಯವಹಾರ, ಯೋಜನೆಗಳು ಸರಿಯಾದ ಫಲಾನುಭವಿಗಳಿಗೆ ದೊರೆಯದೇ ಇರುವುದು ಕ್ಷೇತ್ರ ಅಧ್ಯಯನದಿಂದ ಕಂಡುಬರುತ್ತದೆ. ಸ್ವತಂತ್ರ ಪೂರ್ವಕ್ಕಿಂತ ಮೊದಲಿಗಿದ್ದ ಬುಡಕಟ್ಟು ಜೀವನ ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ನಂತರ ಈ ಸಮುದಾಯಗಳಲ್ಲಿ ಹಲವಾರು ಬದಲಾವಣೆಗಳು ಮತ್ತು ಅಭಿವೃದ್ಧಿ ಕಂಡುಬಂದಿರುವುದು ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು :

೧. ಅಕ್ಕ ಮಹಾದೇವಿ; **ಬುಡಕಟ್ಟು ನ್ಯಾಯ**; ಪುಟ ೪೫-೪೬, ೧೯೮೪.

೨. ಅದೇ; ಪುಟ ೧೮,

೩. ಕರ್ನಾಟಕ ರಾಜ್ಯಕೋಶ-೪; ಪುಟ ೭೪,

೪. ಪ್ರಭಾಕರ ಎ.ಎಸ್.; **ಬುಡಕಟ್ಟು ಅಭಿವೃದ್ಧಿ ಮೀಮಾಂಸೆ**; ಪುಟ ೧೨೫. ೨೦೦೪.

೫. ಶ್ರೀಧರ ಎ.; **ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು**; ಪುಟ ೧೨. ೨೦೦೬.

೬. ರಾಜಶೇಖರ .ಹೆಚ್.ಎಮ್.; **ಭಾರತ ಸರ್ಕಾರ ಮತ್ತು ರಾಜಕೀಯ**; ಪುಟ ೪೧೨. ೧೯೯೯.

೭. ಕಾಳೇಗೌಡ ನಾಗವಾರ, ಹುಚ್ಚಪ್ಪ ಮಾಸ್ತಾರ .ಎನ್; **ಗಿರಿಜನ ಸಂಸ್ಕೃತಿ**; ಪುಟ ೨೬೫. ೨೦೦೦.

೮. ರಾಮಕೃಷ್ಣ ಹೆಚ್.ಆರ್., ರಾಜೀವ್. ಎಂ.ಆರ್.; **ಸರ್ಕಾರದ ಮೂಲಾಂಶಗಳು**; ಪುಟ ೨೪೭. ೧೯೯೯.

೯. ಶ್ರೀಧರ ಎ.; **ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು**; ಪುಟ ೩೦. ೨೦೦೬.

೧೦. ಅದೇ; ಪುಟ ೨೧.

೧೧. ಪ್ರಭಾಕಾರ ಎ.ಎಸ್.; **ಬುಡಕಟ್ಟು ಅಭಿವೃದಧಿ ಮೀಮಾಂಸೆ**; ಪುಟ ೧೧೫. ೨೦೦೪.

೧೨. ಅಕ್ಕಮಹಾದೇವಿ; **ಬುಡಕಟ್ಟು ನ್ಯಾಯ**; ಪುಟ ೫೫. ೧೬೮೪.

೧೩. ಪ್ರಜಾವಾಣಿ; ಭಾನುವಾರ ಅಗಸ್ಟ್ ೩, ೨೦೦೮, ಪುಟ ೩ಜಿ.

೧೪. ಪ್ರಜಾವಾಣಿ; ಭಾನುವಾರ ಅಗಸ್ಟ್ ೩, ೨೦೦೮, ಪುಟ ೩ಜಿ.

೧೫. ಅಕ್ಕಮಹಾದೇವಿ; **ಬುಡಕಟ್ಟು ನ್ಯಾಯ**; ಪುಟ ೧೮. ೧೬೮೪.

೧೬. ಅದೇ; ಪುಟ ೬೪.

೧೭. ಪ್ರಭಾಕರ ಎ.ಎಸ್.; **ಬುಡಕಟ್ಟು ಅಭಿವೃದ್ಧಿ ಮೀಮಾಂಸೆ**; ಪುಟ ೧೯೭-೧೯೮. ೨೦೦೪.

೧೮. ರುದ್ರಪ್ಪ ಕರಿಶೆಟ್ಟಿ; **ಮ್ಯಾಸನಾಯಕರು ಒಂದು ಜನಾಂಗೀಕ ಅಧ್ಯಯನ**; ಪುಟ ೯೩. ೧೯೯೫.

೧೯. ಪ್ರಜಾವಾಣಿ; ಮಂಗಳವಾರ ಜುಲೈ ೧, ೨೦೦೮, ಪುಟ ೧.

೨೦. ಹಸನ್ಮಿಯಾ; **ಸೃಷ್ಠಿ ಸ್ಮರಣ ಸಂಚಿಕೆ**; ೨೦೦೪-೦೫.

೨೧. ಪ್ರಭಾಕರ ಎ.ಎಸ್.; **ಬುಡಕಟ್ಟು ಅಭಿವೃದ್ಧಿ ಮೀಮಾಂಸೆ**; ೨೦೦೪.

ಅಧ್ಯಾಯ ೬

೬. ಸಮಾರೋಪ

ಸಮಾರೋಪ :

ಇಂದು ರಾಜಕೀಯ ಎಲ್ಲಾ ಕ್ಷೇತ್ರಗಳಿಗಿಂತ ಅತಿ ಪ್ರಭಾವಿ ಮತ್ತು ಪರಿಣಾಮಕಾರಿಯಾದ ಕ್ಷೇತ್ರವಗಿದೆ. ಎಲ್ಲಾ ಸಮುದಾಯಗಳು ರಾಜಕೀಯವಾಗಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಹವಣಿಸುತ್ತಿರುವುದು ಸರ್ವೇಸಾಮಾನ್ಯವಾಗಿ ಕಂಡುಬರುವ ಚಿತ್ರಣ. ಚುನಾವಣಾ ಪೂರ್ವದ ದಿನಗಳಲ್ಲಿ ಅನೇಕ ಹಿಂದುಳಿದ ಸಮುದಾಯಗಳ ಚಿತ್ರಣವನ್ನು ಗಮನಿಸುವುದಾದರೆ ಚುನಾವಣೆಯಲ್ಲಿ ಪ್ರಮುಖ ಪಕ್ಷಗಳ ಮೂಲಕ ಸ್ಪರ್ಧಿಸುವ ಸಲುವಾಗಿ ತಮ್ಮ ತಮ್ಮ ಸಮುದಾಯಗಳ ಜನತೆಯನ್ನು ಒಟ್ಟುಗೂಡಿಸಿ ಕೇಂದ್ರ ಸ್ಥಳಗಳಲ್ಲಿ ಅವುಗಳ ಪೆರೇಡ್ ನಡೆಸಿ ಬಲಪ್ರದರ್ಶನ ತೋರಿಸುವುದರ ಮೂಲಕ ಚುನಾವಣೆಗಳಲ್ಲಿ ಸ್ಥಾನ ಪಡೆದುಕೊಳ್ಳುತ್ತಿರುವ ಹುನ್ನಾರುಗಳನ್ನು ಕಾಣುತ್ತಿರುತ್ತೇವೆ. ಈ ನಾಡಿನ ಹರಿಜನ–ಗಿರಿಜನರು, ಹಿಂದುಳಿದ ವರ್ಗಗಳು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ರಾಜಕೀಯವಾಗಿ ಗುರುತಿಸಿಕೊಳ್ಳಲು ಹವಣಿಸುತ್ತಿರುವುದು ಕಂಡುಬರುತ್ತದೆ. ರಾಜಕೀಯವಾಗಿ ನಾವು ಪ್ರಬಲವಾಗಿ ಬೆಳೆದರೆ ಆರ್ಥಿಕತೆ ಮತ್ತು ಸಾಮಾಜಿಕ ಭದ್ರತೆ ತಾನಾಗಿಯೇ ಸಿಗುತ್ತದೆ ಎಂಬ ನಿಲುವು ಅನೇಕ ಹಿಂದುಳಿದ ಸಮುದಾಯಗಳದ್ದಾಗಿದೆ. ಈ ಕಾರಣಕ್ಕಾಗಿ ರಾಜಕೀಯ ಕ್ಷೇತ್ರ ಹಂತ ಹಂತವಾಗಿ ಜಟಿಲವಾಗುತ್ತಿದೆ. ಹಿಂದಿನ ರಾಜಕೀಯಕ್ಕೂ, ಇಂದಿನ ರಾಜಕೀಯಕ್ಕೂ ಅಜಗಜಾಂತರ ವ್ಯತ್ಯಾಸವಾಗುತ್ತಿದೆ. ಗ್ರಾಮ ಪಂಚಾಯತಿಯಿಂದ ಹಿಡಿದು ಲೋಕಸಭೆಯವರೆಗಿನ ರಾಜಕೀಯವನ್ನು ಗಮನಿಸಿದಾಗ ಇಲ್ಲಿ ತತ್ವ ಸಿದ್ಧಾಂತಗಳ ಮೂಲಕ ಯಾವ ಪಕ್ಷಗಳೂ ರಾಜಕಾರಣ ಮಾಡುತ್ತಿಲ್ಲ. ಅಧಿಕಾರ ಮತ್ತು ಹಣಕ್ಕಾಗಿ ಪಕ್ಷದಿಂದ ಪಕ್ಷಕ್ಕೆ ಹಾರಾಡುತ್ತಿರುವುದು ಸಾಮಾನ್ಯವಾದ ಚಿತ್ರಣ. ಯಾವ ಪಕ್ಷ ಅಧಿಕಾರದ ಚುಕ್ಕಾಣಿಯನ್ನು ಹಿಡಿಯುತ್ತಿದೆಯೋ ಆ ಪಕ್ಷಕ್ಕೆ ವಲಸೆ ಹೋಗಿ ಜಯಕಾರ ಹಾಕುವುದನ್ನು ಕಾಣುತ್ತೇವೆ.

ರಾಜಕೀಯವನ್ನು ಪ್ರವೇಶಿಸುತ್ತಿರುವ ಅನೇಕ ಆದಿವಾಸಿ ಸಮುದಾಯಗಳು ಮತ್ತು ಹಿಂದುಳಿದ ವರ್ಗಗಳು ಸಹ ಇಂದು ಅಧಿಕಾರ ಪಡೆಯುವುದಕ್ಕಾಗಿ ಪ್ರಬಲ ಕೋಮಿನವರ ಬೆನ್ನು ಹತ್ತಿ ತಮ್ಮತನವನ್ನು ಕಳೆದುಕೊಂಡು ಬತ್ತಲೆಯಾಗಿ ನಿಲ್ಲುತ್ತಿವೆ. ರಾಜಕೀಯ ಕ್ಷೇತ್ರದ ಮೂಲಕ ಹಿಂದುಳಿದವರು, ಬುಡಕಟ್ಟುಗಳು ಗುರುತಿಸಿಕೊಂಡ ಆಡಳಿತ ಕ್ಷೇತ್ರದಲ್ಲಿ ಒಂದು ದೊಡ್ಡ ಧ್ವನಿಯಾಗಿ ನಿಂತು ಆ ಸಮುದಾಯಗಳ ಏಳಿಗೆಗಾಗಿ ಶ್ರಮಿಸಬೇಕು. ಆದರೆ ಇಂದು ನಡೆಯುತ್ತಿರುವುದು ಬೇರೆ ಪ್ರಬಲ ಕೋಮಿನವರ ಸ್ವಾರ್ಥಕ್ಕಾಗಿ ರಾಜಕಾರಣ ಮಾಡುವಂತಹ ಪರಂಪರೆ ಪರಿಶಿಷ್ಟ ಹಾಗು ಹಿಂದುಳಿದ ವರ್ಗಗಳಲ್ಲಿಯೂ ಕಾಣಬರುತ್ತಿರುವುದು ದುರಂತವೇ ಸರಿ.

ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಟ್ಟಿಕೊಂಡಿರುವ ನಮ್ಮ ದೇಶದಲ್ಲಿ ರಾಜಕೀಯ ಜಾತಿ ಜಾತಿಗಳನ್ನು ವಿಂಗಡಿಸುತ್ತ ಅರಾಜಕತೆಯನ್ನು ಎಬ್ಬಿಸುತ್ತಿವೆ. ಚುನಾಯಿತ ಸದಸ್ಯರು ದೇಶದ ಅಭಿವೃದ್ಧಿಗಿಂತ ಸ್ವಂತ ಅಭಿವೃದ್ಧಿಗೆ ಹೆಚ್ಚಿನ ಆಸಕ್ತಿ ವಹಿಸುತ್ತಿರುವುದರಿಂದ ಅರಾಜಕತೆಯೇ ಹೆಚ್ಚಾಗಿ ಉಂಟಾಗುತ್ತಿದೆ. ಹಳ್ಳಿಯಿಂದ ಹಿಡಿದು ದಿಲ್ಲಿಯವರೆಗಿನ ಆಡಳಿತದಲ್ಲಿ ಈ ಅರಾಜಕತೆಯನ್ನು ಗಮನಿಸಬಹುದು. ಹಳ್ಳಿಗಳು ಭಾರತದ ಬೆನ್ನೆಲುಬು ಅವು ಅಭಿವೃದ್ಧಿ ಹೊಂದಿದರೆ ಮಾತ್ರ ದೇಶ ಅಭಿವೃದ್ಧಿ ಹೊಂದಿದಂತೆ. ಆದರೆ ಆಡಳಿತ ಹಿಡಿದ ರಾಜಕೀಯ ಪಕ್ಷಗಳಿಂದ ಹಳ್ಳಿಗಳ ಅಭಿವೃದ್ಧಿ ಸಾಧ್ಯವೇ ಎಂಬುದನ್ನು ನಾವು ಪ್ರಶ್ನಿಸಬೇಕಾದ ಅನಿವಾರ್ಯತೆ ಉಂಟಾಗಿದೆ.

ನಮ್ಮ ಸಂವಿಧಾನದಲ್ಲಿ ಸರ್ವರಿಗೂ ಸಮಪಾಲು, ಸಮಬಾಳು ಎಂಬ ನೀತಿ ಒಳಗೊಂಡಿದೆ. ಆದರೆ ವಾಸ್ತವವಾಗಿ ಆಚರಣೆಯಲ್ಲಿರುವುದೇ ಬೇರೆ. ಪರಿಶಿಷ್ಟರು ಹಾಗೂ ಹಿಂದುಳಿದವರು ಮೀಸಲಾತಿಯ ಮೂಲಕ ಆಡಳಿತದಲ್ಲಿ ಪಾಲ್ಗೊಳ್ಳಬೇಕೆಂದು ಕೆಳಮಟ್ಟದ ರಾಜಕೀಯ ರಂಗದಲ್ಲಿ ಮೀಸಲಾತಿಯನ್ನು ನೀಡಲಾಯಿತು. ಪರಿಶಿಷ್ಟರು ಮತ್ತು ಹಿಂದುಳಿದ ವರ್ಗದವರು ಈ ಮೀಸಲಾತಿಯ ಮೂಲಕ ಆಡಳಿತ ಯಂತ್ರದಲ್ಲಿ ಪ್ರವೇಶಿಸುತ್ತಾರೆ. ಅವರು ಆಡಳಿತದಲ್ಲಿ ಪ್ರವೇಶಿಸುವ ಸಂದರ್ಭದಲ್ಲಿ ಅನೇಕ ವಾಮಾಚಾರಗಳನ್ನಿಡಿದು ಪ್ರವೇಶಿಸಿದ್ದಾರೆ. ಇದರಿಂದ ಹಳ್ಳಿಗಳಲ್ಲಿ ಅನೇಕ ಕಲಹಗಳು ಉಂಟಾಗಿ ದ್ವೇಷದ ವಾತಾವರಣ ಸೃಷ್ಠಿಯಾಗಿ ಸದಾ ಹೊಗೆಯಾಡುತ್ತಿರುತ್ತದೆ.

ಪ್ರಬಲ ಕೋಮಿನ ಜನರ ರಾಜಕೀಯದ ಬೆನ್ನು ಹತ್ತಿದ ಅನೇಕ ಹರಿಜನ-ಗಿರಿಜನ ಸಮುದಾಯಗಳು ತಮ್ಮ ಕೈ ಸುಟ್ಟುಕೊಂಡಿರುವುದನ್ನು ವಿವಿಧ ಪ್ರದೇಶಗಳಲ್ಲಿ ಕಾಣುತ್ತೇವೆ. ರಾಜಕೀಯ ಎಂಬುದು ಸಮುದಾಯಗಳಲ್ಲಿ ವಿಶಿಷ್ಟವಾದ ಪ್ರಭಾವವನ್ನು ಬೀರಿದೆ. ಈ ವಿಶಿಷ್ಟವಾದ ಪ್ರಭಾವ ಗಂಗಾವತಿ ತಾಲೂಕಿನ ಪರಿಶಿಷ್ಟ ವರ್ಗದ ಜನರ ಮೇಲೆ ಹೇಗೆ ಬೀರಿದ ಎಂಬುದನ್ನು ಕುರಿತು ಅಧ್ಯಯನ ಕೈಗೊಂಡ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನ ಫಲಿತಗಳು :

೧. ಗಂಗಾವತಿ ತಾಲೂಕಿನಲ್ಲಿ ಮೇದ ಸಮುದಾಯವಿದ್ದರೂ ಅದನ್ನು ಪರಿಶಿಷ್ಟ ಪಂಗಡ ಎಂದು ಗುರುತಿಸದೇ ಇರುವುದು ಈ ಅಧ್ಯಯನದಲ್ಲಿ ಕಂಡುಬರುತ್ತದೆ.

೨. ಇಡೀ ಗಂಗಾವತಿ ತಾಲೂಕಿನಲ್ಲಿ ಬೇಡ ಅಥವಾ ನಾಯಕ ಸಮುದಾಯವನ್ನು ಮಾತ್ರ ಪರಿಶಿಷ್ಟ ಪಂಗಡವೆಂದು ಗುರುತಿಸಲಾಗಿದೆ.

೩. ಗಂಗಾವತಿ ತಾಲೂಕಿನಲ್ಲಿ ಒಟ್ಟು ೩೮ ಗ್ರಾಮ ಪಂಚಾಯತಿಗಳಿದ್ದು ಒಟ್ಟು ೮೦೨ ಸದಸ್ಯರು ಆಯ್ಕೆಯಾಗಿದ್ದಾರೆ. ಇದರಲ್ಲಿ ೧೩೧ ಸದಸ್ಯರು ಪರಿಶಿಷ್ಟ ಪಂಗಡದಿಂದ

ಮೀಸಲಾತಿ ಮೂಲಕವೇ ಆಯ್ಕೆಯಾಗಿದ್ದಾರೆ. ಸದಸ್ಯರಲ್ಲಿ ೭೭ ಜನ ಪುರುಷರು, ೫೪ ಮಹಿಳಾ ಸದಸ್ಯರು ಸೇರಿದ್ದಾರೆ.

೪. ಪರಿಶಿಷ್ಟ ಪಂಗಡದ ಸದಸ್ಯರಲ್ಲಿ ೮ ಜನರು ಅಧ್ಯಕ್ಷರಾಗಿ, ೭ ಜನ ಉಪಾಧ್ಯಕ್ಷರಾಗಿ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

೫. ಪರಿಶಿಷ್ಟ ಪಂಗಡದಲ್ಲಿ ಮೀಸಲಾತಿ ನೀಡಿದ್ದರ ಪರಿಣಾಮವಾಗಿ ೧೩೧ ಸದಸ್ಯರು ಆಯ್ಕೆಯಾಗಿದ್ದಾರೆ. ಇಲ್ಲದೇ ಹೋಗಿದ್ದರೆ ಇಷ್ಟು ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದ ಸದಸ್ಯರು ಆಯ್ಕೆಯಾಗಲು ಪ್ರಬಲ ಕೋಮಿನವರು ಬಿಡುತ್ತಿರಲಿಲ್ಲ.

೬. ಸಾಮಾನ್ಯ ಸದಸ್ಯನ ಕ್ಷೇತ್ರದಲ್ಲಿ ಈ ಪರಿಶಿಷ್ಟ ಪಂಗಡದ ಸದಸ್ಯರು ಆಯ್ಕೆಯಾಗದೇ ಇರುವುದು ಕಂಡುಬರುತ್ತದೆ.

೭. ಗ್ರಾಮ ಪಂಚಾಯತಿಯ ಚುನಾವಣೆಯಲ್ಲಿ ಆಯ್ಕೆಯಾದವರು ಸುಮಾರು ೫೦ ರಷ್ಟು ಅನಕ್ಷರಸ್ಥರಾಗಿದ್ದಾರೆ.

೮. ಅನಕ್ಷರಸ್ಥರು ಶಾಸನಸಭೆಗಳಲ್ಲಿ ಭಾಗವಹಿಸುವಾಗ ಅಕ್ಷರಸ್ಥರ ಸಮುದಾಯಗಳಿಂದ ಸಹಾಯ ಪಡೆದುಕೊಂಡು ಮಾತನಾಡುವುದು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ.

೯. ಮಹಿಳಾ ಸದಸ್ಯರ ಸ್ಥಾನದಲ್ಲಿ ಅವರ ಯಜಮಾನರು ಅಥವಾ ಮಕ್ಕಳು ಆಡಳಿತ ನಡೆಸುವುದು ಕಂಡುಬರುತ್ತದೆ.

೧೦. ಪರಿಶಿಷ್ಟ ವರ್ಗದ ಸದಸ್ಯರು ತಮ್ಮ ಬೇಡಿಕೆಗಳು ಈಡೇರದಿದ್ದರೆ ಪ್ರತಿಭಟನೆ ಮಾಡುವುದನ್ನು ರೂಢಿಸಿಕೊಂಡಿದ್ದಾರೆ.

೧೧. ಭ್ರಷ್ಟಾಚಾರ ಎನ್ನುವುದು ಯಾರನ್ನೂ ಬಿಟ್ಟಿಲ್ಲ. ಆಶ್ರಯ ಮನೆ, ಭಾಗ್ಯಜ್ಯೋತಿ ಮುಂತಾದ ಯೋಜನೆಗಳನ್ನು ಹಂಚುವಾಗ ಈ ಸದಸ್ಯರು ಸಹ ಫಲಾನುಭವಿಗಳಿಂದ ಹಣ ಕಿತ್ತುಕೊಳ್ಳುವುದು ಕಂಡುಬರುತ್ತದೆ.

೧೨. ರಾಜಕೀಯವಾಗಿ ಪ್ರೇರೇಪಿತನಾದ ಸಂಘರ್ಷಗಳು ಮತ್ತು ದ್ವೇಷಗಳು ಸದಾ ಹೊಗೆಯಾಡುತ್ತಿರುವುದನ್ನು ಪರಿಶಿಷ್ಟ ವರ್ಗಗಳ ಸದಸ್ಯರಲ್ಲಿಯೂ ಕಾಣಬಹುದಾಗಿದೆ.

೧೩. ಅವಶ್ಯ ಬಿದ್ದಾಗ ಪರಿಶಿಷ್ಟ ವರ್ಗದ ಸದಸ್ಯರ ಬೆಂಬಲಕ್ಕೆ ಪ್ರಬಲ ಕೋಮಿನ ಸದಸ್ಯರು ನಿಂತುಕೊಳ್ಳುವುದನ್ನು ಅಲ್ಲಲ್ಲಿ ಕಾಣುತ್ತೇವೆ.

೧೪. ಪರಿಶಿಷ್ಟ ವರ್ಗದ ಚುನಾಯಿತ ಸದಸ್ಯರು ಜೊತೆಗೆ ಇತರೆ ಸದಸ್ಯರು ಮೇಲ್ನೋಟಕ್ಕೆ ಸಹಕಾರವನ್ನು ತೋರಿಸುತ್ತಾರೆ.

೧೫. ಪರಿಶಿಷ್ಟ ವರ್ಗದ ಸದಸ್ಯರು ಸಹ ಇತರರಂತೆ ಚುನಾವಣೆಯಲ್ಲಿ ಆಸೆ ಆಮಿಷಗಳನ್ನು ಒಡ್ಡಿ ಆಯ್ಕೆಯಾಗಿರುವುದು ಕಂಡುಬರುತ್ತದೆ.

೧೬. ಪರಿಶಿಷ್ಟ ವರ್ಗದ ಗ್ರಾಮ ಪಂಚಾಯತಿ ಸದಸ್ಯರು ಅಲ್ಲಲ್ಲಿ ಆರ್ಥಿಕವಾಗಿ ಪ್ರಬಲರಾಗುತ್ತಿರುವುದು ಕಂಡುಬರುತ್ತದೆ.

೧೭. ಪರಿಶಿಷ್ಟ ವರ್ಗದ ಜನರಿಗಾಗಿಯೇ ಸರ್ಕಾರದಿಂದ ಬಿಡುಗಡೆಯಾದ ವಿಶೇಷ ಪ್ಯಾಕೇಜ್‌ಗಳನ್ನು ಬಳಸಿಕೊಳ್ಳುವಲ್ಲಿ ಯಾವ ರಾಜಿಗಳನ್ನು ಮಾಡಿಕೊಳ್ಳುವುದಿಲ್ಲ.

೧೮. ಗ್ರಾಮ ಪಂಚಾಯತಿಯಿಂದ ತಾಲೂಕ ಪಂಚಾಯತಿ, ಜಿಲ್ಲಾ ಪಂಚಾಯತಿಗೆ ಆಯ್ಕೆಯಾಗಿ ಹೆಚ್ಚಿನ ಕಾರ್ಯಗಳನ್ನು ಮಾಡಬೇಕೆಂಬ .ಉತ್ಸಾಹ ಅನೇಕ ಪರಿಶಿಷ್ಟ ಪಂಗಡದ ಸದಸ್ಯರಲ್ಲಿರುವುದು ಕಂಡುಬರುತ್ತದೆ.

ಅನುಬಂಧ

ಗ್ರಂಥ ಋಣ

ಸಮುದಾಯದ ತಿಳುವಳಿಕೆದಾರರ ವಿವರಗಳು

ನಕಾಶೆಗಳು

ಛಾಯಾಚಿತ್ರಗಳು

ಗ್ರಂಥಋಣ

೧. ಅಕ್ಕಮಹಾದೇವಿ (ಅನುವಾದ), "ಬುಡಕಟ್ಟು ನ್ಯಾಯ", ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು. ೧೯೮೪,

೨. ಈಶ್ವರಪ್ಪ ಎಂ.ಜಿ., ಮ್ಯಾಸಬೇಡರು, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೨.

೩. ಕಾಳೇಗೌಡ ನಾಗವಾರ ಮತ್ತು ಜೋರಲಿಂಗಯ್ಯ ಹಿ.ಚಿ., ಗಿರಿಜನ ಕಾವ್ಯ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೪. ಕಾಳೇಗೌಡ ನಾಗವಾರ, ಹುಚ್ಚಪ್ಪ ಮಾಸ್ತಾರ ಎನ್., ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ೨೦೦೦.

೫. ಕೇಶವನ್ ಪ್ರಸಾದ್ .ಕೆ. ಬುಡಕಟ್ಟು ವಿಸ್ಮಯ, ಅಭಿರುಚಿ ಪ್ರಕಾಶನ, ಸರಸ್ವತಿ ಪುರಂ, ಮೈಸೂರು, ೨೦೦೫.

೬. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ. ೨೦೦೦.

೭. ಗಂಗಾಧರ ದೈವಜ್ಞ, ಮಾಳಿಂಗರಾಯನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ. ೧೯೯೯.

೮. ಚಲುವರಾಜು, ಜುಂಜಪ್ಪ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ. ೧೯೯೭.

೯. ಚಂದ್ರಪೂಜಾರಿ ಎಂ., ಪರಿಸರ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೮.

೧೦. ನಾಯರ್ ಎಸ್.ಆರ್., ಉತ್ತರ ಕನ್ನಡ ಜಿಲ್ಲೆಯ ಸಿದ್ಧಿ ಜನಾಂಗ, ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ. ೧೯೯೨.

೧೧. ನಾಗೇಗೌಡ ಹೆಚ್.ಎಲ್., ವೆರಿಯರ ಎಲ್ವಿನ್‌ರ ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು. ೨೦೦೪.

೧೨. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ. ೨೦೦೦.

೧೩. ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ. ೨೦೦೪.

೧೪. ಪ್ರಶಾಂತ ಹೆಚ್.ಡಿ., ಸಂ., ಕರ್ನಾಟಕ ಜನಸಮುದಾಯ ಕೋಶ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ. ೨೦೦೦.

೧೫. ಪಾಟೀಲ ಜೆ.ಎಸ್., ಭಾರತದ ಸಂವಿಧಾನ, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ೨೦೦೭.

೧೬. ಪಾಟೀಲ ಎಂ.ಎಸ್. ಮಗಷಸದತ್ತು ಪಾಟೀಲ್.ಕೆ.ಡಿ., ರಾಜ್ಯಶಾಸ್ತ್ರ, ಭಾರತ ಬುಕ್ ಡಿಪೋ ಮತ್ತು ಪ್ರಕಾಶನ, ೧೯೮೭.

೧೭. ಭಗವಾನ್ ಶರಣ ಉಪಾಧ್ಯಾಯ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೦೪.

೧೮. ಭುವನೇಶ್ವರ ಪ್ರಸಾದ, ಭಾರತದ ಸಂವಿಧಾನ, ಪದ್ಮ ಪ್ರಕಾಶ, ೧೯೯೮.

೧೯. ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ. ೨೦೦೦.

೨೦. ಬೋರಲಿಂಗಯ್ಯ ಹಿ.ಚಿ., ಕಾಡು ಕಾಂಕ್ರೇಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡ್, ಸಾಗರ. ೧೯೯೫.

೨೧. ಬೋರಲಿಂಗಯ್ಯ ಹಿ.ಚಿ., ಗಿರಿಜನ ನಾಡಿಗೆ ಪ್ರಯಾಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳುರು. ೧೯೯೧.

೨೨. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯.

೨೩. ಮಧು ಗುಂಡ್ಲುಪೇಟೆ, ಕರ್ನಾಟಕ ಬುಡಕಟ್ಟುಗಳ ಜನಾಂಗಗಳ ಅಭಿವೃದ್ಧಿ, ಅಕ್ಷತ ಪ್ರಕಾಶನ, ಸಿದ್ದಾರ್ಥ ನಗರ, ಮೈಸೂರು. ೨೦೦೨.

೨೪. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೨.

೨೫. ರಾಜಶೇಖರ ಹೆಚ್.ಎಂ., ಭಾರತ ಸರ್ಕಾರ ಮತ್ತು ರಾಜಕೀಯ, ಕಿರಣ ಪ್ರಕಾಶನ, ೧೯೯೯.

೨೬. ರಾಮಕೃಷ್ಣ ಹೆಚ್.ಟಿ., ರಾಜ್ಯಶಾಸ್ತ್ರ, ಲಲಿತ ಪ್ರಕಾಶನ, ತಿಪಟೂರು. ೧೯೯೨.

೨೭. ರಾಮಕೃಷ್ಣ ಹೆಚ್.ಟಿ. ಮತ್ತು ರಾಜು ಎಂ.ಆರ್., ರಾಜಕೀಯ ಸಿದ್ದಾಂತ ಹಾಗೂ ಚಿಂತಕರು, ಲಲತಿ ಪ್ರಕಾಶನ, ಮೈಸೂರು. ೨೦೦೩.

೨೮. ಲಕ್ಕಪ್ಪಗೌಡ ಹೆಚ್.ಜೆ. ಸಂ., ಕರ್ನಾಟಕ ಬುಡಕಟ್ಟು ಸಂಪುಟ ೧.೨, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು. ೧೯೯೩.

೨೯. ಸವಿತಾ ನಾಯಕ, ಬುಡಕಟ್ಟು ಮಹಿಳೆಯರ ಪ್ರದರ್ಶನ ಕಲೆ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾಲಯ, ಹಂಪಿ.

೩೦. ಸುರೇಶ್ .ಕೆ.ಜೆ., ಆಧುನಿಕ ಸರ್ಕಾರಗಳು, ಲಕ್ಷ್ಮಿ ಪ್ರಿಂಟಿಂಗ್ & ಪಬ್ಲಿಷಿಂಗ್ ಹೌಸ್, ೧೯೯೬.

೩೧. ಸುರೇಶ್ .ಜೆ. ರಾಜ್ಯಾಶಾಸ್ತ್ರ, ಚೇತನ್ ಬುಕ್‌ಹೌಸ್, ೧೯೯೫.

೩೨. ಹುಚ್ಚಪ್ಪ ಮಾಸ್ತಾರ್.ಎನ್., ಕಾಳೇಗೌಡ ನಾಗವಾರ್, ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ೨೦೦೦.

ಸಮುದಾಯದ ತಿಳುವಳಿಕೆದಾರರ ವಿವರಗಳು

ಕ್ರ.ಸಂ.	ಹೆಸರು	ಸ್ಥಾನ	ವಿಳಾಸ
೧	ಹನುಮಂತಯ್ಯ ಭೀಮಪ್ಪ	ಅಧ್ಯಕ್ಷ	ಸಾ॥ ಮರಳಿ, ಪೊ॥ ಮರಳಿ, ತಾ॥ ಗಂಗಾವತಿ. ಜಿ॥ ಕೊಪ್ಪಳ
೨	ಬಿ.ನೆಟ್ಟಕಲ್ಲಪ್ಪ ಹನುಮಪ್ಪ	ಸದಸ್ಯರು	ಸಾ॥ & ಪೊ॥ ಶ್ರೀರಾಮನಗರ ತಾ॥ ಗಂಗಾವತಿ. ಜಿ॥ ಕೊಪ್ಪಳ
೩	ಹನುಮಮ್ಮ ರಾಜಪ್ಪ	ಸದಸ್ಯರು	ಸಾ॥ & ಪೊ॥ ವೆಂಕಟಗಿರಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೪	ಹನುಮಮ್ಮ ಗಂ. ಪರಸಪ್ಪ	ಅಧ್ಯಕ್ಷೆ	ಸಾ॥ & ಪೊ॥ ವೆಂಕಟಗಿರಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೫	ನಿಂಗಪ್ಪ ಭೋಜಪ್ಪ	ಸದಸ್ಯರು	ಸಾ॥ & ಪೊ॥ ಉಡುಮಕಲ್ ತಾ॥ ಗಂಗಾವತಿ. ಜಿ॥ ಕೊಪ್ಪಳ
೬	ರಾಮಲಿಂಗಪ್ಪ ತಂ. ಹನುಮಯ್ಯ ಗಟಾಲಿ	ಸದಸ್ಯರು	ಸಾ॥ ವಿಠಲಾಪುರ ಪೊ॥ ಆಗೋಲಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೭	ಅಂಜನಮ್ಮ ಗಂ. ಗೋವಿಂದಪ್ಪ	ಉಪಾಧ್ಯಕ್ಷೆ	ಸಾ॥ & ಪೊ॥ ಡಣಾಪುರ ತಾ॥ ಗಂಗಾವತಿ. ಜಿ॥ ಕೊಪ್ಪಳ
೮	ಲಕ್ಕಮ್ಮ ಹನುಮಂತಪ್ಪ	ಅಧ್ಯಕ್ಷೆ	ಸಾ॥ & ಪೊ॥ ಕಾರಟಗಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೯	ಮುದ್ದಾನಮ್ಮ ತಂ. ನಿಂಗಪ್ಪ	ಅಧ್ಯಕ್ಷೆ	ಸಾ॥ & ಪೊ॥ ಚಿಕ್ಕಬೆಣಕಲ್ ತಾ॥ ಗಂಗಾವತಿ. ಜಿ॥ ಕೊಪ್ಪಳ
೧೦	ದುರುಣಗೇಣಿ ವೆಂಕಟೇಶ ಈರಣ್ಣ	ಸದಸ್ಯರು	ಸಾ॥ & ಪೊ॥ ಆನೆಗೊಂದಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೧೧	ರಾಮಣ್ಣ ಮಾರೆಪ್ಪ	ಸದಸ್ಯರು	ಸಾ॥ ಕವಳಕಲ್ ಕ್ಯಾಂಪ್ ಪೊ॥ ಬಸಾಪಟ್ಟಣ ತಾ॥ ಗಂಗಾವತಿ.
೧೨	ಈರಣ್ಣ ಪಕೀರಪ್ಪ ಹೇರೂರು	ಸದಸ್ಯರು	ಸಾ॥ & ಪೊ॥ ಹೇರೂರು ತಾ॥ ಗಂಗಾವತಿ. ಜಿ॥ ಕೊಪ್ಪಳ

೧೩	ಹುಲಿಗೆಮ್ಮ ಮಾರೆಪ್ಪ	ಸದಸ್ಯರು	ಸಾ॥ ಭಟ್ಟರಹಂಚಿನಾಳ ಪೊ॥ ಹೆರೂರು ತಾ॥ ಗಂಗಾವತಿ. ಜಿ॥ ಕೊಪ್ಪಳ
೧೪	ಪಾರ್ವತಮ್ಮ ಪಂಪಾಪತಿ	ಸದಸ್ಯರು	ಸಾ॥ & ಪೊ॥ ಕೆಸರಟ್ಟಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೧೫	ವೀರಮ್ಮ ಬಸವರಾಜ ಪೂಜಾರಿ	ಸದಸ್ಯರು	ಸಾ॥ ಮಲ್ಲಿಗೆವಾಡ ಪೊ॥ ಹಿರೇಖೇಡ ತಾ॥ ಗಂಗಾವತಿ. ಜಿ॥ ಕೊಪ್ಪಳ
೧೬	ಪಾಮಪ್ಪ ಭೀಮಪ್ಪ	ಸದಸ್ಯರು	ಸಾ॥ ಗೋಡಿನಾಳ ಪೊ॥ ಹಿರೇಖೇಡ ತಾ॥ ಗಂಗಾವತಿ. ಜಿ॥ ಕೊಪ್ಪಳ
೧೭	ನರಸಿಂಹ ಸಂಜೀವಪ್ಪ	ಸದಸ್ಯರು	ಸಾ॥ ಲಕ್ಷ್ಮಿಕ್ಯಾಂಪ್ ಪೊ॥ ಗುಂಡೂರು ತಾ॥ ಗಂಗಾವತಿ. ಜಿ॥ ಕೊಪ್ಪಳ
೧೮	ಹುಲಿಗೆಮ್ಮ ವೀರೇಶ	ಸದಸ್ಯರು	ಸಾ॥ & ಪೊ॥ ಮರ್ಲಾನಹಳ್ಳಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೧೯	ಯಂಕಪ್ಪ ಪರಸಪ್ಪ	ಸದಸ್ಯರು	ಸಾ॥ ಜೂರಟಗಿ ಪೊ॥ ಮರ್ಲಾನಹಳ್ಳಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೨೦	ವಿರುಪಣ್ಣ ತಂ. ರಾಯಪ್ಪ	ಸದಸ್ಯರು	ಸಾ॥ & .ಪೊ॥ ಹುಳ್ಕಿಹಾಳ ತಾ॥ ಗಂಗಾವತಿ. ಜಿ॥ ಕೊಪ್ಪಳ
೨೧	ಶ್ರೀಮತಿ ಜಂಬಮ್ಮ ಗಂ. ಸಣ್ಣಹನುಮನಗೌಡ	ಸದಸ್ಯರು	ಸಾ॥ & ಪೊ॥ ತೊಂಡಿಹಾಳ ತಾ॥ ಗಂಗಾವತಿ. ಜಿ॥ ಕೊಪ್ಪಳ
೨೨	ಶ್ರೀಮತಿ ಶಿವಕುಮಾರಿ ಗಂ. ಯಮುನಪ್ಪ	ಸದಸ್ಯರು	ಸಾ॥ & ಪೊ॥ ತೊಂಡಿಹಾಳ ತಾ॥ ಗಂಗಾವತಿ. ಜಿ॥ ಕೊಪ್ಪಳ
೨೩	ಬಿ.ಕಂಪ್ಲಪ್ಪ ಬಸಣ್ಣ ನಾಯಕ	ಸದಸ್ಯರು	ಸಾ॥ & ಪೊ॥ ಕಾರಟಗಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೨೪	ಗಂಗಮ್ಮ ತಿಮ್ಮಣ್ಣ	ಸದಸ್ಯರು	ಸಾ॥ & ಪೊ॥ ಕಾರಟಗಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೨೫	ಪ್ರಭುರಾಜ ರೆಡ್ಡೆಪ್ಪ ನಾಯಕ	ಸದಸ್ಯರು	ಸಾ॥ & ಪೊ॥ ಕಾರಟಗಿ ತಾ॥ ಗಂಗಾವತಿ. ಜಿ॥ ಕೊಪ್ಪಳ

೨೬	ನಿಂಗಪ್ಪ ರಾಮಣ್ಣ	ಸದಸ್ಯರು	ಸಾ॥ ಚಳ್ಳೂರುಕ್ಯಾಂಪ್ ಪೊ॥ ಚಳ್ಳೂರು ತಾ॥ ಗಂಗಾವತಿ. ಜಿ॥ ಕೊಪ್ಪಳ
೨೭	ದುರುಗಮ್ಮ ಬಸವರಾಜ	ಸದಸ್ಯರು	ಸಾ॥ & ಪೊ॥ ಚಳ್ಳೂರು ತಾ॥ ಗಂಗಾವತಿ. ಜಿ॥ ಕೊಪ್ಪಳ
೨೮	ಬೆಟ್ಟಪ್ಪ ತಂ. ಬಸಪ್ಪ	ಸದಸ್ಯರು	ಸಾ॥ & ಪೊ॥ ಜೀರ್ಾಳ ತಾ॥ ಗಂಗಾವತಿ. ಜಿ॥ ಕೊಪ್ಪಳ
೨೯	ನಾಗಪ್ಪ ತಂ. ಲಕ್ಷ್ಮಪ್ಪ	ಸದಸ್ಯರು	ಸಾ॥ & ಪೊ॥ ಚಿರ್ಚನಗುಡ್ಡ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೦	ಹೊನ್ನಮ್ಮ ಕನಕರಾಯ	ಉಪಾಧ್ಯಕ್ಷೆ	ಸಾ॥ & ಪೊ॥ ಕನಕಗಿರಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೧	ನಾಗಪ್ಪ ಹನುಮಂತಪ್ಪ ಹಂಚಿನಾಳ	ಸದಸ್ಯರು	ಸಾ॥ & ಪೊ॥ ಕನಕಗಿರಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೨	ಶಿವಪ್ಪ ತಿಪ್ಪಯ್ಯ ಆದಾಪುರ	ಸದಸ್ಯರು	ಸಾ॥ ಆದಾಪುರ ಪೊ॥ ನವಲಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೩	ಹೊಳೆಯಮ್ಮ ಹನುಮಂತಪ್ಪ ನಾಯಕ	ಸದಸ್ಯರು	ಸಾ॥ & ಪೊ॥ ಗೌರಿಪುರ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೪	ಕುಂಟೆಪ್ಪ ಗಿಡ್ಡಪ್ಪ ಕುರಿ	ಸದಸ್ಯರು	ಸಾ॥ ಹುಲುಸನಹಟ್ಟಿ ಪೊ॥ ಗೌರಿಪುರ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೫	ವೆಂಕೋಬ ಸಗರಪ್ಪ	ಸದಸ್ಯರು	ಸಾ॥ ಲಾಯದುಣಸಿ ಪೊ॥ ಹುಲಿಹೈದರ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೬	ಭೀಮಪ್ಪ ಹನುಮಪ್ಪ	ಸದಸ್ಯರು	ಸಾ॥ ಬೈಲಕ್ಕಂಪುರ ಪೊ॥ ಹುಲಿಹೈದರ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೭	ರಾಮಣ್ಣ ಹನುಮಂತಪ್ಪ	ಸದಸ್ಯರು	ಸಾ॥ & ಪೊ॥ ಹುಲಿಹೈದರ ತಾ॥ ಗಂಗಾವತಿ. ಜಿ॥ ಕೊಪ್ಪಳ
೩೮	ಅಡಿವೆಪ್ಪ ಬಾಲಪ್ಪ	ಸದಸ್ಯರು	ಸಾ॥ & ಪೊ॥ ಕರಡೋಣ ತಾ॥ ಗಂಗಾವತಿ. ಜಿ॥ ಕೊಪ್ಪಳ

೩೯	ಮಲ್ಲಮ್ಮ ಯಂಕನಗೌಡ	ಸದಸ್ಯರು	ಸಾ॥ & ಪೊ॥ ಗುನ್ನಟ್ಟಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೦	ಯಂಕಪ್ಪ ಕನಕಪ್ಪ	ಸದಸ್ಯರು	ಸಾ॥ & ಪೊ॥ ವಡಕಿ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೧	ನಾಗಪ್ಪ ಶರಣಪ್ಪ	ಸದಸ್ಯರು	ಸಾ॥ & ಪೊ॥ ಬೇವಿನಾಳ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೨	ಸಾವಿತ್ರಮ್ಮ ಲಚಮಪ್ಪ	ಸದಸ್ಯರು	ಸಾ॥ & ಪೊ॥ ಮೈಲಾಪುರ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೩	ಹನುಮೇಶಪ್ಪ ಲಚಮಪ್ಪ	ಸದಸ್ಯರು	ಸಾ॥ & ಪೊ॥ ಮುಸಲಾಪುರ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೪	ಯಮುನಮ್ಮ ಗಂ. ದುರುಗಪ್ಪ	ಸದಸ್ಯರು	ಸಾ॥ & ಪೊ॥ ಮುಸ್ಟೂರು ತಾ॥ ಗಂಗಾವತಿ. ಜಿ॥ ಕೊಪ್ಪಳ
೪೫	ಲಲಿತಮ್ಮ ಹನುಮಂತಪ್ಪ	ಸದಸ್ಯರು	ಸಾ॥ & ಪೊ॥ ಸಿದ್ದಾಪುರ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೬	ಹನುಮವ್ವ ಶಂಕ್ರಪ್ಪ	ಸದಸ್ಯರು	ಸಾ॥ & ಪೊ॥ ಸುಳೇಕಲ್ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೭	ಪಕೀರಪ್ಪ ಉಡಚಪ್ಪ	ಸದಸ್ಯರು	ಸಾ॥ & ಪೊ॥ ಚಿಕ್ಕಜಂತಕಲ್ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೮	ನಾಗಪ್ಪ ಶರಣಪ್ಪ	ಉಪಾಧ್ಯಕ್ಷರು	ಸಾ॥ & ಪೊ॥ ಬೇವಿನಾಳ ತಾ॥ ಗಂಗಾವತಿ. ಜಿ॥ ಕೊಪ್ಪಳ
೪೯	ಗೌರಮ್ಮ ಶಂಕ್ರಪ್ಪ	ಉಪಾಧ್ಯಕ್ಷರು	ಸಾ॥ & ಪೊ॥ ಗುಂಡೂರು ತಾ॥ ಗಂಗಾವತಿ. ಜಿ॥ ಕೊಪ್ಪಳ
೫೦	ಮುದ್ದಾನಮ್ಮ ತಂ. ನಿಂಗಪ್ಪ	ಅಧ್ಯಕ್ಷೆ	ಸಾ॥ & ಪೊ॥ ಚಿಕ್ಕಬೆಣಕಲ್ ತಾ॥ ಗಂಗಾವತಿ. ಜಿ॥ ಕೊಪ್ಪಳ
೫೧	ಭೀಮಪ್ಪ ಪಕೀರಪ್ಪ ಹಂದ್ಯಾಳ	ಸದಸ್ಯರು	ಸಾ॥ & ಪೊ॥ ಬೂದಗುಂಪ ತಾ॥ ಗಂಗಾವತಿ. ಜಿ॥ ಕೊಪ್ಪಳ

ನಕಾಶೆಗಳು

ಗಂಗಾವತಿ ತಾಲೂಕಿನ ನಕಾಶೆ





ಕುಡಿಯುವ ನೀರಿನ ಸೌಲಭ್ಯ



ಹಿಂದುಳಿದ ವರ್ಗದವರಿಂದ ಪಂಚಾಯತಿಯ ಎದುರು ಧರಣಿ



ಗ್ರಾಮಸ್ಥರಿಂದಲೇ ಗ್ರಾಮದ ಸ್ವಚ್ಛತಾ ಕಾರ್ಯಕ್ರಮ



ನೀರಿಗಾಗಿ ಗ್ರಾಮ ಪಂಚಾಯತಿ ಮುಂದೆ ಖಾಲಿ ಕೊಡಗಳೊಂದಿಗೆ ಪ್ರತಿಭಟನೆ



ಅಸಮರ್ಪಕವಾದ ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿ



ಸಾಂಸ್ಕೃತಿಕ ಆಚರಣೆಯಲ್ಲಿ ಸಮಸ್ತ ನಾಗರಿಕರು



ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಬಾಂಡ್ ವಿತರಣೆ



ನಗರಸಭೆಯ ಸಾಮಾನ್ಯ ಸಭೆ





ಗ್ರಾಮ ಪಂಚಾಯತಿ ನೌಕರರ ಧರಣಿ



ಗ್ರಾಮೀಣ ಪ್ರದೇಶದ ಕರಿ ಹರಿಯುವ ಆಚರಣೆಯ ದೃಶ್ಯ



ಶೌಚಾಲಯ ನಿರ್ಮಾಣಕ್ಕಾಗಿ ನಗರಸಭೆಗೆ ಮುತ್ತಿಗೆ



ಹೇಮಗುಡ್ಡದ ದಸರಾ ಜಂಬೂ ಸವಾರಿಯಲ್ಲಿ ಎಲ್ಲಾ ಸಮುದಾಯದವರ ಪ್ರಾತಿನಿಧ್ಯ



ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಕಲ್ಪಿಸುವ ಸಲುವಾಗಿ ಪ್ರತಿಭಟನೆ



ಂದುಳಿದ ವರ್ಗದ ಸಮುದಾಯದವರಿಗೆ ಸೂಕ್ತ ಸ್ಥಾನಮಾನವನ್ನು ಕಲ್ಪಿಸುವುದರ ಸಲುವಾಗಿ ಪ್ರತಿಭಟನೆ



ಮುಷ್ಟೂರು ಗ್ರಾಮ ಪಂಚಾಯತಿ ವ್ಯಾ್ತಯ ನೆರೆಹಾವಳಿ ವೀಕ್ಷಣೆ



ಸ್ಥಳೀಯ ಶಾಸಕರಿಂದ ಕಾಲುವೆ ಕಾಮಗಾರಿಯ ವೀಕ್ಷಣೆ



ಸ್ತ್ರೀಶಕ್ತಿ ಯೋಜನೆಯ ತರಬೇತಿ



ಚುನಾವಣೆಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ



ಪಂಚಾಯತಿಯ ವೈಫಲ್ಯವನ್ನು ಖಂಡಿಸಿ ಗ್ರಾಮಸ್ಥರಿಂದ ಬೀಗಮುದ್ರೆ



ಪಂಚಾಯತಿಯ ವೈಫಲ್ಯ ಖಂಡಿಸಿ ವಿನೂತನ ಪ್ರತಿಭಟನೆ



ತಾಲೂಕ ಪಂಚಾಯತ್ ಗೃಹೋಪಕರಣಗಳ ಜಪ್ತಿಯಾದ ನಂತರದ ಕಛೇರಿಯ ದೃಶ್ಯ



ಗ್ರಾಮ ಪಂಚಾಯತ್ ಸದಸ್ಯರಿಂದಲೇ ಸರ್ಕಾರದ ಕ್ರಮವನ್ನು ಖಂಡಿಸಿ ಗ್ರಾ.ಪಂ.ಕಛೇರಿಗೆ ಬೀಗಮುದ್ರೆ



ಅವ್ಯವಸ್ಥಿತವಾದ ನೀರಿನ ಪೂರೈಕೆ